RNI:KARKAN/2021/85750 KPL/L/RNP/02/24-26

# ಕರುನಾಡ ಕಂದ

Volume 4 ಸಂಪುಟ 4 | Issue 19 ಸಂಚಿಕೆ 19 | Date 16-08-2025 | Page 16 ಪುಟ 16 | ಬೆಲೆ: 20/- | FORTNIGHTLY ಪಾಕ್ಷಿಕ ಪತ್ರಿಕೆ

ಸಂಪಾದಕರು: ಬಸವರಾಜ ಬಳಿಗಾರ
ಮೋ.ನಂ: 9986366909

## ಕನ್ನಡಮ್ಮನ ಹೆಮ್ಮೆಯ ಸುಪುತ್ರ ಅಪರೂಪದ ವಿಶ್ವ ಪತ್ರಿಕಾ ಸಂಗ್ರಹಕಾರ ಶ್ರೀ ಕೆ.ಎನ್.ಕಲ್ಯಾಣ್ ಕುಮಾರ್





## ತೇಪೆ ಕೆಲಸದಲ್ಲೇ ತೃಪ್ತಿ :ಗಡಿ ಭಾಗದ ರಸ್ತೆಗಳು ಅದೋಗತಿ

## ನಿರ್ಮಾಣಗೊಂಡ ಒಂದೇ ತಿಂಗಳಲ್ಲಿ ಸಿ.ಸಿ ರಸ್ತೆ ಬಿರುಕು : ಶುರುವಾಯಿತು ದುರಸ್ತಿ ಕಾರ್ಯ

## ಸೋಲನ್ನೇ ಸೋಲಿಸಿದ ಸಾಧಕ

### ಸಹ್ಯಾದ್ರಿ ಸಂಸ್ಥೆಗೆ ಈ ಬಾರಿಯೂ ನಿರೀಕ್ಷೆಗೂ ಮೀರಿ ರೂ. 11 ಕೋಟಿ ಅಧಿಕ ಲಾಭ

## ವಿಜಯದೇವ್ ನಾಯಕತ್ವಕ್ಕೆ ಮತ್ತೊಂದು ಗರಿಮೆ..

## ಸನ್ಮಾನದ ಮಾನ ಕಳೆಯದಿರೋಣ!

## ಆನೆಗಳಿಲ್ಲದೆ ಮೈಸೂರು ದಸರಾ ಅಪೂರ್ಣ

### ರೈತರ ಮೇಲೆ ಕನಿಕರವಿಲ್ಲದ ಕಾರ್ಯಾಂಗದ ಅಟ್ಟಹಾಸ,
### ಕಣ್ಣು ಮುಚ್ಚಿ ಕುಳಿತ ಶಾಸಕಾಂಗ
### ನ್ಯಾಯಾಂಗದ ಮೇಲಿನ ಭರವಸೆಯಲ್ಲಿ ಬದುಕು-ಅಂಬಾರಪುರ ದುರಂತ.

## ವಿಷ್ಣುವರ್ಧನ್ ಸಮಾಧಿ ನೆಲಸಮ: ರಾಘವೇಂದ್ರ ಪುಟ್ಟಿ ಖಂಡನೆ

ಕರುನಾಡ ಕಂದ
ಸಂಪುಟ 04 । ಸಂಚಿಕೆ 19
ದಿನಾಂಕ: 16-08-2025 ಪುಟಗಳು:16

# ಲೋಕಾಯುಕ್ತ ಅಧಿಕಾರಿಗಳ ಅನಿರೀಕ್ಷಿತ ಭೇಟಿ

**ಇಂಡಿ:** ಲೋಕಾಯುಕ್ತ ಇಲಾಖೆಯ ಅಧಿಕಾರಿಗಳು 11-08-2025 ರ ಸೋಮವಾರ ಬೆಳ್ಳಂ-ಬೆಳಿಗ್ಗೆ ಇಂಡಿ ನಗರದ ವಿವಿಧ ಇಲಾಖೆಗಳ ಮೇಲೆ ದಾಳಿ ನಡೆಸಿ ಕಡತಗಳನ್ನು ಪರಿಶೀಲಿಸಿ, ಸಾರ್ವಜನಿಕರ ಅಹವಾಲು ಸ್ವೀಕರಿಸಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಘಟನೆ ನಡೆಯಿತು.

ಇಂಡಿ ನಗರದ ಮಿನಿ ವಿಧಾನಸೌಧದಲ್ಲಿರುವ ತಹಶೀಲ್ದಾರ ಕಚೇರಿ, ಉಪ ನೋಂದಣಿ ಕಾರ್ಯಾಲಯ, ಎಡಿ-ಎಲ್ಆರ್ ಕಚೇರಿಗಳ ಮೇಲೆ ದಾಳಿ ಮಾಡಿದ ಲೋಕಾಯುಕ್ತ ಅಧಿಕಾರಿಗಳು ಕಡತಗಳನ್ನು ಪರಿಶೀಲಿಸಿ, ಬಹು ದಿನಗಳಿಂದ ಬಾಕಿ ಉಳಿದುಕೊಂಡ ಪ್ರಕರಣಗಳ ಮಾಹಿತಿ ಕಲೆ ಹಾಕಿ, ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯಲ್ಲಿ ಕಡತಗಳನ್ನು ಪರಿಶೀಲಿಸಿದರು, ನಂತರ ಇಂಡಿ ಪುರಸಭೆ ಕಾರ್ಯಾಲಯಕ್ಕೆ ಭೇಟಿ ನೀಡಿ ಕಡತಗಳನ್ನು ಪರಿಶೀಲಿಸಿ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿ ಲೋಕಾಯುಕ್ತ ಅಧಿಕಾರಿಗಳು ಅವರ ಸಮಸ್ಯೆಗಳ ಬಗ್ಗೆ ಸ್ಥಳದಲ್ಲಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಸಮಸ್ಯೆಗಳ ಪರಿಹಾರಕ್ಕೆ ಸೂಚಿಸಿದರು.



ಈ ದಾಳಿಯಲ್ಲಿ ಕರ್ನಾಟಕ ರಾಜ್ಯ ಲೋಕಾಯುಕ್ತ ನ್ಯಾಯಮೂರ್ತಿ ಎ ವಿ ಪಾಟೀಲ, ಶಿವರಾಜ್ ಪಾಟೀಲ್, ಆನಂದ ಪಡಶೆಟ್ಟಿ ಹಾಗೂ ಶರಣಬಸು, ರವಿ ಪುರುಶೊತ್ತಮ, ಶಿವರಾಜ್ ಸ್ವಾಮಿ ಹಾಗೂ ಅಜಿತ ಸೇರಿದಂತೆ ಸಿಬ್ಬಂದಿ ಈ ದಾಳಿಯಲ್ಲಿ ಪಾಲ್ಗೊಂಡಿದ್ದರು.

ವರದಿ. ಅರವಿಂದ ಕಾಂಬಳೆ






















ಕರುನಾಡ ಕಂದ
ಸಂಪುಟ 04 । ಸಂಚಿಕೆ 19
ದಿನಾಂಕ: 16-08-2025 ಪುಟಗಳು:16

# ಅಸೂಯೆ, ಅಹಂಕಾರ ತ್ಯಜಿಸಿ ಸಾಮಾಜಿಕ ಜಾಗೃತಿ ಕಾರ್ಯರೂಪಕ್ಕೆ ಬರುವುದು ಬಹಳ ಅಗತ್ಯವಿದೆ – ಕೊಡಕ್ಕಲ್ ಶಿವಪ್ರಸಾದ್






**ಬೆಂಗಳೂರು:** ಇಂದು ಸಾಮಾಜಿಕ ಜಾಗೃತಿ ಕೇವಲ ಕಾಗದದಲ್ಲಿ ಮಾತ್ರ ಪ್ರಚಲಿತವಿದೆ, ಇದನ್ನು ಕಾರ್ಯರೂಪಕ್ಕೆ ತರುವಲ್ಲಿ ಅನೇಕ ಅಡೆತಡೆಗಳನ್ನು ಎದುರಿಸಬೇಕಾಗುತ್ತದೆ, ಅನೇಕ ವಿಘ್ನಗಳು ಎದುರಾಗುತ್ತವೆ, ಅಸೂಯೆ, ಅಹಂಕಾರಗಳನ್ನು ನಮ್ಮ ಮನದಿಂದ ಅಳಿಸಬೇಕಾಗಿರುವುದು ಇಂದಿನ ಕಾಲಘಟ್ಟದಲ್ಲಿ ಜರೂರು ಸ್ಥಾಪಿಸಬೇಕಾದ ವಿಷಯವಾಗಿದೆ, ಸಮಾಜದಲ್ಲಿ ತಮ್ಮ ಅಸ್ತಿತ್ವವನ್ನು ತೋರಿಸಲು ಮತ್ತು ತಮ್ಮಲ್ಲಿ ಅಡಗಿರುವ ಸಾಮರ್ಥ್ಯವನ್ನು ಎತ್ತಿ ತೋರಿಸಲು ವಿಕಲಚೇತನ ವರ್ಗವು ನಿರಂತರವಾಗಿ ಶ್ರಮಿಸುತ್ತಾ ಇದೆ, ಅವರ ಸಮಸ್ಯೆ ಪರಿಹಾರಕ್ಕಾಗಿ ಎಲ್ಲರ ಬೆಂಬಲ ನಿರೀಕ್ಷಿಸಿದ್ದೇನೆ ಎಂದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಇಂಡಿಯನ್ ದಿವ್ಯಾಂಗ ಎಂಪವರ್ಮೆಂಟ್ ಅಧ್ಯಕ್ಷ ಶ್ರೀ ಕೊಡಕ್ಕಲ್ ಶಿವಪ್ರಸಾದ್ ನುಡಿದರು. ಅವರು ಇತ್ತೀಚಿಗೆ ಬೆಂಗಳೂರಿನ ಲೆಕ್ಕಾಧಿಕಾರಿಗಳ ಸಂಘದ ಭವನದಲ್ಲಿ ಆಯೋಜಿಸಿದ ಆರೋಗ್ಯ ಸಲಹೆ, ಸನ್ಮಾನ, ಸಂಗೀತ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ವಿಕಲಚೇತನರ ಏಳಿಗೆಗಾಗಿ, ಸಾವಿರಾರು ಮಂದಿ ವಿಕಲಚೇತನರಿಗೆ ವಿವಿಧ ವಿಷಯಗಳ ಮೇಲೆ ಮಾರ್ಗದರ್ಶನ ಮಾಡಿದ್ದಕ್ಕೆ ಹೆಮ್ಮೆ ಇದೆ ,ಅಲ್ಲದೆ ಸದಾ ವ್ಹೀಲ್ ಚೇರ್ ಮೇಲೆ ಕುಳಿತು ಇಂಥ ಸಂಘಟನೆಯನ್ನು ಮುನ್ನಡೆಸಿದ ಶ್ರೀಮತಿ ಲಕ್ಷ್ಮಿ ಆರ್. ನಿಜಾಮುದ್ದೀನ್, ಶ್ರೀಮತಿ ಕೆ. ಎಸ್. ನಾಗರತ್ನ ಹಾಗೂ ಅವರ ಪತ್ನಿಯನ್ನು ಉದಾಹರಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ರಾಜೀವ ಗಾಂಧಿ ವಿಜ್ಞಾನ ವಿಶ್ವವಿದ್ಯಾನಿಲಯದ ಉಪ ಕುಲಸಚಿವರಾದ ಡಾಕ್ಟರ್ ದೀಪಾ ವಿ. ಅವರು ಮಾತನಾಡುತ್ತಾ ನಮ್ಮ ಬಾಯಿ ನಮ್ಮ ದೇಹದ ಬಾಗಿಲು, ಬಾಯಿ–ದೇಹದ ಸಂಪರ್ಕ ಹಾಗೂ ಅದರ ಮಹತ್ವ, ಹಲ್ಲಿನ ಮಾಂಸಕೋಶಗಳ (ಗಮ್) ರೋಗದಿಂದ ಉಂಟಾಗುವ ಗಂಭೀರ ಆರೋಗ್ಯ ಅಪಾಯಗಳು, ಬಾಯಿ ಆರೈಕೆ ವಿಧಾನಗಳು, ಆರೋಗ್ಯಕರ ಹಲ್ಲು, ಆರೋಗ್ಯಕರ ದೇಹ ಕುರಿತು ಮನೋಜ್ಞವಾಗಿ ತಿಳಿಸಿ ಸಭಿಕರ ಅನೇಕ ಸಂದೇಹಗಳಿಗೆ ಸಮಾಧಾನ ನೀಡಿದರು.

ಕಾರ್ಯಕ್ರಮದಲ್ಲಿ 83 ರ ಹರೆಯದ 400 ಕ್ಕೂ ಹೆಚ್ಚು ಕೃತಿ ರಚಿಸಿದ, ಜಾನಪದ ವಿದ್ವಾಂಸ, ಆಕಾಶವಾಣಿ ನಿವೃತ್ತ ಕಾರ್ಯ ನಿರ್ವಹಣಾಧಿಕಾರಿಯಾದ ಡಾ. ಬಿ ಸಿದ್ದಲಿಂಗಸ್ವಾಮಿ ಹಾಗೂ 300 ಕ್ಕೂ ಹೆಚ್ಚು ಕೃತಿ ರಚಿಸಿದ/ ಸಂಪಾದಿಸಿದ ಕನ್ನಡ–ಕೊಂಕಣ ಸೇತುವೆ, ಲೋಕಮಿತ್ರ ಶಾ. ಮಂ. ಕೃಷ್ಣರಾಯ ಅವರನ್ನು ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿದ ನಂತರ ಶಾ. ಮಂ. ಕೃಷ್ಣರಾಯ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಯಾವುದೇ ವಿಶ್ವವಿದ್ಯಾನಿಲಯ, ಪ್ರಾಧಿಕಾರ, ಅಕಾಡೆಮಿಗಳು ಮಾಡಿರದಂತಹ ಜಾನಪದ ಸಾಹಿತ್ಯದ 17 ಸಂಪುಟಗಳನ್ನು ಕನ್ನಡ ಲೋಕಕ್ಕೆ ನೀಡಿರುವ, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ, ಯಾರೂ ಸೂಚಿಸಿರದಿದ್ದರೂ, ಸಂತೋಷದಿಂದ ನನ್ನ ಕುರಿತು, ಪ್ರಕಟಣೆಗಾಗಿ ಕಾದಿರುವ 700 ಪುಟಗಳಷ್ಟಿರುವ ನಿರ್ಲಿಪ್ತ ಎಂಬ ಪುಸ್ತಕವನ್ನು ಬರೆದಿದ್ದು ಹಾಗೂ ಅಂತಹವರಿಂದ ಸನ್ಮಾನ ಸ್ವೀಕರಿಸುತ್ತಿರುವುದಕ್ಕೆ ಸಂತೋಷವಾಗುತ್ತಿದೆ ಎಂದು ಹೇಳಿ ಸಂಘಟಕರಿಗೆ ಕೃತಜ್ಞತೆ ಸಲ್ಲಿಸಿದರು.

ನಂತರ ನಡೆದ ಸುಗಮ ಸಂಗೀತ ಕಾರ್ಯಕ್ರಮದಲ್ಲಿ ವಿಶೇಷ ಚೇತನರಾದ ನಟರಾಜ ಹಾಗೂ ಸನ್ನಿಧಿ ಅವರ ಸಂಗೀತ ಜನರ ಮನಸೂರೆಗೊಂಡಿತು. ಇದೇ ಸಂದರ್ಭದಲ್ಲಿ ವಿಶೇಷ ಕರೋಕೆ ಸೌಂಡ್ ಸಿಸ್ಟಮ್ ಅನ್ನು ಶ್ರೀ ವಿನಯ ಕೂರ್ಸೆ ಹಾಗೂ ಶ್ರೀಮತಿ ಶ್ರೀವಾಣಿ ಅವರು ಕಲಾವಿದರಿಗೆ ಉಡುಗೊರೆಯಾಗಿ ನೀಡಿದರು. ನಿವೃತ್ತ ಪ್ರಾಚಾರ್ಯ ಜಿ. ವಿ. ಹೆಗಡೆಯವರು ಗಣ್ಯರ ಪರಿಚಯ ಮಾಡಿಕೊಟ್ಟರು. ಅಣೆಕಟ್ಟು ಮಧುಸೂಧನ ರಾವ್ ಕಾರ್ಯಕ್ರಮ ನಿರೂಪಿಸಿದರು. ಸಂಘದ ನಿವೃತ್ತ ಲೆಕ್ಕಾಧಿಕಾರಿ ಆರ್. ಜಿ. ದೇಶಪಾಂಡೆ ಅವರು ವಂದನಾರ್ಪಣೆ ಗೈದರು. ಈ ಸಂದರ್ಭದಲ್ಲಿ ಸಂಘದ ಸದಸ್ಯರುಗಳಾದ ಶ್ರೀ ವಿಶ್ವೇಶ್ವರ ಗಾಯತ್ರಿ, ಶ್ರೀ ಸತ್ಯನಾರಾಯಣ ಬಿ, ಜೆ. ಎನ್. ಬಣಗಾರ್ , ಗಿರೀಶ್, ಲೇಖಕರುಗಳಾದ ಕೆ. ವಿ. ನಾಗರಾಜ್, ಕೊಪ್ಪರಂ ಅನ್ನಪೂರ್ಣ, ಸಿದ್ದಣ್ಣ ಸೊನ್ನದ, ಡಾ. ಆರ್. ಅಂಬುಜಾಕ್ಷಿ, ಗೀತಾ ಸಭಾಹಿತ, ಆರ್. ವತ್ಸಲಾ ಉಪಸ್ಥಿತರಿದ್ದರು.

– **ಕರುನಾಡ ಕಂದ**

# ಗವಿಮಠದಲ್ಲಿ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ 6ನೇ ವಿಶೇಷ ಉಪನ್ಯಾಸ



**ಬೀದರ್/ ಬಸವಕಲ್ಯಾಣ :** ಜ್ಞಾನವೇ ನಿಜವಾದ ಸಂಪತ್ತು, ಗುರುವಿನ ಮೂಲಕ ಮಕ್ಕಳಿಗೆ ಧರ್ಮ ಹಾಗೂ ಆಧ್ಯಾತ್ಮದ ಸಂಸ್ಕಾರ ಕೊಡಿಸುವುದರಿಂದ ಮಕ್ಕಳು ಜ್ಞಾನ ಎಂಬ ಸಂಪತ್ತು ಪಡೆಯಲು ಸಾಧ್ಯ ಎಂದು ನಗರದ ಸಂಸ್ಥಾನ ಗವಿಮಠದ ಪೂಜ್ಯ ಶ್ರೀ ಷ. ಬ್ರ. ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ನುಡಿದರು.

ಪವಿತ್ರ ಶ್ರಾವಣ ಮಾಸ ಅಂಗವಾಗಿ ನಗರದ ಶ್ರೀ ಜಗದ್ಗುರು ಘನಲಿಂಗ ರುದ್ರಮುನಿ ಶಿವಚಾರ್ಯ ಸಂಸ್ಥಾನ ಗವಿಮಠದಲ್ಲಿ ಗವಿಮಠ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತ 6ನೇ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದ ಸಾನಿಧ್ಯ ವಹಿಸಿ ಜ್ಞಾನದ ಒಡೆಯನಾದ ಶಿವನು ಜ್ಞಾನ ಸಾಗರನು, ಅದಕ್ಕಾಗಿಯೇ ಶಿವನನ್ನು ಸರ್ವಜ್ಞ ಎಂದು ಕರೆಯಲಾಗಿದೆ ಎಂದು ಮುಂದುವರೆದು ವಿಶೇಷ ಸನ್ಮಾನ ಸ್ವೀಕರಿಸಿದ ನಿವೃತ್ತ ನ್ಯಾಯಾಧೀಶ ಸುಭಾಷ ನಾಗರಾಳೆ ಅವರು ವೃತ್ತಿಯಿಂದ ನ್ಯಾಯಾಧೀಶರಾಗಿ ಸೇವೆ ಸಲ್ಲಿಸುತ್ತಾ ವಚನ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿ ಶಿವ ಶರಣರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡವರು. ಉನ್ನತ ಹುದ್ದೆ ಅಲಂಕರಿಸಿದರೂ ನಿರಂತರ ಕಾಯಕ ದಾಸೋಹ ಗೈದ ಸಾಧಕರು. ಹಾಗೆಯೇ ಇವತ್ತು ಮಹಾ ಪ್ರಸಾದ ಸೇವೆ ಮಾಡಿದ ದಾಸೋಹಿಗಳು, ಸಾಧನೆ ಗೈದ ಹಿರಿಯ ಶರಣ ಜೀವಿ, ನಿವೃತ್ತ ನ್ಯಾಯಾಧೀಶರಾದ ಗೌರವಾನ್ವಿತ ಸುಭಾಷ ನಾಗರಾಳೆ ಅವರಿಗೆ ವಿಶೇಷ ಸನ್ಮಾನ ಗೈದು ಗೌರವಿಸಲಾಯಿತು ಎಂದು ನುಡಿದರು. ವಿಶೇಷ ಸನ್ಮಾನ ಸ್ವೀಕರಿಸಿದ ನಿವೃತ್ತ ನ್ಯಾಯಾಧೀಶ ಮಾನ್ಯ ಸುಭಾಷ್ ನಾಗರಾಳೆ ಅವರು ಮಾತನಾಡಿ ಪ್ರಪಂಚವು ಪರಮಾತ್ಮನ ಸ್ವರೂಪ, ಹೀಗಾಗಿ ಶಿವಶರಣರು ಎಲ್ಲರನ್ನೂ ಗೌರವದಿಂದ ಕಂಡರು. ಮನುಜ ಮತ ವಿಶ್ವಪಥ ಎಂಬ ಸಂದೇಶದ ಮೂಲಕ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದು ಪ್ರಕೃತಿಯಲ್ಲಿ ದೇವರನ್ನು ಕಾಣುವ ದೇವರಲ್ಲಿ ಪ್ರಕೃತಿಯನ್ನು ಕಾಣುವ ದೈವಿಕ ಸಂಬಂಧಗಳನ್ನು ಪ್ರತಿಪಾದಿಸಿದವರು ಕುವೆಂಪು. ಪ್ರತಿವರ್ಷ ಶ್ರಾವಣ ಮಾಸದಲ್ಲಿ ಪೂಜ್ಯಶ್ರೀ ಅಭಿನವ ಗುರುಗಳು ಸಿದ್ಧಾಂತ ಶಿಖಾಮಣಿ ಹಾಗೂ ವಚನ ಸಾಹಿತ್ಯ ಕುರಿತು ವಿಶೇಷ ಉಪನ್ಯಾಸಗಳ ಮೂಲಕ ನಮ್ಮೆಲ್ಲರಿಗೆ ಧರ್ಮದ ಸಂಸ್ಕಾರ ಕೊಡುತ್ತಿರುವುದು ಉತ್ತಮ ಕಾರ್ಯ ಎಂದು ಸಂತಸ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಬಿಡಿವಿಸಿ ಉಪಾಧ್ಯಕ್ಷ ಡಾ. ಜಿ. ಎಸ್. ಭುರಳೆಯವರು ಮಾತನಾಡುತ್ತಾ ಇಂದು ಯುವಕರು ಹಾಗೂ ಮಕ್ಕಳಲ್ಲಿ ಹೃದಯ ಸಂಬಂದಿ ಸಮಸ್ಯೆಯಿಂದ ಸಾವು, ನೋವು ಸಂಭವಿಸುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ, ಆದ್ದರಿಂದ ಯುವಕರು ಹಾಗೂ ಮಕ್ಕಳು ನಿಯಮಿತ ವ್ಯಾಯಾಮ, ಉತ್ತಮ ಆಹಾರ ಸೇವನೆ ಮತ್ತು ಶಿಸ್ತುಬದ್ಧ ಜೀವನದ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ಅತಿಥಿಯಾಗಿ ಪಾಲ್ಗೊಂಡಿದ್ದ ಪತ್ರಕರ್ತ ವೀರಶೆಟ್ಟಿ ಮಲಶೆಟ್ಟಿ ಬಸವಕಲ್ಯಾಣದ ಗವಿಮಠ ಶಾಂತಿ, ಸಮಾಧಾನದ ಪವಿತ್ರ ತಾಣ. ಪೂಜ್ಯ ಗವಿಮಠ ಗುರುಗಳು ನಮಗೆ ಸದಾ ಧರ್ಮದ ಸಂಸ್ಕಾರ ಕರುಣಿಸಿ, ಆಶೀರ್ವದಿಸುತ್ತಾ ಸನ್ಮಾರ್ಗದಲ್ಲಿ ನಮ್ಮನ್ನು ಮುನ್ನಡೆಸುತ್ತಿರುವುದು ನಮ್ಮೆಲ್ಲರ ಭಾಗ್ಯ ಎಂದು ನುಡಿದರು. ಶರಣಬಸಪ್ಪ ಅಲಗುಡೆ ಪ್ರಾರ್ಥನಾ ಗೀತೆ ಹಾಡಿದರು. ಶಿಕ್ಷಕ ಮಲ್ಲಿಕಾರ್ಜುನ ಅಲಗುಡೆ ಸಂಚಾಲನೆ ಮಾಡಿದರು. ಈ ಕಾರ್ಯಕ್ರಮದಲ್ಲಿ ಬಸವಂತಪ್ಪ ಲವಾರೆ, ವಿವೇಕ ನಾಗರಾಳೆ, ಶಿವನಗೌಡ ಪಾಟೀಲ, ರಾಕೇಶ್ ಪುರವಂತ, ಶಿವಕುಮಾರ ಮುನ್ನಳ್ಳಿ, ಸಾಗರ ಬಿರಾದಾರ, ಮಹಾಂತ ಪಾಟೀಲ, ಸಂಜು ಕುಮಾರ ರೆಡ್ಡಿ, ವಿಠ್ಠಲ ರಾಯಪ್ಪನವರ, ಪ್ರೊ. ರುದ್ರೇಶ್ವರ ಗೋರ್ಟಾ, ರುದ್ರಮುನಿ ಸ್ವಾಮಿ, ವೀರಣ್ಣ ಪಾಟೀಲ ಮೊರಖಂಡಿ ಸೇರಿದಂತೆ ಮೊದಲಾದ ಭಕ್ತರು ಪಾಲ್ಗೊಂಡಿದ್ದರು.

**ಮಕ್ಕಳ ನೃತ್ಯ :** ನಗರದ ಶ್ರೀಗುರು ಮಹಾಲಿಂಗೇಶ್ವರ ಪ್ರಾಥಮಿಕ ಶಾಲೆಯ ಮಕ್ಕಳ ಸಾಮೂಹಿಕ ನೃತ್ಯ ಎಲ್ಲರ ಗಮನ ಸೆಳೆಯಿತು.

**ವರದಿ :ಶ್ರೀನಿವಾಸ ಬಿರಾದಾರ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 19
ದಿನಾಂಕ: 16–08–2025 ಪುಟಗಳು:16

# ಕನ್ನಡಮ್ಮನ ಹೆಮ್ಮೆಯ ಸುಪುತ್ರ ಅಪರೂಪದ ವಿಶ್ವ ಪತ್ರಿಕಾ ಸಂಗ್ರಹಕಾರ ಶ್ರೀ ಕೆ.ಎನ್.ಕಲ್ಯಾಣ್ ಕುಮಾರ್



" ನಮ್ಮ ನಾಡಿನ ಜನ ಇಡೀ ವಿಶ್ವದ ಪತ್ರಿಕೆಗಳನ್ನು ಇರುವಲ್ಲಿಯೇ ನೋಡಬೇಕು ಹಾಗೂ ನಮ್ಮ ಕನ್ನಡ ನಾಡಿನ ಪತ್ರಿಕೆಗಳು ವಿಶ್ವವೆಲ್ಲಾ ನೋಡಬೇಕು. "
– ಕನ್ನಡ ಅಭಿಮಾನಿ, ಶಾಲಾ ಶಿಕ್ಷಕ ಹಾಗೂ ಪತ್ರಿಕಾ ಸಂಗ್ರಹಕಾರ ಕಲ್ಯಾಣ್ ಕುಮಾರ್.



ಶ್ರೀ ಕಲ್ಯಾಣ್ ಕುಮಾರ್ ಕೆ. ಎನ್. ಶಿಕ್ಷಕರು, ವಿಶ್ವ ಪತ್ರಿಕಾ ಸಂಗ್ರಹಕಾರರು.

## ಜನನ, ಬಾಲ್ಯ, ವಿದ್ಯಾಭ್ಯಾಸ

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲೂಕಿನ ಹಿರೇಕಟ್ಟಿಗೇನಹಳ್ಳಿ ಗ್ರಾಮದ ಅರ್ಚಕರಾದ ನರಸಿಂಹಮೂರ್ತಿ ಹಾಗೂ ಲಕ್ಷ್ಮಿ ನರಸಮ್ಮನವರ ಮೂವರು ಮಕ್ಕಳಲ್ಲಿ ಹಿರಿಯವರಾದ ಕೆ .ಎನ್. ಕಲ್ಯಾಣ್ ಕುಮಾರ್ ರವರು ಹುಟ್ಟಿದ್ದು ದಿ 6.8.1972. ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಸ್ವಗ್ರಾಮದ ಸರ್ಕಾರಿ ಶಾಲೆಯಲ್ಲಿ, ಪ್ರೌಢ ಶಿಕ್ಷಣವನ್ನು ಕೋಲಾರ ಜಿಲ್ಲೆಯ ಮದನಹಳ್ಳಿ ಕ್ರಾಸ್ ಸರ್ಕಾರಿ ಪ್ರೌಢಶಾಲೆಯಲ್ಲಿ ,ಕಾಲೇಜು ಶಿಕ್ಷಣವನ್ನು ಚಿಂತಾಮಣಿ ಪ್ರಥಮ ದರ್ಜೆ ಕಾಲೇಜಿನಲ್ಲಿ, ವೃತ್ತಿ ಶಿಕ್ಷಣವನ್ನು ಕೋಲಾರದ ಸರ್ಕಾರಿ ಟಿಸಿಹೆಚ್ ಕಾಲೇಜಿನಲ್ಲಿ ಮುಗಿಸಿದರು. ಕುಟುಂಬದ ಹಿರಿಯ ಅಜ್ಜಂದಿರಾದ ಎಚ್. ಕೆ .ಎಸ್. ನಂಜುಂಡಯ್ಯನವರ ಜ್ಞಾನ ದಾಹಕ್ಕಾಗಿ ಬರುತ್ತಿದ್ದ ಕೆಲವು ಪತ್ರಿಕೆಗಳು ಎಳೆಯ ಮನಸ್ಸಿನ ಕಲ್ಯಾಣ್ ಕುಮಾರರವರ ಮೇಲೆ ಪ್ರಭಾವ ಬೀರಿ ಇಂದಿನ ಪತ್ರಿಕಾ ಸಂಗ್ರಹಕ್ಕೆ ಭದ್ರ ಬುನಾದಿಯಾಯಿತು. ಈಗ ಪ್ರಸ್ತುತ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಶ್ರೀನಿವಾಸಪುರ ಗ್ರಾಮ, ಚಿಂತಾಮಣಿ ತಾಲೂಕಿನಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.

## ಹವ್ಯಾಸದ ಆರಂಭಿಕ ದಿನಗಳು...

ಆಗೊಂದು – ಈಗೊಂದು ಪತ್ರಿಕೆ ನೋಡುತ್ತಿದ್ದ ಕಲ್ಯಾಣ್ ಕುಮಾರ್ ಅವರು ತಾನು 1995ರಲ್ಲಿ ಶಿಕ್ಷಕ ವೃತ್ತಿಗೆ ಸೇರಿದ ಮೇಲೆ ಪ್ರತಿ ನಿತ್ಯವೂ ತಮ್ಮ ಗ್ರಾಮದಿಂದ ನಗರವನ್ನು ಹಾದು ತಮ್ಮ ಕೆಲಸದ ಸ್ಥಳಕ್ಕೆ ಹೋಗಬೇಕಾದುದರಿಂದ ಬಸ್ಸಿಗಾಗಿ ಕಾಯುವ ಸಮಯವನ್ನು ವ್ಯರ್ಥ ಮಾಡದೆ ಬಸ್ ನಿಲ್ದಾಣದ ಮಳಿಗೆಗಳಲ್ಲಿ ಕಾಣುವ ಪತ್ರಿಕೆಗಳನ್ನು ಓದುವ ಮೂಲಕ ಅವುಗಳಲ್ಲಿರುವ ಅಪರೂಪದ ಲೇಖನ, ಕವನ ,ಕಥೆಗಳನ್ನು ಕಾಪಾಡುವ ನಿಟ್ಟಿನಲ್ಲಿ ಪತ್ರಿಕೆಗಳನ್ನು ಸಂಗ್ರಹಿಸುತ್ತಾ ಸಾಗಿದರು. ನಂತರದ ದಿನಗಳಲ್ಲಿ ಪ್ರವಾಸ ಅಥವಾ ಇನ್ನಿತರ ಕೆಲಸಗಳಿಗೆ ಹೋದಾಗ ಅಲ್ಲಿನ ಸ್ಥಳೀಯ ವಿಚಾರಗಳನ್ನು ತಿಳಿಯಲು ಪತ್ರಿಕೆಗಳನ್ನು ಕೊಳ್ಳುತ್ತಿದ್ದರು. ಸ್ಥಳೀಯವಾಗಿ ಕಾಣುವ ಒಂದೆರಡು ಪತ್ರಿಕೆಗಳನ್ನು ನೋಡುತ್ತಿದ್ದ ಅವರು ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ರೀತಿಯ ಶಿರೋನಾಮೆಗಳನ್ನು ಹೊಂದಿರುವ ಪತ್ರಿಕೆಗಳನ್ನು ಕಂಡಾಗ ಆಶ್ಚರ್ಯ ಚಕಿತರಾದ ಇವರು ಅಂದಿನಿಂದ ಪತ್ರಿಕೆಗಳನ್ನು ಸಂಗ್ರಹಿಸುವ ಹುಚ್ಚು ಹವ್ಯಾಸಕ್ಕೆ ತೊಡಗಿಕೊಂಡರು. ಈ ಸಂಗ್ರಹದ ಗೀಳಿನಿಂದಾಗಿ ದಿನಪತ್ರಿಕೆ, ವಾರಪತ್ರಿಕೆ, ಪಾಕ್ಷಿಕ, ಮಾಸಿಕ, ದ್ವೈಮಾಸಿಕ, ತ್ರೈ, ಚಾತುರ್ಮಾಸಿಕ, ಷಣ್ಮಾಸಿಕ ,ವಾರ್ಷಿಕ ಹೀಗೆ ಎಲ್ಲಾ ರೀತಿಯ ಪತ್ರಿಕೆಗಳನ್ನು ಸಂಗ್ರಹಿಸುತ್ತಾ ತಮ್ಮ ಪತ್ರಿಕಾ ಭಂಡಾರವನ್ನು ಹೆಚ್ಚು ಮಾಡಿಕೊಳ್ಳುತ್ತಾ ಹೋದರು. ಬರು ಬರುತ್ತಾ ಮೂರು ದಶಕಗಳಿಂದೀಚೆಗೆ ಬಂದಿರುವ ಬಹುತೇಕ ಪತ್ರಿಕೆಗಳನ್ನು ಒಂದಿಲ್ಲೊಂದು ರೀತಿಯಿಂದ ಕಷ್ಟಪಟ್ಟು ಸಂಗ್ರಹಿಸಿದರು.

## ಮೊದಲ ಪತ್ರಿಕೆಗಳ ಪ್ರದರ್ಶನ

ಮನೆಯಲ್ಲಿ ಸಂಗ್ರಹವಾದ ನೂರಾರು ಸಂಖ್ಯೆಯ ಪತ್ರಿಕೆಗಳನ್ನು ಕಂಡ ಇವರು ಚಿಕ್ಕಬಳ್ಳಾಪುರ ಜಿಲ್ಲೆಯ ಪ್ರಥಮ ಜಿಲ್ಲಾ ಸಾಹಿತ್ಯ ಸಮ್ಮೇಳನ ಶಿಡ್ಲಘಟ್ಟದಲ್ಲಿ ನಡೆದಾಗ ಆಯೋಜಕರೊಂದಿಗೆ ಮಾತನಾಡಿ ತಮ್ಮ ಪತ್ರಿಕೆಗಳ ಸಂಗ್ರಹವನ್ನು ಪ್ರದರ್ಶನ ಮಾಡಿದರು . ಅಲ್ಲಿ ನಾಡಿನ ಪ್ರಸಿದ್ಧ ಕವಿಗಳಾದ ಚಂದ್ರಶೇಖರ್ ಪಾಟೀಲರು ,ಬಸವಾರಾಧ್ಯರು , ಬಿ. ಆರ್. ಲಕ್ಷ್ಮಣರಾಯರು ಮುಂತಾದ ಸಾಹಿತ್ಯ ಕೃಷಿಕರು ಹಾಗೂ ಕನ್ನಡ ಅಭಿಮಾನಿಗಳು ಕಂಡು ಬೆಚ್ಚಿ ಇಷ್ಟೊಂದು ಪತ್ರಿಕೆಗಳು ನಮ್ಮ ನಾಡಿನಲ್ಲಿವೆಯೆ ಎಂದು ಹುಬ್ಬೇರಿಸಿದರು.

## ದಾರಿ ಸುಲಭವಾಗಿದ್ದಲ್ಲ...

ನಾಡಿನ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರು, ಪ್ರದರ್ಶನದ ವೇಳೆ ಗಣ್ಯಾತಿ ಗಣ್ಯ ವ್ಯಕ್ತಿಗಳು, ಮಂತ್ರಿಗಳು, ಶಾಸಕರು, ಮುಖ್ಯಮಂತ್ರಿಗಳು, ಕನ್ನಡ ಪತ್ರಿಕೆ ಅಭಿಮಾನಿಗಳು, ಅನೇಕ ಸಂಪಾದಕ ಮಿತ್ರರು, ಪತ್ರಕರ್ತರು, ಅನೇಕ ಮಠಾಧಿಪತಿಗಳು ಇವರ ಸಂಗ್ರಹವನ್ನು ನೋಡಿ ಖುಷಿಪಟ್ಟು ಶುಭ ಹಾರೈಸಿದ್ದಾರೆ. ಇವರ ಸಂಗ್ರಹದಲ್ಲಿ ಶತಮಾನಕ್ಕೂ ಹಳೆಯದಾದ ಅನೇಕ ಕನ್ನಡ, ಅನ್ಯಭಾಷೆಯ ಪತ್ರಿಕೆಗಳ ಸಂಗ್ರಹವಿದೆ. ಇಷ್ಟೆಲ್ಲಾ ಪತ್ರಿಕಾ ಸಂಗ್ರಹ/ ಪ್ರದರ್ಶನ ಸೇವೆ ಮಾಡುತ್ತಿರುವ ಇವರು ನಾನು ಆಯ್ಕೆ ಮಾಡಿಕೊಂಡಿರುವ ದಾರಿ ಸುಲಭವಾಗಿದ್ದಲ್ಲ ಎನ್ನುತ್ತಾರೆ.

## ರಾಜ್ಯ, ದೇಶದ ಗಡಿಯನ್ನೂ ದಾಟಿದ ಸಾಹಸ

ಹೀಗೆಯೇ ಸಾಗಿದ ಇವರ ಪತ್ರಿಕಾ ಪ್ರೀತಿ ಬರೀ ಕನ್ನಡ ನಾಡಿಗೆ, ಕನ್ನಡ ಭಾಷೆಗೆ ಸೀಮಿತವಾಗದೆ ಇಡೀ ವಿಶ್ವದ, ವಿವಿಧ ದೇಶ, ಭಾಷೆಗಳ ಪತ್ರಿಕೆಗಳನ್ನು ಸಂಗ್ರಹಿಸುವ ಸಾಹಸದ ಕೆಲಸಕ್ಕೆ ಕೈ ಹಾಕಿದರು. ಇದಕ್ಕಾಗಿ ದೇಶ-ವಿದೇಶಗಳ ಪತ್ರಿಕಾ ಸಂಗ್ರಹಕಾರರ ಮಾಹಿತಿ ಕಲೆ ಹಾಕಿ ಅವರುಗಳನ್ನು ಈಗಿನ ವಿವಿಧ ಮಾಧ್ಯಮಗಳ ಮೂಲಕ ಸಂಪರ್ಕಿಸಿ ಅನೇಕ ಭಾಷೆಯ ಪತ್ರಿಕೆಗಳನ್ನು ಕೊಂಡುಕೊಂಡರು. ಪತ್ರಿಕೆ ಸಂಗ್ರಹಕಾರರ ಆಶಯವನ್ನು ಅರಿತ ಇವರು ತನ್ನ ನಾಡಿನ ಪತ್ರಿಕೆಗಳನ್ನು ಹತ್ತಾರು ಸಂಖ್ಯೆಯಲ್ಲಿ ಸಂಗ್ರಹಿಸುತ್ತಾ ಅವುಗಳನ್ನು ಬೇರೆ ಬೇರೆ ಭಾಷೆಯ ಪತ್ರಿಕಾ ಸಂಗ್ರಹಕಾರರಿಗೆ ಕಳುಹಿಸಿಕೊಡುವ ಮೂಲಕ ಅವರಲ್ಲಿರುವ ಪತ್ರಿಕೆಗಳನ್ನು ಪಡೆದುಕೊಂಡರು. ಇದರ ಫಲದಿಂದಾಗಿ ಇಂದು ಸುಮಾರು ಸಾವಿರಾರು ಬೇರೆ ಬೇರೆ ಭಾಷೆ ಪತ್ರಿಕೆಗಳು ಸಂಗ್ರಹವಾಗಲು ಕಾರಣವಾಯಿತು.











ಕರುನಾಡ ಕಂದ
ಸಂಪುಟ 04 । ಸಂಚಿಕೆ 19
ದಿನಾಂಕ: 16–08–2025 ಪುಟಗಳು:16

### ಇಮ್ಮಡಿಯಾದ ಹುಮ್ಮಸ್ಸು

ಸಮ್ಮೇಳನದಲ್ಲಿ ಇವರ ಪತ್ರಿಕಾ ಸಂಗ್ರಹವನ್ನು ನೋಡಿದ ಸಾಹಿತಿಗಳು, ಕನ್ನಡಾಭಿಮಾನಿಗಳು, ಗಣ್ಯರ ಮುಖಭಾವವನ್ನು ಅರಿತ ನಮ್ಮ ಪತ್ರಿಕಾ ಅಭಿಮಾನಿ ಕಲ್ಯಾಣ್ ಕುಮಾರ್ ಅವರು ಅಂದಿನಿಂದ ದುಪ್ಪಟ್ಟು ಪತ್ರಿಕೆಗಳನ್ನು ಸಂಗ್ರಹಿಸುವ ಸಾಹಸಕ್ಕೆ ಧುಮುಕಿದರು. ಇದರ ಫಲವಾಗಿ ನಾಡಿನ ಅನೇಕ ಗಣ್ಯಾತಿಗಣ್ಯ ವ್ಯಕ್ತಿಗಳಿಗೆ ಪತ್ರ ಬರೆಯುವ ಮುಖೇನ ಅವರ ಕಾಲದ ಪತ್ರಿಕೆಗಳನ್ನು ಸಂಗ್ರಹಿಸುವ ಮನಸ್ಸು ಮಾಡಿದರು ಹಾಗೂ ರಾಜ್ಯದ ನೊಂದಣಿಯಾದ ಪತ್ರಿಕೆಗಳ ವಿಳಾಸಗಳನ್ನು ಪತ್ತೆ ಹಚ್ಚಿ ಆಯಾ ಪತ್ರಿಕೆಗಳ ಸಂಪಾದಕರನ್ನು ಅಥವಾ ಕುಟುಂಬಸ್ಥರನ್ನು ಭೇಟಿ ಮಾಡುವ ಮೂಲಕ ಅವರಲ್ಲಿರುವ ಪತ್ರಿಕೆಗಳನ್ನು ಪಡೆದುಕೊಂಡರು.

### ಪತ್ರಿಕೆಗಳ ಪ್ರದರ್ಶನ ಸಾಗಿ ಬಂದ ಹಾದಿ...

ಇವರ ಪತ್ರಿಕಾ ಪ್ರದರ್ಶನ ಜಿಲ್ಲಾ ಸಾಹಿತ್ಯ ಸಮ್ಮೇಳನದಿಂದ ಪ್ರಾರಂಭವಾಗಿ ನಾಡಿನಾದ್ಯಂತ ನಡೆಯುವ ಅನೇಕ ಸಾಹಿತ್ಯ ಸಮ್ಮೇಳನಗಳು ಹಾಗೂ ಸಂಘ ಸಂಸ್ಥೆಗಳ ,ಶಿಕ್ಷಣ ಸಂಸ್ಥೆಗಳ ಸಮಾರಂಭಗಳಲ್ಲಿ ಪತ್ರಿಕಾ ಅಭಿಮಾನಿಗಳು ನೋಡಲು ಹಾಗೂ ಮುಂದಿನ ಪೀಳಿಗೆಯು ಕನ್ನಡ ಪತ್ರಿಕಾ ಲೋಕದ ಮಹಾಸಾಗರವನ್ನು ನೋಡಿ ಆನಂದಿಸಲು ಇದುವರೆಗೂ ಸುಮಾರು 15 ವರ್ಷಗಳಿಂದ ನಿರಂತರವಾಗಿ ರಾಜ್ಯದ ಮೂಲೆ ಮೂಲೆಗಳಲ್ಲೂ, ಗಡಿ ರಾಜ್ಯಗಳಲ್ಲೂ ಹಾಗೂ ಸಿಂಗಾಪುರ ದೇಶದಲ್ಲೂ ಸಹ ತಮ್ಮ ಸ್ವಂತ ಖರ್ಚಿನಲ್ಲಿ ಕನ್ನಡಮ್ಮನ ಅನನ್ಯ ಸೇವೆಯನ್ನು ಪತ್ರಿಕೆಗಳ ಪ್ರದರ್ಶನ ಮಾಡುವ ಮೂಲಕ ಕುವೆಂಪುರವರ ಮಾತಿನಂತೆ “ ತಾಯಿಯುಪ್ಪುಗೆಯಂತೆ ಬಲು ಸೊಗಸು ಮೆಯ್ಗೆ “ ಎಂಬಂತೆ ಮಾಡುತ್ತಾ ಸಾಗಿದ್ದಾರೆ.

### ದುಡ್ಡು ಕೊಟ್ಟರೆ ಮಾತ್ರ ಮಳಿಗೆ : ಸ್ವಂತ ಖರ್ಚಲ್ಲಿ ಉಚಿತ ಪ್ರದರ್ಶನ

ಪ್ರತಿ ಸಮ್ಮೇಳನಗಳಲ್ಲೂ ಯಾವುದೇ ವ್ಯಾಪಾರದ ದೃಷ್ಟಿ ಇರದ ಇವರ ಪತ್ರಿಕೆಗಳ ಪ್ರದರ್ಶನಕ್ಕೆ ಆಯೋಜಕರನ್ನು “ ಉಚಿತ ಮಳಿಗೆ “ ಒಂದನ್ನು ದಯಪಾಲಿಸಲು ಮನವಿ ಮಾಡಿ ಕೇಳಿದರೆ ದುಡ್ಡು ಕೊಟ್ಟರೆ ಮಾತ್ರ “ ಮಳಿಗೆ ಪುಗಸಟ್ಟೆ ಸಿಗುವುದಿಲ್ಲ “ ಎಂಬ ಉತ್ತರಕ್ಕೆ ಬೇಸತ್ತ ಇವರು ಪ್ರತಿ ಪ್ರದರ್ಶನದ ಮಳಿಗೆಯ ಹಣವನ್ನು ನೀಡುತ್ತಾ ಕನ್ನಡ ಅಭಿಮಾನಿಗಳಿಗೆ ಪತ್ರಿಕೆಗಳ ಉಚಿತ ಪ್ರದರ್ಶನ ಮಾಡುತ್ತಿದ್ದಾರೆ. ಇಷ್ಟೆಲ್ಲಾ ಮಾಡಿದರೂ ಪ್ರದರ್ಶನದ ಮಹತ್ವವನ್ನು ಅರಿಯದ ಆಯೋಜಕರು ಕನಿಷ್ಠ ಪಕ್ಷ ಸಮ್ಮೇಳನದಲ್ಲಿ ಪ್ರದರ್ಶನ ಮಾಡಿದ ಗುರುತಿಗಾಗಿ ಪಾಲ್ಗೊಂಡಿದ್ದಕ್ಕೆ ಭಾಗವಹಿಸಿದ ಪತ್ರವನ್ನೂ ಸಹ ನೀಡುವುದಿಲ್ಲವೆಂದು ಬೇಸರ ವ್ಯಕ್ತಪಡಿಸುತ್ತಾರೆ.

### ನಿಮಗೇನು ಲಾಭ ಎನ್ನುವ ಸಂಪಾದಕ ಮಿತ್ರರು

ತಮ್ಮ ಕಷ್ಟವನ್ನು ತಿಳಿಯದೆ ಸುತ್ತಮುತ್ತಲಿನ ಸ್ನೇಹಿತರು ಈ ಪ್ರದರ್ಶನದಿಂದ ಬೇಕಾದಷ್ಟು ಲಾಭವಿದೆಯೆಂದು ಆಡಿಕೊಳ್ಳುತ್ತಾರೆಂದು ಹೇಳುತ್ತಾರೆ. ಪತ್ರಿಕೆಗಳನ್ನು ನಡೆಸುವ ಎಷ್ಟೋ ಸಂಪಾದಕರನ್ನು ಭೇಟಿ ಮಾಡಿ ತಮ್ಮ ಪತ್ರಿಕೆಗಳ ಒಂದಷ್ಟು ಹಳೆಯ ಸಂಚಿಕೆಗಳನ್ನು ಕಳಿಸಿಕೊಡಿ ಇವುಗಳನ್ನು ಪ್ರದರ್ಶನ ಮಾಡುವೆ ಇದರಿಂದ ಪತ್ರಿಕೆ ಓದುವವರನ್ನು ಹಾಗೂ ಮುಂದಿನ ಪೀಳಿಗೆಗೆ ಇದರ ಮಹತ್ವವನ್ನು ತಿಳಿಸಲು ಸಹಾಯವಾಗುತ್ತದೆ ಎಂದರೆ ಇದರಿಂದ ನಿಮಗೇನು ಲಾಭ ಎನ್ನುವ ಸಂಪಾದಕ ಮಿತ್ರರು ಒಂದು ಪತ್ರಿಕೆಯನ್ನೂ ಸಹ ಕಳಿಸಿಕೊಡದೆ ಸುಮ್ಮನಾಗುತ್ತಾರೆ.

### ಪೋಸು ಕೊಟ್ಟು ಕಾಣೆಯಾಗೋ ಕನ್ನಡದ ಕಟ್ಟಾಳುಗಳು

ಕೆಲವೊಮ್ಮೆ ಪತ್ರಿಕಾ ಪ್ರದರ್ಶನದ ವೇಳೆ ಬರುವ ಪತ್ರಿಕಾ ಸಂಪಾದಕರು ಗಟ್ಟಿ ಧ್ವನಿಯಲ್ಲಿ ನಮ್ಮ ಪತ್ರಿಕೆ ಯಾಕೆ ಇಟ್ಟಿಲ್ಲ ಎಂದು ಪ್ರಶ್ನಿಸುತ್ತಾರೆ? ದಯವಿಟ್ಟು ನನಗೆ ನಿಮ್ಮ ಪತ್ರಿಕೆಗಳನ್ನು ಕೊಡಿ ಪ್ರದರ್ಶಿಸುವೆ ಎಂದರೆ ಅದಕ್ಕೆ ಉತ್ತರವಿಲ್ಲದೆ ಮರೆಯಾಗುತ್ತಾರೆ. ಇನ್ನೂ ಆಶ್ಚರ್ಯದ ಸಂಗತಿ ಎಂದರೆ ಕೆಲವು ಮಾಧ್ಯಮ ಮಿತ್ರರು ಟಿವಿ ಅಥವಾ ಪತ್ರಿಕೆಗಳಲ್ಲಿ ವರದಿ ಮಾಡಲು ಬಂದಾಗ ನನಗಿಂತಲೂ ಹೆಚ್ಚಾಗಿ ಪೋಸು ಕೊಡುವ ಕನ್ನಡದ ಕಟ್ಟಾಳುಗಳೆನಿಸಿಕೊಂಡವರು ನನಗೆ ಭರಪೂರ ಸಹಾಯದ ಮಾತುಗಳನ್ನು ಹೇಳಿ ಮತ್ತೆಂದೂ ಸಿಗದಂತೆ ಮಾಯವಾಗುತ್ತಾರೆ. ಇದುವರೆಗೂ ಲಕ್ಷಾಂತರ ರೂ. ಗಳನ್ನು ಪತ್ರಿಕೆಗಳ ಸಂಗ್ರಹಕ್ಕಾಗಿ ವ್ಯಯಿಸಿರುವ ಇವರು ಸ್ವಂತ ಸೂರಿಲ್ಲದೆ ಬಾಡಿಗೆ ಮನೆಯಲ್ಲಿಯೇ ವಾಸ ಮಾಡುತ್ತಿದ್ದಾರೆ.

### ಸಂಘ–ಸಂಸ್ಥೆಗಳಿಂದ ಪ್ರಶಸ್ತಿ, ಸನ್ಮಾನ, ಪ್ರೋತ್ಸಾಹ...

ಯಾವುದೇ ಪ್ರಶಸ್ತಿ, ಪುರಸ್ಕಾರಗಳಿಗೆ ಆಸೆ ಪಡದ ಇವರಿಗೆ ತಾನಾಗಿಯೇ ಚಿಕ್ಕಬಳ್ಳಾಪುರ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ , ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ, ಜಿಲ್ಲಾ ಸಾಹಿತ್ಯ ಸಮ್ಮೇಳನದ ಪ್ರಶಸ್ತಿ ಹಾಗೂ ಹಣಕ್ಕೆ ಆಸೆ ಪಡದ ಕೆಲವೊಂದು ಸಂಸ್ಥೆಗಳು ಪತ್ರಿಕಾ ಪ್ರದರ್ಶನದ ಸೇವೆಯನ್ನು ನಿಸ್ಪೃಹತೆಯಿಂದ ಗುರುತಿಸಿ ಸನ್ಮಾನಿಸಿದ್ದಾರೆ ಎಂದು ಅಭಿಮಾನದಿಂದ ಹೇಳುತ್ತಾರೆ. ತಮ್ಮ ಇದುವರೆಗಿನ ನಿರಂತರ ಪ್ರದರ್ಶನಗಳಲ್ಲಿ ಆದ ಅನೇಕ ಕಹಿ ಘಟನೆಗಳನ್ನು ಜ್ಞಾಪಿಸಿಕೊಳ್ಳಲು ಬೇಸರ ವ್ಯಕ್ತಪಡಿಸುತ್ತಾರೆ. ಅಷ್ಟೊಂದು ಮಟ್ಟಿಗೆ ಕೆಲವೊಂದು ಘಟನೆಗಳು ಇವರನ್ನು ಘಾಸಿ ಮಾಡಿದೆ.

### ಕುಟುಂಬದ ಬೆಂಬಲ

ಇವೆಲ್ಲದರ ಹೊರತಾಗಿ ತನ್ನ ಮಡದಿ ಮಂಜುಳಾ, ಮಕ್ಕಳಾದ ಪವನ್ ಕಲ್ಯಾಣ್ ಮತ್ತು ಭಾವನಾ ಕಲ್ಯಾಣ್ ಹಾಗೂ ಕುಟುಂಬದ ಇನ್ನಿತರ ಸದಸ್ಯರು ಕಲ್ಯಾಣ್ ಕುಮಾರ್ ಅವರು ಮಾಡುವ ಕೆಲಸಕ್ಕೆ ಬೆನ್ನೆಲುಬಾಗಿ ನಿಂತಿದ್ದಾರೆ. ಇದು ನನ್ನ ಪುಣ್ಯ ಎಂದು ಸಹೃದಯದಿಂದ ನೆನೆಯುತ್ತಾರೆ. “ ನಮ್ಮ ನಾಡಿನ ಜನ ಇಡೀ ವಿಶ್ವದ ಪತ್ರಿಕೆಗಳನ್ನು ಇರುವಲ್ಲಿಯೇ ನೋಡಬೇಕು ಹಾಗೂ ನಮ್ಮ ಕನ್ನಡ ನಾಡಿನ ಪತ್ರಿಕೆಗಳು ವಿಶ್ವವೆಲ್ಲಾ ನೋಡಬೇಕು. “ ಎಂಬ ಇವರ ಮಾತಿನ ಭಾವನಾತ್ಮಕ ನುಡಿ ಕೇಳುಗರ, ಓದುಗರ ಹೃದಯ ತಟ್ಟದೆ ಇರದು. ಇಂತಹ ಕನ್ನಡ ಅಭಿಮಾನಿ, ಶಾಲಾ ಶಿಕ್ಷಕ ಹಾಗೂ ಪತ್ರಿಕಾ ಸಂಗ್ರಹಕಾರ ಕೆ. ಎನ್. ಕಲ್ಯಾಣ್ ಕುಮಾರ್ ಅವರ ವಿಶ್ವ ಕನ್ನಡದ ಪ್ರೀತಿಗೆ ನಮ್ಮ ಸಲಾಮ್... ಎಲೆಮರೆಕಾಯಿಯಂತೆ ಕನ್ನಡಮ್ಮನ ಕೆಲಸವನ್ನು ತನ್ನ ಉಸಿರಾಗಿಸಿಕೊಂಡು ಬದುಕುತ್ತಿರುವ ಇವರಿಗೆ ಸರ್ಕಾರ ಹಾಗೂ ಸಂಘ ಸಂಸ್ಥೆಗಳು ಅವರ ನಿರಂತರ ಸಂಗ್ರಹ ಬತ್ತದಂತೆ ಹಣಕಾಸಿನ ಸಹಾಯ ಮಾಡುವ ಮೂಲಕ ಕೈಜೋಡಿಸಬೇಕಾಗಿದೆ. ಇದು ನಮ್ಮೆಲ್ಲರ ಹೊಣೆ. ಇವರಿಗೆ ಶುಭವಾಗಲಿ

## ಅನೇಕರಿಗೆ ಒಂದಿಲ್ಲೊಂದು ರೀತಿಯಿಂದ ಪ್ರಶಸ್ತಿ ಪುರಸ್ಕಾರಗಳನ್ನು ನೀಡುವ ವ್ಯಕ್ತಿ, ಸಂಘ ಸಂಸ್ಥೆಗಳ ಗಮನಕ್ಕೆ...

ಯಾರಿಂದಲೂ ಯಾವುದೇ ರೀತಿಯ ಸಹಾಯವನ್ನು ಯಾರಲ್ಲೂ ಕೋರದೆ ಸುಮಾರು ನೂರಾರು ಸಂಖ್ಯೆಯಲ್ಲಿ 30 ವರ್ಷಗಳಿಂದ ಹಳ್ಳಿಯಿಂದ ಹಿಡಿದು ವಿದೇಶದವರೆಗೂ ಸ್ವಂತ ಹಣದಲ್ಲಿ ಸಾವಿರಾರು ವಿಶ್ವದ ಪತ್ರಿಕೆಗಳನ್ನು ಸಂಗ್ರಹಿಸುತ್ತಾ ಪ್ರದರ್ಶನ ಮಾಡುತ್ತಿರುವ ನನಗೆ ಕನಿಷ್ಠ ಮೆಚ್ಚುಗೆಯ ನುಡಿಗಳನ್ನೂ ಸಹ ಆಡದೆ ಇರುವುದು ಅತ್ಯಂತ ಘೋರ ವಿಪರ್ಯಾಸ. ಕನ್ನಡ ಮತ್ತು ಭಾರತೀಯ ಇತರೆ ಭಾಷೆಗಳ ಪತ್ರಿಕೆಗಳನ್ನು ಕೊಂಡು ವಿಶ್ವದ ಮೂಲೆ ಮೂಲೆಗೆ ಅಲ್ಲಿನ ಪತ್ರಿಕಾ ಸಂಗ್ರಹಕಾರರಿಗೆ ತಲುಪಿಸುತ್ತಿರುವ ನಾನು ಇನ್ಯಾವ ರೀತಿ ಮೆಚ್ಚುಗೆ ಕೆಲಸ ಮಾಡಬೇಕೆಂಬುದೇ ಗೊತ್ತಾಗುತ್ತಿಲ್ಲ, ನಾನು ಮಾಡುವ ಪತ್ರಿಕಾ ಪ್ರದರ್ಶನಗಳಲ್ಲಿ ಭೇಟಿ ನೀಡುವ ವ್ಯಕ್ತಿಗಳು ಪಂಖಾನುಪುಂಖವಾಗಿ ನಿಮಗೆ ನಮ್ಮ ಅಭಯಹಸ್ತವಿದೆ, ನಿಮ್ಮನ್ನು ಮುಂದೆ ನಡೆಯುವ ನಮ್ಮ ಅದ್ದೂರಿ ವೇದಿಕೆ ಕಾರ್ಯಕ್ರಮದಲ್ಲಿ ಗುರುತಿಸುತ್ತೇವೆ ಎಂದು ಹೇಳುತ್ತಾ, ನನ್ನ ಪತ್ರಿಕಾ ಪ್ರದರ್ಶನದ ಹಿನ್ನೆಲೆಯಲ್ಲಿ ನನ್ನಿಂದಲೇ ಇವರು ಎಂದು ಪೋಸು ಕೊಡುತ್ತಾ ಫೋಟೋ ಕ್ಲಿಕ್ಕಿಸಿಕೊಳ್ಳುವ ಅನೇಕ ವ್ಯಕ್ತಿಗಳು ನಾಚಿಕೆಯಿಲ್ಲದೆ ಮರೆಯಾಗಿದ್ದಾರೆ.

ಇನ್ನೂ ಕೆಲವು ವ್ಯಕ್ತಿಗಳು, ಸಂಘ–ಸಂಸ್ಥೆಗಳಂತೂ ನಾ ಮುಂದು ತಾ ಮುಂದು ಎಂದು ನೇರವಾಗಿ ಫೋನ್ ಮಾಡುವ ಮೂಲಕ ಹಾಗೂ ಸಂಘ ಸಂಸ್ಥೆಗಳ ಮಹಾನ್ ಸಾಧನೆಗಳ ಪಟ್ಟಿಯನ್ನು ಪೋಸ್ಟ್ ಮಾಡುವ ಮೂಲಕ ನಾವು ನಿಮ್ಮ ಮಹತ್ಸಾದನೆಯನ್ನು ಇದುವರೆಗೂ ಯಾರೂ ಮಾಡದ ಅದ್ದೂರಿ ಕಾರ್ಯಕ್ರಮದಲ್ಲಿ ಹಿರಿಯ ರಾಜ–ಕಾರಣಿಗಳು, ಚಲನಚಿತ್ರ ನಟರು, ಮಹಾನ್ ಗಣ್ಯ ಸಾಧಕರ ನಡುವೆ ನಿಮ್ಮನ್ನು ಗುರುತಿಸುತ್ತೇವೆ ಎಂದು ಹೇಳುತ್ತಾ, ಇತ್ತೀಚಿನ ದಿನಗಳಲ್ಲಿ ಕಾರ್ಯಕ್ರಮ ನಡೆಸುವುದೇ ಒಂದು ಸಾಹಸವಾಗಿದ್ದು ನಿಮ್ಮಂತವರನ್ನು ಗುರುತಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ಮಾಡಲೇ ಬೇಕಾಗಿರುವುದರಿಂದ, ನಮ್ಮ ಕಾರ್ಯಕ್ರಮದ ಖರ್ಚು ವೆಚ್ಚಗಳಿಗೆ ತನು ಮನಕ್ಕಿಂತ ನಿಮ್ಮಿಂದ ಹೆಚ್ಚಿನ ಹಣ ಸಹಾಯವನ್ನು ಕೋರುತ್ತೇವೆ ಎಂದು ಪ್ರತ್ಯಕ್ಷವಾಗಿ ಕೇಳುವವರಿಂದ ಅತ್ಯಂತ ದುಃಖದಿಂದ, ನಾಚಿಕೆಯಿಂದ ಬದುಕುತ್ತಿದ್ದೇನೆ.

**– ಕಲ್ಯಾಣ್ ಕುಮಾರ್ ಕೆ ಎನ್ ಶಿಕ್ಷಕರು, ವಿಶ್ವ ಪತ್ರಿಕಾ ಸಂಗ್ರಹಕಾರರು, ಹಿರೇಕಟ್ಟಿಗೇನಹಳ್ಳಿ ಮತ್ತು ಅಂಚೆ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ,563128. ಸಂಪರ್ಕ ಸಂಖ್ಯೆ 8660161546.**






# ಶರಣಬಸವೇಶ್ವರ ಪುರಾಣದಲ್ಲಿ ಬಿತ್ತುವ ಕಾರ್ಯಕ್ರಮ





**ಬಾಗಲಕೋಟೆ ಜಿಲ್ಲೆ / ಬಾದಾಮಿ ತಾಲೂಕು :** ನರಸಾಪುರ ಗ್ರಾಮದಲ್ಲಿ ದಿ. 12–8–2025 ರಂದು ಶ್ರೀ ಶರಣಬಸವೇಶ್ವರ ಪುರಾಣದಲ್ಲಿ ಬಿತ್ತುವ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು. ಊರಿನ ಹಿರಿಯರು, ಯುವಕರು, ಭಜನಾ ಮೇಳದವರು ಎತ್ತುಗಳನ್ನು ಹೂಡಿಕೊಂಡು ಬಿತ್ತನೆಯನ್ನು ಆರಂಭಿಸಿದರು.

ಈ ಸಂದರ್ಭದಲ್ಲಿ ಬಾಂಡೆ ಸಾಮಾನುಗಳನ್ನು ಸವಾಲುಗಳನ್ನು ಮಾಡಲಾಯಿತು.

ಪುರಾಣ ಪ್ರವಚನ ನಡೆಯಿತು, ದಿನನಿತ್ಯ ಭಕ್ತಾದಿಗಳು ಅನ್ನ ಪ್ರಸಾದವನ್ನು ನೆರವೇರಿಸಿದರು. ಬಿತ್ತುವ ಕಾರ್ಯಕ್ರಮಕ್ಕೆ ಕೂರಿಗೆ ಮತ್ತು ಕುಂಟೆ ಕೊಟ್ಟವರು ಶ್ರೀ ಇಮಾಮ ಹುಸೇನ್ ಸುಂಕದ ಅಜ್ಜನವರು.

**ವರದಿ :ನಿಂಬಯ್ಯ ಕುಲಕರ್ಣಿ, ಬಾದಾಮಿ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 19
ದಿನಾಂಕ: 16–08–2025 ಪುಟಗಳು:16

# ಕಂಪ್ಲಿ ಪೊಲೀಸರ ಯಶಸ್ವಿ ಕಾರ್ಯಾಚರಣೆ : ಇಬ್ಬರು ಆರೋಪಿಗಳ ಬಂಧನ



**ಬಳ್ಳಾರಿ/ ಕಂಪ್ಲಿ :** ಕಂಪ್ಲಿ ಪೊಲೀಸರು ಯಶಸ್ವಿ ಕಾರ್ಯಾಚರಣೆಯನ್ನು ನಡೆಸಿ ಇತ್ತೀಚೆಗೆ ಪಟ್ಟಣವೂ ಸೇರಿದಂತೆ ವಿವಿಧೆಡೆಗಳಲ್ಲಿ ಕಳ್ಳತನವಾಗಿರುವ 9 ಲಕ್ಷರೂ ಮೌಲ್ಯದ 11 ಮೋಟಾರು ಸೈಕಲ್‌ಗಳನ್ನು ವಶಪಡಿಸಿಕೊಂಡು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

2025ರ ಮಾರ್ಚ್ 1ರಂದು ಪಟ್ಟಣದ ವಾಲ್ಮೀಕಿ ವೃತ್ತದಲ್ಲಿ ರಾತ್ರಿ 10 ಗಂಟೆಯ ಸಮಯದಲ್ಲಿ ಕೆ.ಎ 35/ಇ.ಕೆ 6014 ಬೂದು ಬಣ್ಣದ ಹೀರೋ ಹೆಚ್.ಎಫ್ ಡಿಲೆಕ್ಸ್ ಮೋಟಾರು ಸೈಕಲ್ ಕಳ್ಳತನವಾಗಿರುವ ಬಗ್ಗೆ ವೆಂಕಟಾಪುರದ ಮಾರತೇಶ್ ಅಡ್ಡೆ ಎನ್ನುವವರು ದೂರನ್ನು ನೀಡಿದ್ದರು. ಕಂಪ್ಲಿ ಪಿ.ಐ ವಾಸುಕುಮಾರ ಕೆ.ಬಿ. ಪಿಎಸ್‌ಐ ಅವಿನಾಶ್ ಕಾಂಬಳೆ ಹಾಗೂ ಸಿಬ್ಬಂದಿಗಳು ಕಳುವಾದ ಮೋಟಾರು ಸೈಕಲ್‌ಗಳ ಪತ್ತೆಗಾಗಿ ನಿರಂತರವಾಗಿ ಪ್ರಯತ್ನಗಳನ್ನು ನಡೆಸಿದ್ದರು. ಕಂಪ್ಲಿ ಕುರುಗೋಡು ರಸ್ತೆಯ ಕಮ್ಮ ಭವನದ ಮುಂದೆ ವಾಹನಗಳ ತಪಾಸಣೆ ಮಾಡುತ್ತಿರುವಾಗ ಈ ಪ್ರಕರಣದಲ್ಲಿ ಕಳ್ಳತನವಾದ ಮೋಟಾರು ಸೈಕಲ್ ಮತ್ತು ಕಳ್ಳತನ ಮಾಡಿದ ಆರೋಪಿತರಾದ ದಿನೇಶ್ ಮತ್ತು ಯಶ್ವಂತ ಅಲಿಯಾಸ್ ಬಂಟಿ ಎನ್ನುವರನ್ನು ಬಂಧಿಸಿ ವಿಚಾರಣೆಗೊಳಪಡಿಸಿದಾಗ ಈ ಇಬ್ಬರು ಆರೋಪಿತರೊಂದಿಗೆ ಕಂಪ್ಲಿ ಪಟ್ಟಣದ ಎಲ್.ಜಿ.ಕಾರ್ತಿಕ್, ಕೃಷ್ಣ, ಮೆಟ್ರಿ ಬಾಷಾ ಸೇರಿ ಈಗ್ಗೆ ಸುಮಾರು 1 ವರ್ಷದಿಂದ ಕಂಪ್ಲಿ ಪಟ್ಟಣ, ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಬೆಟ್ಟ, ತುಮಕೂರು ಬಸ್ ನಿಲ್ದಾಣ, ಚಿತ್ರದುರ್ಗ ಬಸ್ ನಿಲ್ದಾಣ, ದಮ್ಮೂರು ಗ್ರಾಮ, ಸಿಂಧನೂರು ಅಂಬಾಮಠ ಹಾಗೂ ಆಂಧ್ರಪ್ರದೇಶದ ವಿಡುಪನಕಲ್ಲು, ತೋರಣಗಲ್ಲು, ಮುನಿರಾಬಾದ್ ರೈಲ್ವೇ ಸ್ಟೇಷನ್‌ಗಳಲ್ಲಿ ಕಳ್ಳತನ ಮಾಡಿರುವ 9 ಲಕ್ಷ ರೂ ಮೌಲ್ಯದ 11 ಮೋಟಾರು ಸೈಕಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಕಳ್ಳತನವಾಗಿರುವ ಮೋಟಾರು ಸೈಕಲ್‌ಗಳು ಮತ್ತು ಆರೋಪಿಗಳಿಗಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ. ಶೋಭಾರಾಣಿ ವಿ.ಜೆ. ಮಾರ್ಗದರ್ಶನದಲ್ಲಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನವೀನ್‌ಕುಮಾರ್ ಮುಂದಾಳತ್ವದಲ್ಲಿ ಹಾಗೂ ತೋರಣಗಲ್ಲು ಉಪವಿಭಾಗದ ಡಿಎಸ್ಪಿ ಪ್ರಸಾದ್ ಗೋಖಲೆ ನೇತೃತ್ವದಲ್ಲಿ ಕಂಪ್ಲಿ ಪಿಐ ವಾಸುಕುಮಾರ್, ಪಿಎಸ್‌ಐ ಅವಿನಾಶ್ ಕಾಂಬಳೆ, ಎಎಸ್‌ಐ ಬಸವರಾಜ ಹಾಗೂ ಸಿಬ್ಬಂದಿಗಳಾದ ಮುಖ್ಯಪೇದೆ ಬಸವರಾಜ ಹಿರೇಮಠ, ಪೇದೆಗಳಾದ ಸತ್ಯನಾರಾಯಣ, ಮಲ್ಲೇಶ್ ರಾಥೋಡ್, ಮುತ್ತುರಾಜ್, ಸುರೇಶ್, ಶರಣಪ್ಪ, ಟಿ.ಪ್ರಭಾಕರ್, ತಿಮ್ಮಯ್ಯ, ಗಾದಿಲಿಂಗಪ್ಪ, ವಿಶ್ವನಾಥ್, ಸುದರ್ಶನ ಇವರುಗಳು ಮೋಟಾರು ಸೈಕಲ್ಲುಗಳು ಹಾಗೂ ಆರೋಪಿತರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬೃಹತ್ ದ್ವಿಚಕ್ರ ವಾಹನಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಕಾರ್ಯವೈಖರಿಯನ್ನು ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ. ಶೋಭಾರಾಣಿ ವಿ.ಜೆ. ಅಭಿನಂದಿಸಿ, ಬಹುಮಾನವನ್ನು ಘೋಷಣೆ ಮಾಡಿದ್ದಾರೆ.

**ವರದಿ : ಜಿಲಾನಸಾಬ್ ಬಡಿಗೇರ್**

## ಗ್ರಾಮ ಪಂಚಾಯತಿ ನಿರ್ಲಕ್ಷ್ಯ :ಸಾರ್ವಜನಿಕರ ಎಚ್ಚರಿಕೆ



ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮ ಪಂಚಾಯತಿ ನಿರ್ಲಕ್ಷ್ಯದಿಂದಾಗಿ ಗ್ರಾಮದ ಪಾಂಡುರಂಗ ಕಾಲೋನಿಯ ರಸ್ತೆಗಳು ಹಳ್ಳದಂತೆ ಆಗಿದ್ದು ಕಾಲೋನಿ ಜನರು ದಿನಾಲೂ ನಡೆದಾಡಲು ಹರ ಸಾಹಸ ಪಡಬೇಕಾಗಿದೆ ಆದಷ್ಟು ಬೇಗ ಪಂಚಾಯತಿ ಆಡಳಿತ ಇದಕ್ಕೆ ಪರಿಹಾರ ಕೈಗೊಳ್ಳದಿದ್ದರೆ ಪಂಚಾಯತಿ ಮುಂದೆ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಕಾಲೋನಿ ನಿವಾಸಿಗಳು ಎಚ್ಚರಿಸಿದ್ದಾರೆ.

**ವರದಿ ಶರಣು ಹುಣಸಗಿ**



**ಬಸವಕಲ್ಯಾಣ ನಗರ ಠಾಣೆ ಪಿ.ಎಸ್.ಐ ಅಂಬರೀಶ್ ವಾಗ್ಮೊಡೆ ರವರ ವರ್ಗಾವಣೆ**

**ಬಸವಕಲ್ಯಾಣ ನಗರ ಠಾಣೆಗೆ ನೂತನ ಪಿ. ಎಸ್. ಐ ಶ್ರೀ ಚಂದ್ರಶೇಖರ್ ನಾರಾಯಣಪೂರೆ ನೇಮಕ**




ಅದೇಕೋ ಬಾನಿನ ಬೆಳಕು ಕಾಣೆಯಾಗಿತ್ತು
ಸೂರ್ಯ ಮೋಡದ ಮುಸುಕಿನಲ್ಲಿ ಎಲ್ಲೋ ಮಾಯವಾಗಿದ್ದ
ಕಪ್ಪು ಮೋಡ ದಟ್ಟನೆ ಆವರಿಸಿತ್ತು ಪ್ರಕೃತಿಯೇ ಮಬ್ಬಾಗಿ ಕಳೆಗುಂದಿತ್ತು
ತಂಪು ತಂಗಾಳಿ ಏಕೋ ಜೋರಾಗಿತ್ತು ಧರೆಯ ಬಿಸಿಗೆ ತಂಪೆರೆಯಲು ಅಂಬರ ಸಜ್ಜಾಗಿತ್ತು
ನೀಲಿ ಗಗನದಿ ಬಿತ್ತೊಂದು ಹನಿ ಭೂಮಿ ತಾಗಿ ಮಣ್ಣು ಕಂಪು ಸೂಸಿ ಆ ಮಧುರ ವಾಸನೆ
ಹೇಳಿತು ಮಳೆಗಾಲ ಆರಂಭದ ಮುನ್ಸೂಚನೆ ಇದು ವಾತಾವರಣ ಬದಲಾಗಿ ತಂಪಾಯ್ತು
ಭುವಿ ಮಳೆಗಾಲದ ಸಮಯದಲ್ಲಿ
ಕವಿದ ಮೊಡವ ಸರಿಸಿ ತೇಲಿ ಬಂದ ತಂಗಾಳಿ ಧರೆಗೆ ಕಾವ ತಣಿಸಿ
ಜೀವ ಸಂಕುಲದ ಉಸಿರಾಗಿ ಶುರುವಾದ ಮುಂಗಾರು
ಹಸಿರಿಗೆ ಜೀವವಾಗಿ ಹೂ ದುಂಬಿಗೆ ಸಂತಸವಾಗಿ ಮನಕೆ ತಂಪಾಗಿ ಬೀಸಿದೆ...

**– ಮಾನಸ ಜೀವನ್**

## ಯುವಕರು ಗ್ರಂಥಾಲಯಕ್ಕೆ ಬಂದು ಪುಸ್ತಕಗಳನ್ನು ಓದಬೇಕು : ಎ.ಅಬ್ದುಲ್ ಮಾಲಿಕ್




**ಚಾಮರಾಜನಗರ :** ಗುಂಡ್ಲುಪೇಟೆ ಪಟ್ಟಣದ ಸಾರ್ವಜನಿಕ ಗ್ರಂಥಾಲಯದಲ್ಲಿ ಗ್ರಂಥಾಲಯಗಳ ಪಿತಾಮಹ ಎಸ್.ಆರ್.ರಂಗನಾಥ್ ರವರ ಜನ್ಮದಿನದ ಪ್ರಯುಕ್ತ ಗ್ರಂಥಪಾಲಕರ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಗ್ರಂಥಪಾಲಕರಾದ ಸಿ. ಜಯಸ್ವಾಮಿರವರು ಸಾರ್ವಜನಿಕರು ಮತ್ತು ವಿದ್ಯಾವಂತರು ಹೆಚ್ಚು ಪುಸ್ತಕಗಳು ಹಾಗೂ ದಿನ ಪತ್ರಿಕೆಗಳನ್ನು ಗ್ರಂಥಾಲಯಕ್ಕೆ ಬಂದು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕೆಂದು ಮನವಿ ಮಾಡಿದರು. ಇದೇ ವೇಳೆ ಕರ್ನಾಟಕ ಕಾವಲು ಪಡೆಯ ತಾಲ್ಲೂಕು ಅಧ್ಯಕ್ಷರಾದ ಎ. ಅಬ್ದುಲ್ ಮಾಲಿಕ್ ಮಾತನಾಡಿ ಗ್ರಂಥಾಲಯ ಪಾಲಕರ ದಿನಾಚರಣೆ ಪ್ರಯುಕ್ತ ಇಂದಿನ ಯುವಕರು ಮೊಬೈಲ್ ಹೆಚ್ಚು ಬಳಸುವುದನ್ನು ಬಿಟ್ಟು ಗ್ರಂಥಾಲಯಕ್ಕೆ ಬಂದು ಪುಸ್ತಕಗಳನ್ನು ಓದಬೇಕೆಂದರು. ಇದೇ ವೇಳೆ ಗ್ರಂಥಾಲಯ ಸಿಬ್ಬಂದಿಯವರಾದ ಕುಮಾರಿ ಸಿಂಧು, ವಕೀಲರಾದ ಕಾಳಸ್ವಾಮಿ, ಮಹೇಂದ್ರ, ಶಂಕರ್, ಮಿಮಿಕ್ರಿರಾಜು ಸೇರಿದಂತೆ ಪುಸ್ತಕ ಪ್ರಿಯರು ಹಾಜರಿದ್ದರು.

**ವರದಿ ಗುಂಡ್ಲುಪೇಟೆ ಕುಮಾರ್**

ಕರುನಾಡ ಕಂದ
ಸಂಪುಟ 04 | ಸಂಚಿಕೆ 19
ದಿನಾಂಕ: 16-08-2025 ಪುಟಗಳು:16

# ಯಡ್ರಾಮಿ ಪಟ್ಟಣ ಪಂಚಾಯತ್ ವಿರುದ್ದ ಧರಣಿ: ದಂಡಾಧಿಕಾರಿಯಿಂದ ಮನವರಿಕೆಗೆ ಯತ್ನ




ಕಲಬುರಗಿ ಜಿಲ್ಲೆಯ ಯಡ್ರಾಮಿ ಪಟ್ಟಣ ಪಂಚಾಯತಿ ವಿರುದ್ಧ ಬಿಸಿಲು ನಾಡಿನ ಹಸಿರು ಸೇನೆ ಪಟ್ಟಣ ವತಿಯಿಂದ ಪಟ್ಟಣ ಪಂಚಾಯತಿ ಮುಂಭಾಗದಲ್ಲಿ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ಹಮ್ಮಿಕೊಂಡು ನಾಲ್ಕು ದಿನ ಕಳೆದ ಪ್ರಯುಕ್ತ ತಾಲೂಕು ದಂಡಾಧಿಕಾರಿಗಳಾದ ಯಲ್ಲಪ್ಪ ಸುಭೇದಾರ ಅವರು ಧರಣಿ ಸ್ಥಳಕ್ಕೆ ಬಂದು ಮನವರಿಕೆಗೆ ಯತ್ನ ಮಾಡಿದರು.

ಪಟ್ಟಣ ಪಂಚಾಯತಿಗೆ 2021 ರಿಂದ 2025 ವರೆಗೂ ಸರಕಾರದಿಂದ ಬಂದ ಸಂಪೂರ್ಣ ಅನುದಾನ ದುರುಪಯೋಗ ಆಗಿದ್ದು ಈ ದುರುಪಯೋಗ ಆದ ಹಗರಣವನ್ನು ಜಿಲ್ಲಾಡಳಿತ ತನಿಖಾ ತಂಡ ರಚನೆ ಮಾಡಿ ಸಂಪೂರ್ಣ ತನಿಖೆ ಮಾಡುವಂತೆ ಒತ್ತಾಯಿಸಿ ಧರಣಿ ನಡೆಸಲಾಗುತ್ತಿದ್ದು ತಾಲೂಕು ದಂಡಾಧಿಕಾರಿಗಳು ಧರಣಿ ಸ್ಥಳಕ್ಕೆ ಆಗಮಿಸಿ ತಮ್ಮ ಎಲ್ಲಾ ತರಹದ ದಾಖಲೆಗಳು ನೀಡಲಾಗುವುದು ತಮ್ಮ ಧರಣಿ ಹಿಂಪಡೆದುಕೊಳ್ಳಿ ಎಂದು ಧರಣಿ ನಿರತ ಹೋರಾಟಗಾರರಿಗೆ ಮನವರಿಕೆ ಮಾಡಿದರು. ಸಂಘಟನಾಕಾರರು ಪ್ರತಿಕ್ರಿಯೆ ನೀಡಿ ತಕ್ಷಣ ಜಿಲ್ಲಾಡಳಿತ 2021-2025 ವರೆಗೂ ಬಂದ ಸಂಪೂರ್ಣ ಅನುದಾನ ಯಾವುದಕ್ಕೆ ಬಳಕೆ ಮಾಡಲಾಗಿದೆ ಎಂದು ತನಿಖಾ ತಂಡ ರಚನೆ ಮಾಡಿ ಅನುದಾನ ದುರುಪಯೋಗ ಆದ ಹಣದ ಬಗ್ಗೆ ತನಿಖೆ ಮಾಡಬೇಕು ಆಗ ಮಾತ್ರ ಧರಣಿ ಹಿಂದೆ ಪಡೆದುಕೊಳ್ಳುತ್ತೇವೆ ಎಂದು ಹೇಳಿದರು.

ಪಟ್ಟಣ ಪಂಚಾಯತಿಯಿಂದ ಅನಧಿಕೃತ ಸರಕಾರಿ ಜಾಗದಲ್ಲಿ ಫಾರ್ಮ್ ನಂಬರ 3 ವಿತರಣೆ ಮಾಡಲಾಗಿದೆ ಅದರ ಬಗ್ಗೆ ಹಾಗೂ ಪಟ್ಟಣ ಪಂಚಾಯತಿಯ ತೆರಿಗೆ ಹಣ ಕೂಡಾ ಯಾವುದಕ್ಕೆ ಬಳಕೆ ಮಾಡಲಾಗಿದೆ ತನಿಖೆ ಮಾಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ತಾಲೂಕು ದಂಡಾಧಿಕಾರಿ ಯಲ್ಲಪ್ಪ ಸುಭೇದಾರ, ಆರಕ್ಷಕ ಉಪನಿರಿಕ್ಷಕರು ವಿಶ್ವನಾಥ ಮುದರಡ್ಡಿ, ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಶಾಮ ಭಜಂತ್ರಿ, ಲಕ್ಷ್ಮಿಕಾಂತ ಮದ್ದರಕಿ ರಾಜ್ಯ ರೈತ ಸಂಘ ರಾಜ್ಯ ಉಪಾಧ್ಯಕ್ಷರು ಬೆಂಗಳೂರು, ಶಫೀಉಲ್ಲಾ ದಖನಿ, ಲಾಳೇಬಾಸ ಮನಿಯಾರ, ವಿರೇಶ ಕೆರೆಪ್ಪಗೌಡ, ಮಹೇಂದ್ರ ಬಾಲೂರ, ಮಂಜುನಾಥ ಕುಲಕರ್ಣಿ, ಮಾಳುಕಾರಗುಂಡ, ಸುರೇಶ ಬಜಂತ್ರಿ, ಹಣಮಂತ ಕಡಕೋಳ,ನಿಂಗಣ್ಣ ಮ್ಯಾಗೇರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

**ವರದಿ ರಾಚೋಟಯ್ಯ ಹಿರೇಮಠ**

# ಶ್ರೀ ರೇವಣಸಿದ್ದೇಶ್ವರ ಜಾತ್ರಾ ಮಹೋತ್ಸವ



ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ ಶ್ರಾವಣಮಾಸದ ಪ್ರಯುಕ್ತ ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಹೊರ್ತಿ ಗ್ರಾಮದಲ್ಲಿ ಶ್ರೀ ರೇವಣಸಿದ್ದೇಶ್ವರ ಜಾತ್ರಾ ಮಹೋತ್ಸವ ಬಹಳ ಅದ್ದೂರಿಯಾಗಿ ಜರುಗಿತು. ಈ ಜಾತ್ರಾ ಮಹೋತ್ಸವದಲ್ಲಿ ಬಿ. ಡಿ. ಪಾಟೀಲ್ ಅವರು ಪೂಜೆ ಕಾರ್ಯಕ್ರಮದಲ್ಲಿ ಪೂಜೆ ಸಲ್ಲಿಸಿ ಮಾತನಾಡಿದರು. ಸುತ್ತ ಮುತ್ತಲೂ ಮಳೆ ಜೋರಾಗಿ ಸುರಿಯುತ್ತಿದ್ದರೂ ಈ ಜಾತ್ರೆಯಲ್ಲಿ ಮಳೆ ಇರಲಿಲ್ಲ ಜಾತ್ರೆ ಮುಗಿದ ತಕ್ಷಣ ಮಳೆ ಜೋರಾಗಿ ಸು-ರಿಯಿತು ಇದು ರೇವಣಸಿದ್ದೇಶ್ವರ ದೇವರ ಪವಾಡ ಎಂದು ಜೆಡಿ-ಎಸ್ ಮುಖಂಡರಾದ ಬಿ.ಡಿ. ಪಾಟೀಲ ಮತ್ತು ಬಿಜೆಪಿ ಕಾಸುಗೌಡ ಬಿರಾದಾರ ಅವರು ಹೇಳಿದರು ಇವರೊಂದಿಗೆ ನಿಂಬಾಳ ಜೆ. ಡಿ. ಎಸ್. ಯುವ ಘಟಕದ ಅಧ್ಯಕ್ಷರು ಬನಸಿದ್ದ ಟೆಂಗಳೆ ಮತ್ತು ಕಾಂತು ಲೋಕಂಡೆ, ಕಾರ್ತಿಕ ನೀಲಂಗಿ ಸೇರಿದಂತೆ ಇತರರು ಭಾಗವಹಿಸಿದ್ದರು.

**ವರದಿ ಆನಂದ ಹರಿಜನ**



ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕು ಸರಕಾರಿ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿಗಳಾದ ಶ್ರೀ ಯುವರಾಜ ಬಿರಾದಾರ ಅವರ ಜೊತೆ "ಕರುನಾಡ ಕಂದ" ಪತ್ರಿಕೆ.

# ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಕ್ರೀಡಾಕೂಟಗಳು ಸಹಕಾರಿಯಾಗಲಿವೆ :ಜಿಗಣೆಹಳ್ಳಿ ನೀಲಕಂಠಪ್ಪ



ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಪಂಚೆಹೊಸಹಳ್ಳಿ ಎಮ್ಮೆದೊಡ್ಡಿ ವಲಯ ಮಟ್ಟದ ಕ್ರೀಡಾಕೂಟವನ್ನು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಜಿಗಣಿಹಳ್ಳಿ ನೀಲಕಂಠಪ್ಪ ಉದ್ಘಾಟಿಸಿ ಮಾತನಾಡಿ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಕ್ರೀಡಾಕೂಟಗಳು ಸಹಕಾರಿಯಾಗಲಿವೆ, ಶಿಕ್ಷಣದ ಜೊತೆಗೆ ಕ್ರೀಡೆಯೂ ಮುಖ್ಯ, ಮಕ್ಕಳು ಮೊಬೈಲ್ ಗೀಳಿನಿಂದ ಹೊರಬಂದು ಗ್ರಾಮೀಣ ಆಟಗಳಲ್ಲಿ ತೊಡಗಿಸಿಕೊಳ್ಳಬೇಕು ಈ ನಿಟ್ಟಿನಲ್ಲಿ ಸರ್ಕಾರ ಮಕ್ಕಳಿಗೆ ಉತ್ತೇಜನ ನೀಡಲು ರಾಜ್ಯಮಟ್ಟದವರೆಗೂ ಕ್ರೀಡಾಕೂಟಗಳನ್ನು ಆಯೋಜಿಸುತ್ತಿದೆ ಎಂದರು. ಎಮ್ಮೆದೊಡ್ಡಿ, ಕೆ ಹೊಸಳ್ಳಿ ಪಟ್ಟಣಗೆರೆ ಕ್ಲಸ್ಟರ್ ವ್ಯಾಪ್ತಿಯ 15 ಶಾಲೆಗಳ ಮಕ್ಕಳು ಕ್ರೀಡಾಕೂಟದಲ್ಲಿ ಭಾಗವಹಿಸಿದ್ದರು. ಗ್ರಾಮದ ಹಿರಿಯ ಹನುಮಂತಪ್ಪ, ಎಸ್ ಡಿ ಎಮ್ ಸಿ ಅಧ್ಯಕ್ಷ ನಾಗರಾಜು, ಗೌಡರಾದ ಮಂಜಪ್ಪ, ಚಂದ್ರಪ್ಪ, ರವಿ, ಅಜ್ಜಯ್ಯ ಗ್ರಾಮ ಪಂಚಾಯಿತಿ ಸದಸ್ಯರಾದ ಪರಮೇಶ್ವರಪ್ಪ, ಶಿವರುದ್ರಪ್ಪ, ಶಿಕ್ಷಕರ ಸಂಘದ ಜಿಲ್ಲಾ ಉಪಾಧ್ಯಕ್ಷ ಜಗದೀಶ್, ಮುಖ್ಯ ಶಿಕ್ಷಕರಾದ ರಾಜಪ್ಪ, ನವೀನ್, ಬಸಪ್ಪ ,ಮೈಲಾರಪ್ಪ ಸೇರಿದಂತೆ ಇತರರಿದ್ದರು.

**ವರದಿ ಮಲ್ಲಿದೇವಿಹಳ್ಳಿ ಶ್ರೀನಿವಾಸ್ವರದಿ ಆನಂದ ಹರಿಜನ**

# ಉತ್ತಮ ಆರೋಗ್ಯಕ್ಕೆ ಸಾವಯುವ ಗೊಬ್ಬರ ಬೇಕು : ಬಳ್ಳೆಕೆರೆ ವಿಶ್ವನಾಥ್



**ಚಿಕ್ಕಮಗಳೂರು/ ಕಡೂರು** : ಇತ್ತೀಚಿನ ದಿನಗಳಲ್ಲಿ ಹೃದಯಾಘಾತ, ಶುಗರ್, ಬಿಪಿ ಕಾಯಿಲೆಗಳು ಪ್ರತಿಯೊಬ್ಬರಲ್ಲಿಯೂ ಸಾಮಾನ್ಯ ಎಂಬಂತಾಗಿದೆ ಇದಕ್ಕೆ ನಾವುಗಳು ಉಪಯೋಗಿಸುವ ಆಹಾರ ಕಾರಣ, ರಾಸಾಯನಿಕ ರಸಗೊಬ್ಬರ ಬಳಸದೆ ಸಾವಯುವ ಗೊಬ್ಬರದಿಂದ ಬೆಳೆಯುವ ಸೊಪ್ಪು ತರಕಾರಿಗಳನ್ನು ಉಪಯೋಗಿಸುವುದರ ಮೂಲಕ ಉತ್ತಮ ಆರೋಗ್ಯವನ್ನು ಪಡೆಯಬೇಕಿದೆ ಎಂದು ಕಡೂರು ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಅಧ್ಯಕ್ಷರಾದ ಬಳ್ಳೇಕೆರೆ ವಿಶ್ವನಾಥ್ ತಿಳಿಸಿದರು.

ತಾಲೂಕು ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘದ ರೈತ ಬಜಾರ್ ನಲ್ಲಿ ನೂತನವಾಗಿ ಪ್ರಾರಂಭಗೊಂಡಿರುವ ಯಾವುದೇ ರಸಗೊಬ್ಬರಗಳನ್ನು ಬಳಸದೆ ಮನೆಯ ಹಸುಗೊಬ್ಬರವನ್ನು ಉಪಯೋಗಿಸಿಕೊಂಡು ವೈ. ಮಲ್ಲಾಪುರದ ರೈತ ಷಣ್ಮುಖ ಇವರು ಬೆಳೆಯುತ್ತಿರುವ ಸೊಪ್ಪು ಹಾಗೂ ತರಕಾರಿ ಮಳಿಗೆಯನ್ನು ಪ್ರಾರಂಭಿಸಿ ಮಾತನಾಡಿ ಇದೇ ರೀತಿಯಲ್ಲಿ ಬೆಳೆಯುವ ರೈತರಗಳಿಂದ ನೇರವಾಗಿ ರೈತ ಬಜಾರ್ ನಿಂದ ಕೊಂಡು ನಿಖರವಾದ ಬೆಲೆಯಲ್ಲಿ ಗ್ರಾಹಕರಗಳಿಗೆ ದೊರಕಿಸಲು ರೈತ ಬಜಾರ್ ನಲ್ಲಿ ರೈತರಿಗೆ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಪ್ರಗತಿ ಉತ್ಪಾದಕರ ಸಿಇಓ ಕುಮಾರ್ , ನಿರ್ದೇಶಕರುಗಳಾದ ಮಲ್ಲೇಶ್ವರ ಧರ್ಮಣ್ಣ, ಎಸ್. ಎಸ್. ಜಯಣ್ಣ, ಚಿರನಹಳ್ಳಿ ಬಸವರಾಜ್, ಅಲೆಮಾರಿ ಅಭಿವೃದ್ಧಿ ನಿಗಮದ ಜಿಲ್ಲಾ ಅನುಷ್ಠಾನ ಸಮಿತಿ ಸದಸ್ಯ ಮಲ್ಲಿದೇವಿಹಳ್ಳಿ ಶ್ರೀನಿವಾಸ್ ಇದ್ದರು.

**ವರದಿ ಮಲ್ಲಿದೇವಿಹಳ್ಳಿ ಶ್ರೀನಿವಾಸ್**

ಕರುನಾಡ ಕಂದ
ಸಂಪುಟ 04 । ಸಂಚಿಕೆ 19
ದಿನಾಂಕ: 16–08–2025 ಪುಟಗಳು:16

# ಶ್ರಾವಣ ಮಾಸ ನಿಮಿತ್ಯ ನಡೆದ ಪವಾಡ ಪುರುಷ ಕಲಬುರ್ಗಿ ಶ್ರೀ ಶರಣಬಸವೇಶ್ವರ ಲೀಲಾಮೃತ ಪುರಾಣ ಪ್ರವಚನ



**ಬಳ್ಳಾರಿ/ಕಂಪ್ಲಿ:** ಪಟ್ಟಣದಲ್ಲಿ ಬಸವಾದಿ ಶರಣರು ಹಾಕಿಕೊಟ್ಟ ಪರಂಪರೆ, ಧಾರ್ಮಿಕ ಆಚರಣೆಗಳು ಇಂದಿಗೂ ನಡೆದುಕೊಂಡು ಬಂದಿವೆ. ಇಲ್ಲಿನ ಸಾಂಗತ್ರಯ ಸಂಸ್ಕೃತ ಪಾಠಶಾಲೆಯಲ್ಲಿ ಶರಣಬಸವೇಶ್ವರ ಪುರಾಣ ಕಾರ್ಯಕ್ರಮಕ್ಕೆ ತನ್ನದೇ ಆದ ಇತಿಹಾಸವಿದೆ. ವಿವಿಧ ಧಾರ್ಮಿಕ ಆಚರಣೆಗಳು ಶ್ರಾವಣ ಮಾಸ ನಿಮಿತ್ಯ ನಡೆದ ಪವಾಡ ಪುರುಷ ಕಲಬುರ್ಗಿ ಶ್ರೀ ಶರಣಬಸವೇಶ್ವರ ಲೀಲಾಮೃತ ಪುರಾಣ ಪ್ರವಚನದಲ್ಲಿ ಶ್ರೀ ಶರಣಬಸವೇಶ್ವರ ರವರ ವಿವಾಹ ಕಾರ್ಯಕ್ರಮ ನಡೆಯಿತು.

ವಧು ಕಡೆಯಲ್ಲಿ ಬಾಳೆಕಾಯಿ ಅಮರಪ್ಪ ವರನ ಕಡೆಯಲ್ಲಿ ವಾಗೀಶ್ ಪಂಡಿತಾರಾಧ್ಯ ದಂಪತಿಗಳು ಭಾಗವಹಿಸಿ ವಿವಾಹ ಕಾರ್ಯಕ್ರಮ ನೆರವೇರಿಸಿದರು.

ಪವಾಡ ಪುರುಷ ಕಲಬುರ್ಗಿ ಶ್ರೀ ಶರಣಬಸವೇಶ್ವರ ಅವರ ದಾಸೋಹ ಕಾಯಕ ಬರೀ ಮನುಜರಿಗೆ ಮಾತ್ರವೇ ಸೀಮಿತವಾಗಿರಲಿಲ್ಲ. ಇತರ ಪ್ರಾಣಿ ಹಾಗೂ ಹಕ್ಕಿಗಳಿಗೂ ನಡೆಯುತ್ತಿತ್ತು. ಅವರು ಕೃಷಿಯನ್ನು ತಮ್ಮ ಕಾಯಕವನ್ನಾಗಿಸಿಕೊಂಡಿದ್ದರು. ಹೊಲದಲ್ಲಿ ಹಕ್ಕಿಗಳ ಕಾಟದಿಂದ ಎಲ್ಲರೂ ಹಕ್ಕಿಗಳನ್ನು ಓಡಿಸುತ್ತಿದ್ದರು. ಹಕ್ಕಿಗಳು ಬೆಳೆಗಳಿಗೆ ಅಂಟಿಕೊಂಡಿರುವ ಹುಳುಗಳನ್ನು ತಿನ್ನುವುದರಿಂದ ಬೆಳೆಗಳು ಹಾಳಾಗುವುದು ಕಡಿಮೆಯಾಗುತ್ತದೆ ಎಂದರಿತ ಇವರು, ಹಕ್ಕಿಗಳ ಸಹಾಯದಿಂದ ಹೆಚ್ಚಿನ ಇಳುವರಿಯನ್ನು ಪಡೆಯಬಹುದೆಂದು ಹೊಲಕ್ಕೆ ಬರುವ ಹಕ್ಕಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದರು. ಇವರು ಜೋಳದ ಬೆಳೆಯನ್ನು ಬಿತ್ತಿದ್ದರು. ಹಕ್ಕಿಗಳು ಸಾಮಾನ್ಯ ಆಹಾರವಾದ ಕ್ರಿಮಿಕೀಟಗಳನ್ನು ತಿಂದದ್ದರಿಂದ ಒಳ್ಳೆಯ ಜೋಳದ ಬೆಳೆ ಬೆಳೆಯಿತು. ಇವರ ಜೋಳದ ಇಳುವರಿ ಊರಿನ ಮಂದಿಯನ್ನು ಬೆರಗಾಗಿಸಿತ್ತು. ಪರಿಸರದಲ್ಲಿನ ಜೀವ ವೈವಿದ್ಯಗಳ ನೆರವಿನಿಂದ ಕೃಷಿಯನ್ನು ಮಾಡಿ ಎಲ್ಲರಿಗೂ ಮಾದರಿಯಾದರು. ಲೀಲಾಮೃತ ಪುರಾಣ ಪ್ರವಚನದಲ್ಲಿಬರುವ ಈ ಸನ್ನಿವೇಶಕ್ಕೆ ತಕ್ಕಂತೆ ಸೋಮವಾರ ಶರಣಬಸವೇಶ್ವರರವರ ಪುರಾಣದಲ್ಲಿ ರೈತರಿಗೋಸ್ಕರ ರಾಶಿ ಪೂಜೆಯನ್ನು ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಪುರಾಣ ಪ್ರವಚನಾಕಾರರಾದ ಶ್ರೀ ಗವಿಸಿದ್ದೇಶ್ವರ ಶಾಸ್ತ್ರಿಗಳು, ತಬಲಾ ವಾದಕರಾದ ಚಿದಾನಂದ ಗವಾಯಿಗಳು, ಸಂಸ್ಕೃತ ಪಾಠಶಾಲೆಯ ಪ್ರಾಚಾರ್ಯರಾದ ಘನಮಠದಯ್ಯ ಹಿರೇಮಠ, ಹಿರಿಯರಾದ ಕೆ. ಎಂ. ಹೇಮಯ್ಯಸ್ವಾಮಿಯವರು, ಅರವಿ ಬಸನಗೌಡರು, ವಾಲಿ ಕೊಟ್ರಪ್ಪ, ಎಸ್. ಡಿ. ಬಸವರಾಜ, ಪಾಠಶಾಲೆ ಅಧ್ಯಕ್ಷ ಇಟಗಿ ಬಸವರಾಜ್ ಗೌಡ, ಪದಾಧಿಕಾರಿಗಳಾದ ಅಲಬನೂರು ಬಸವರಾಜ, ಜಿ.ಹೆಚ್. ಶಶಿಧರಗೌಡ, ಗಂಡಿ ಗಣೇಶ, ಟಿ.ಸುರೇಶಗೌಡ ಶಿವಮೂರ್ತಿಸ್ವಾಮಿ, ಶಂಕರಪ್ಪ ಎಲಿಗಾರ್ ವೆಂಕಟರೆಡ್ಡಿ, ಮರಿ ಶೆಟ್ರು ವಿಜಯಕುಮಾರ, ಜಡೇಯಸ್ವಾಮಿ, ಸಜೇದ್ದ ಶರಣಪ್ಪ, ಎಚ್.ಎಸ್. ವೀರೇಶ, ಶಂಕ್ರಪ್ಪ, ಫುಡ್ ಮಂಜುನಾಥ, ಅಕ್ಕಮಾದೇವಿ ಮಹಿಳಾ ಮಂಡಳಿಯವರು ಸೇರಿದಂತೆ ಸಕಲ ಸದ್ಭಕ್ತರು ಉಪಸ್ಥಿತರಿದ್ದರು.

**ವರದಿ ಜಿಲಾನಸಾಬ್ ಬಡಿಗೇರ**

# ಕಾರ್ತಿಕೇಶ್ವರ ಶ್ರೀಗಳ ಅಮೃತ ಹಸ್ತದಿಂದ ಮಕ್ಕಳಿಗೆ ಅಕ್ಷರಭ್ಯಾಸ ಸಂಪನ್ನ




**ಯಾದಗಿರಿ/ ಗುರುಮಠಕಲ್:** ಪಟ್ಟಣದ ಲಕ್ಷ್ಮೀ ನಗರದ ಶ್ರೀ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ಷ. ಬ್ರ.108 ಶ್ರೀ ಅಭಿನವ ಕಾರ್ತಿಕೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಮಳಖೇಡ ಶ್ರೀಗಳ ಸಮ್ಮುಖದಲ್ಲಿ ಅಕ್ಷರಾಭ್ಯಾಸ ಕಾರ್ಯಕ್ರಮ ಜರುಗಿತು.

ಬುದ್ಧಿವಂತಿಕೆ ಮತ್ತು ಜ್ಞಾನದ ಸಂಕೇತವಾಗಿರುವ ಅಕ್ಷರಾಭ್ಯಾಸವನ್ನು 2 ವರ್ಷದಿಂದ 6 ವರ್ಷದ ವರೆಗಿನ ಮಕ್ಕಳೊಂದಿಗೆ ಸುಮಾರು 20ಕ್ಕೂ ಹೆಚ್ಚು ಪೋಷಕರು ಪಾಲ್ಗೊಂಡಿದ್ದರು.

ಹಿಂದೂ ಧರ್ಮದ ಪದ್ಧತಿಗಳಲ್ಲಿ ಅಕ್ಷರಭ್ಯಾಸ ಮಹತ್ವದ ಪಾತ್ರ ವಹಿಸಿದ್ದು, ಬುದ್ಧಿ ಕರ್ಮ ಫಲದಿಂದ ಕೂಡಿದ್ದು, ಶ್ರಾವಣ ರಾಜಯೋಗದಲ್ಲಿ ಮಕ್ಕಳ ಅಕ್ಷರಬ್ಯಾಸದಿಂದ ಮುಂದಿನ ಭವಿಷ್ಯ ಉಜ್ವಲವಾಗಲಿ ಎಂದು ಶುಭ ಕೋರಿದರು.

ಕಾರ್ಯಕ್ರಮದಲ್ಲಿ ಬಿ. ಬಿ. ಸ್ವಾಮಿ, ಬಾಲಪ್ಪ ದಾಸರಿ, ಪನ್ನ ಲಾಲ್ ಪಟೇಲ್, ಸಿದ್ರಾಮ ಸ್ವಾಮಿ, ಬಸ್ಸಪ್ಪ ಸಂಜನೊಳ, ಪ್ರವೀಣ್ ಪಟೇಲ್, ಮಲ್ಲಿಕಾರ್ಜುನ ಕಾಕಲವರ್, ಮೋಹನ್ ರೆಡ್ಡಿ, ಬಾಲಪ್ಪ ಸಿರಿಗೆಂ, ಶಿವ ಕುಮಾರ್ ಜಡಾರ, ವಿಜಯ ಕುಮಾರ್ ಅಲೆಮಾನಿ, ಮಂಜುನಾಥ್ ಮನ್ನೇ , ಜಗದೀಶ್ ಶಹಾಪೂರ್ ಕರ್ ಸೇ–ರಿದಂತೆ ಇನ್ನೂ ಹಲವರು ಕಾರ್ಯಕ್ರಮದಲ್ಲಿ ಭಾಗಿಯಾದರು.

**ವರದಿ: ಜಗದೀಶ್ ಕುಮಾರ್ ಭೂಮಾ**




# ವಿಷ್ಣುವರ್ಧನ್ ಸಮಾಧಿ ನೆಲಸಮ: ರಾಘವೇಂದ್ರ ಪುಟ್ಟಿ ಖಂಡನೆ



**ಬಳ್ಳಾರಿ / ಕಂಪ್ಲಿ :** ಬೆಂಗಳೂರಿನ ಅಭಿಮಾನ್ ಸ್ಟುಡಿಯೋದಲ್ಲಿದ್ದ ನಟ ದಿವಂಗತ ಡಾ. ವಿಷ್ಣುವರ್ಧನ್ ಅವರ ಸಮಾಧಿಯನ್ನು ರಾತ್ರೋರಾತ್ರಿ ನೆಲಸಮಗೊಳಿಸಿರುವುದು ತುಂಬಾ ನೋವಿನ ಸಂಗತಿಯಾಗಿದ್ದು ಪ್ರತಿಯೊಬ್ಬ ಕನ್ನಡಿಗರು ಖಂಡಿಸಬೇಕಾಗುತ್ತದೆ, ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ರಾಜಕುಮಾರ್, ವಿಷ್ಣುವರ್ಧನ್ ಅವರು ಜನಮಾನಸದಲ್ಲಿ ಸದಾ ಕಾಲಕ್ಕೂ ಉಳಿದಿರುವ ಮೇರು ನಟರು. ಇವರ ಆದರ್ಶಮಯ ಚಿತ್ರಗಳು ಎಲ್ಲಾ ಕಾಲಕ್ಕೂ ಮಾರ್ಗದರ್ಶಿಯಾಗಿವೆ. ಇಂತಹ ಮೇರು ನಟನ ಸಮಾಧಿಯನ್ನು ರಾತ್ರೋ ರಾತ್ರಿ ನೆಲಸಮ ಮಾಡಿರುವುದು ನಾಡಿನ ಜನರ ಭಾವನೆಯನ್ನು ಘಾಸಿಗೊಳಿಸಿದೆ. ರಾಜ್ಯ ಸರ್ಕಾರ ಸಮಾಧಿ ಸಮಸ್ಯೆಯನ್ನು ಇತ್ಯರ್ಥ ಪಡಿಸಬೇಕು ಎಂದು ಕ. ರ. ವೇ ( ನಾರಾಯಣಗೌಡ ಬಣ) ಕಂಪ್ಲಿ ತಾಲೂಕು ಯುವ ಘಟಕದ ಅಧ್ಯಕ್ಷ ರಾಘವೇಂದ್ರ ಪುಟ್ಟಿ ಆಗ್ರಹಿಸಿದರು.

10 ಗುಂಟೆ ಸಮಾಧಿಗಾಗಿ ಜಾಗವನ್ನು ಖರೀದಿ ಮಾಡಲು ಒಪ್ಪಿರುವ ನಟ, ನಿರ್ದೇಶಕ ಸುದೀಪ್ ರವರಿಗೆ ನಮ್ಮ ಬೆಂಬಲ ಇದೆ ಎಂದು ಇದೆ ಸಂದರ್ಭದಲ್ಲಿ ಬೆಂಬಲ ವ್ಯಕ್ತಪಡಿಸಿದರು.

**ವರದಿ : ಜಿಲಾನಸಾಬ್ ಬಡಿಗೇರ್**

ಕರುನಾಡ ಕಂದ
ಸಂಪುಟ 04 । ಸಂಚಿಕೆ 19
ದಿನಾಂಕ: 16–08–2025 ಪುಟಗಳು:16

## ಸಹ್ಯಾದ್ರಿ ಸಂಸ್ಥೆಗೆ ಈ ಬಾರಿಯೂ ನಿರೀಕ್ಷೆಗೂ ಮೀರಿ ರೂ. 11 ಕೋಟಿ ಅಧಿಕ ಲಾಭ

# ವಿಜಯದೇವ್ ನಾಯಕತ್ವಕ್ಕೆ ಮತ್ತೊಂದು ಗರಿಮೆ..





**ಶಿವಮೊಗ್ಗ :** ತೀರ್ಥಹಳ್ಳಿಯಲ್ಲಿ ಸುಮಾರು 2 ದಶಕಗಳ ಹಿಂದೆ ಸಹಕಾರಿ ಧುರೀಣ–ರತ್ನ ಶ್ರೀ ಬಸವಾನಿ ವಿಜಯದೇವ್ ರವರ ಸಾರಥ್ಯದಲ್ಲಿ ತಾಲ್ಲೂಕಿನ ಅಡಿಕೆ ಬೆಳೆಗಾರರಿಗೆ ಮತ್ತು ಜನ–ರಿಗೆ ಸ್ಥಳೀಯವಾಗಿಯೇ ಹಣಕಾಸು ಸಕಾಲಕ್ಕೆ ಒದಗಬೇಕೆಂಬ ದೂರ ದೃಷ್ಟಿ ಮತ್ತು ಅಚಲ ನಂಬಿಕೆಯಿಂದ ಪ್ರಾರಂಭಗೊಂಡ ಸಹ್ಯಾದ್ರಿ ವಿವಿದೋದ್ದೇಶ ಅಡಿಕೆ ಬೆಳೆಗಾರರ ಮಾರಾಟ ಸಹಕಾರ , ವಿ. ಸಂಘವು ಆಡಿಟ್ ವರದಿಯಲ್ಲಿ ಕಳೆದ ಸಾಲಿನಲ್ಲಿಯೂ 'ಎ' ಶ್ರೇಣಿಯನ್ನು ಪಡೆದುಕೊಂಡಿದ್ದು, ಜಿಲ್ಲೆಯಲ್ಲಿಯೇ ಒಂದು ಸದೃಡ ಸಹಕಾರ ಸಂಘವಾಗಿ ಬೆಳೆದಿದ್ದು, ಆ ಕಾಲದಲ್ಲಿ ಈ ಸಂಘದ ಬಗ್ಗೆ ಅಸಡ್ಡೆಯಾಗಿ ಮಾತಾನಾಡಿದವರ ಎದುರು ಬಸವಾನಿ ವಿಜಯದೇವ್ ರವರ ದೂರದೃಷ್ಟಿ, ಶಿಸ್ತು ಬದ್ದ ಆಡಳಿತ ನೀತಿ, ಕಠಿಣ ನಿಲುವು, ನಿರ್ದಾಕ್ಷಿಣ್ಯ ಸಾಲ ವಸೂಲಾತಿ ಕ್ರಮದಿಂದ ಈ ಸಂಘವು ಪ್ರತಿ ವರ್ಷದಂತೆ ಈ ವರ್ಷವು 11 ಕೋಟಿ 64 ಲಕ್ಷದ 11 ಸಾವಿರದ 745 ರೂಪಾಯಿಗಳ ಲಾಭವನ್ನು ಗಳಿಸಿದ್ದು, ರಾಜ್ಯದ ಗಮನವನ್ನು ತನ್ನತ್ತ ಸೆಳೆದಿದೆ. ಸಹ್ಯಾದ್ರಿ ಸಂಸ್ಥೆಯ ಎಲ್ಲಾ ವಿಭಾಗದ ಒಟ್ಟು ವ್ಯವಹಾರವು 1475 ಕೋಟಿಗೂ ಅಧಿಕವಾಗಿದ್ದು, ಸಂಘವು ಮುಂದಿನ ದಿನಗಳಲ್ಲಿ ಆರ್ಥಿಕವಾಗಿ ಸಬಲವಾಗಿರುವಂತೆ ಮಾಡಲು ಪಟ್ಟಣದ ಪ್ರಮುಖ ಸ್ಥಳಗಳಲ್ಲಿ ಬೆಲೆ ಬಾಳುವ ನಿವೇಶನಗಳನ್ನು ಕೊಂಡುಕೊಂಡಿದ್ದು, ಅವುಗಳ ಮಾರುಕಟ್ಟೆ ಮೌಲ್ಯವು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಲಿದೆ. ಸಂಸ್ಥೆಯ ಈ ಜಾಗಗಳ ಪ್ರಸಕ್ತ ಮಾರುಕಟ್ಟೆ ಮೌಲ್ಯವು ಸುಮಾರು 72 ಕೋಟಿಗೂ ಅಧಿಕವಾಗಿದೆ. ಅದರಂತೆ ಸಂಸ್ಥೆಯು ಗ್ರಾಹಕರ ಮೆಚ್ಚಿಗೆಯನ್ನು ಗಳಿಸಿದ್ದು, ಸುಮಾರು 104 ಕೋಟಿ 54 ಲಕ್ಷದ ಠೇವಣಿಯನ್ನು ಹೊಂದಿದ್ದು, ತನ್ನ ವ್ಯವಹಾರದ ಕಾರ್ಯವ್ಯಾಪ್ತಿಯನ್ನು ಕಲಬುರಗಿ ಜಿಲ್ಲೆಯನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಒಳಗೊಂಡಿದೆ. ಈಗಾಗಲೇ ಸುಮಾರು 140 ಕೋಟಿಗೂ ಅಧಿಕ ಸಾಲವನ್ನು ನೀಡಿದ್ದು, ಈ ವರ್ಷವೂ ಸಾಲ ವಸೂಲಾತಿ ವಿಷಯದಲ್ಲಿ ಶೇಕಡಾ 77% ಪ್ರಗತಿಯನ್ನು ಹೊಂದಿದೆ. ಅದರಂತೆ ಸಂಸ್ಥೆಯ ಮೇಲೆ ವಿಶ್ವಾಸವಿರಿಸಿರುವ ಷೇರುದಾರ ಸದಸ್ಯರ ಹಿತವನ್ನು ದೃಷ್ಟಿಯಾಗಿರಿಸಿಕೊಂಡು ವಿವಿಧ ಕಡೆಗಳಲ್ಲಿ ಸುಮಾರು 48 ಕೋಟಿ ರೂಪಾಯಿಗಳನ್ನು ವಿನಿಯೋಗಿಸಿದ್ದು, ಪ್ರತಿ ವರ್ಷವೂ ಲಾಭವನ್ನು ಗಳಿಸುತ್ತಾ ತನ್ನ ಸದಸ್ಯರಿಗೆ ಲಾಭಾಂಶವನ್ನು ಹಂಚುತ್ತಾ ತನ್ನ ಹಿರಿಮೆಯನ್ನು ಉಳಿಸಿಕೊಂಡಿದೆ.

### ಅಡಿಕೆ ವ್ಯವಹಾರದಲ್ಲಿ ರೂ.7.89 ಕೋಟಿ ಲಾಭ...

ಸಹ್ಯಾದ್ರಿ ಸಂಸ್ಥೆಯಲ್ಲಿ ಅಡಿಕೆ ವ್ಯವಹಾರವೇ ಉತ್ತಮ ಲಾಭವನ್ನು ತಂದು ಕೊಡುವ ಪ್ರಮುಖ ವ್ಯವಹಾರವಾಗಿರುತ್ತದೆ. ಸಂಸ್ಥೆಯಲ್ಲಿ ಸುಸಜ್ಜಿತವಾದ ಗೋದಾಮುಗಳನ್ನು ಹೊಂದಿದ್ದು, ರೈತರ ಅಡಿಕೆ ಮೂಟೆಗಳನ್ನು ಸುರಕ್ಷಿತವಾಗಿ ಕಾಪಾಡಲಾಗುವುದು. ಉತ್ತಮ ಗುಣಮಟ್ಟದ ಸುಣ್ಣ, ಮೈಲು ತುತ್ತಾ, ರಾಳ ಹಾಗೂ ಕೃಷಿ ಉಪಯೋಗಿ ಔಷಧಿಗಳನ್ನು ಮಾರಾಟ ಕೂಡಾ ಮಾಡುತ್ತಿದೆ. ಒಟ್ಟಾರೆಯಾಗಿ ಅಡಿಕೆ ವ್ಯವಹಾರದಿಂದ ಬಂದ ಕಮೀಷನ್ ಔಷಧಿ ವ್ಯಾಪಾರದಿಂದ ಹಾಗೂ ಸಂಸ್ಥೆಯಿಂದ ಷೇರುದಾರರು ವಿವಿಧ ಉದ್ದೇಶಗಳಿಗಾಗಿ ಪಡೆದ ಸಾಲಗಳ ಮೇಲಿನ ಬಡ್ಡಿಯಿಂದ ಬಂದ ಲಾಭ ಅಂದಾಜು 7 ಕೋಟಿ 89 ಲಕ್ಷದ 35 ಸಾವಿರದ 577 ರೂಪಾಯಿ.

### ಚೀಟಿನಿಧಿ ವಿಭಾಗದಲ್ಲಿ 3 ಕೋಟಿಗೂ ಅಧಿಕ ಲಾಭ

2015 ರಲ್ಲಿ ಪ್ರಾರಂಭಗೊಂಡ ಸಹ್ಯಾದ್ರಿ ಚೀಟಿನಿಧಿಯು, ಷೇರುದಾರರು ಮತ್ತು ತನ್ನ ಎಲ್ಲಾ ಚಂದಾದಾರರ ವಿಶ್ವಾಸವನ್ನು ಗಳಿಸಿ, ಸಂಸ್ಥೆಯ ಮತ್ತೊಂದು ಲಾಭ ತರುವ ವಿಭಾಗವಾಗಿ ಬೆಳೆದು " ಸಹ್ಯಾದ್ರಿ ಚೀಟಿನಿಧಿ " ಈಗಾಗಲೇ ಒಟ್ಟು 106 ಗುಂಪುಗಳನ್ನು ಪ್ರಾರಂಭಿಸಿದ್ದು, ಸುಮಾರು 4250 ಕ್ಕೂ ಅಧಿಕ ಚಂದಾದಾರರನ್ನು ಹೊಂದಿದ್ದು, ಚೀಟಿನಿಧಿಯಲ್ಲಿ ತೊಡಗಿಸಿಕೊಂಡ ಮೇಲೆ ಮನೆಯ ಶುಭ ಕಾರ್ಯ, ಮಕ್ಕಳ ವಿದ್ಯಾಭ್ಯಾಸ, ಮದುವೆ, ಆಸ್ತಿ ಖರೀದಿ ಮತ್ತು ಇನ್ನಿತರ ಆರ್ಥಿಕ ವ್ಯವಹಾರಗಳಿಗೆ ಚಂದಾದಾರರಿಗೆ ಅನುಕೂಲವಾಗಿರುತ್ತದೆ. ಒಟ್ಟಾರೆಯಾಗಿ ಈ ಸಾಲಿನಲ್ಲಿ ಸುಮಾರು 3 ಕೋಟಿ 12 ಲಕ್ಷದ 3 ಸಾವಿರದ 402 ರೂಪಾಯಿ ಅಧಿಕ ಲಾಭಾಂಶ ಗಳಿಸಿದೆ.

### ಸಹ್ಯಾದ್ರಿ ಫ್ಯುಯಲ್ಸ್ ನಲ್ಲಿ 40 ಲಕ್ಷಕ್ಕೂ ಅಧಿಕ ಲಾಭ..

ಸಹ್ಯಾದ್ರಿ ಸಂಸ್ಥೆಯ ಪೋಷಣೆಯಿಂದ ಹೆಮ್ಮರವಾಗಿ ಬೆಳೆಯುತ್ತಿರುವ, ಸಾರ್ವಜನಿಕರ ಹೆಗ್ಗಳಿಕೆ ಪಾತ್ರವಾಗಿರುವ ಸಹ್ಯಾದ್ರಿ ಫ್ಯೋಯಲ್ಸ್ ಗ್ರಾಹಕರಿಗೆ ದಿನದ 24 ಗಂಟೆಯ ಉತ್ತಮ ಸೇವೆಯ ಜೊತೆಗೆ ಗುಣಮಟ್ಟದ ಪೆಟ್ರೋಲ್, ಡಿಸೇಲ್ ಮತ್ತು ಆಯಿಲ್ ಒದಗಿಸುತ್ತಿದ್ದು, ಗ್ರಾಹಕರು ಈ ಬಂಕ್ ಬಗ್ಗೆ ಸಂತಸವನ್ನು ವ್ಯಕ್ತಪಡಿಸುತ್ತಿದ್ದಾರೆ. ಈ ಸಾಲಿನಲ್ಲಿ ಪೆಟ್ರೋಲ್ ಬಂಕ್ ನಿಂದ 40 ಲಕ್ಷದ 33 ಸಾವಿರದ 715 ರೂಪಾಯಿ ಲಾಭವಾಗಿರುತ್ತದೆ.

### ನಂದಿನಿ ಮಿಲ್ಕ್ ಪಾರ್ಲರ್ ಮತ್ತು ಎಮಿಷನ್ ಟೆಸ್ಟ್ : 6.30 ಲಕ್ಷ ಲಾಭ

ಸಹ್ಯಾದ್ರಿ ಪೆಟ್ರೋಲ್ ಬಂಕ್ ಅವರಣದಲ್ಲಿಯೇ ಪ್ರಾರಂಭವಾಗಿರುವ ಕೆ. ಎಂ. ಎಫ್. ಉತ್ಪನ್ನಗಳಾದ ತಾಜಾ ಹಾಲು,ಮೊಸರು,ತುಪ್ಪ, ಸಿಹಿ ತಿನಿಸುಗಳಾದ ಪೇಡಾ, ತಿಂಡಿ ತಿನಿಸುಗಳನ್ನು ದಿನದ 24 ಗಂಟೆಯೂ ಸೇವೆಯನ್ನು ಒದಗಿಸಲು ಮಳಿಗೆಯನ್ನು ಪ್ರಾರಂಭಿಸಿದ್ದು, ಈ ಸಾಲಿನಲ್ಲಿ ಒಟ್ಟು 6 ಲಕ್ಷದ 38 ಸಾವಿರದ 252 ರೂಪಾಯಿ ಲಾಭವನ್ನು ಗಳಿಸಿರುತ್ತದೆ.

### ಸರ್ವೋ ಇಂಡಿಯನ್ ಆಯಿಲ್ 7.70 ಲಕ್ಷ ಲಾಭ

ದೇಶದ ಪ್ರತಿಷ್ಟಿತ ಸರ್ವೋ ಇಂಡಿಯನ್ ಆಯಿಲ್ ಸಂಸ್ಥೆಯು ತನ್ನ ಉತ್ಪಾದನೆಗೆ ಅಧಿಕ ಬೇಡಿಕೆ ಇರುವ ಕಾರಣ ಶಿವಮೊಗ್ಗ ಜಿಲ್ಲೆಗೆ ನೀಡುವ ಏಜೆನ್ಸಿಯನ್ನು ಸಹ್ಯಾದ್ರಿ ಸಂಸ್ಥೆಯು ಪಡೆದುಕೊಂಡಿದ್ದು ನಮ್ಮ ತಾಲ್ಲೂಕಿಗೆ ಹೆಮ್ಮೆಯ ಗರಿ. ಗ್ರಾಹಕರಿಗೆ ಉತ್ತಮ ಆಯಿಲ್ ಒದಗಿಸುವಲ್ಲಿ ಸಂಸ್ಥೆಯು ಯಶಸ್ವಿಯಾಗಿದ್ದು, ಈ ಸಾಲಿನಲ್ಲಿ 7 ಲಕ್ಷದ 71 ಸಾವಿರದ 319 ರೂಪಾಯಿಗಳ ಲಾಭವನ್ನು ಪಡೆದಿರುತ್ತದೆ.

### ಸಹ್ಯಾದ್ರಿ ವಾಟರ್ ಪ್ಲಾಂಟ್ 8.29 ಲಕ್ಷ ಲಾಭ

ಸಂಸ್ಥೆಯ ಹೆಸರಿನಲ್ಲಿ ಶುದ್ಧ ಕುಡಿಯುವ ನೀರನ್ನು ಜನತೆಗೆ ಒದಗಿಸುವ ಸಲುವಾಗಿ ತೀರ್ಥಹಳ್ಳಿಯ ಬಾಳೇಬೈಲಿನಲ್ಲಿ ಘಟಕವನ್ನು ಕೊಂಡುಕೊಂಡು ಸಹ್ಯಾದ್ರಿ ಕುಡಿಯುವ ನೀರು ಎಂಬ ಹೆಸರಿನೊಂದಿಗೆ ವ್ಯವಹಾರವನ್ನು ನಡೆಸುತ್ತಿದ್ದು, ತಾಲ್ಲೂಕಿನಿಂದ ತಾಲ್ಲೂಕುಗಳಿಗೆ ಹಬ್ಬುತ್ತಿದ್ದು, ಸಹ್ಯಾದ್ರಿ ಕುಡಿಯುವ ನೀರಿಗೆ ಅಧಿಕ ಬೇಡಿಕೆ ಹೆಚ್ಚಾಗುತ್ತಲೇ ಇದೆ. ಅದರಂತೆ ಈ ಸಾಲಿನ ತನ್ನ ವ್ಯವಹಾರದಲ್ಲಿ 8 ಲಕ್ಷದ 29 ಸಾವಿರದ 480 ರೂಪಾಯಿಗಳ ಲಾಭವನ್ನು ತನ್ನದಾಗಿಸಿಕೊಂಡಿದೆ.

### ಸಹಕಾರದನಿ ವಾರ ಪತ್ರಿಕೆ

2011 ರ ಹೊತ್ತಿಗೆ ಪ್ರಾರಂಭಗೊಂಡ ಸಹಕಾರದನಿ ವಾರಪತ್ರಿಕೆ ಷೇರುದಾರರಿಗೆ ಸಂಸ್ಥೆಯ ಚಟುವಟಿ–ಕೆ ಹಾಗೂ ರಾಜ್ಯದ ಇನ್ನಿತರೆ ಉಪಯುಕ್ತ ಮಾಹಿತಿಗಳನ್ನು ಒದಗಿಸುತ್ತಿದ್ದು, ಜಿಲ್ಲೆಯಲ್ಲಿಯೇ ಪ್ರಥಮ ಸ್ಥಾನಗಳಿಸಿ ಹೆಮ್ಮೆಯ ವಾರಪತ್ರಿಕೆಯಾಗಿ ಹೊರಹೊಮ್ಮಿರುತ್ತದೆ.

### ಸರ್ವರಿಗೂ ಕೃತಜ್ಞತೆ ಸಲ್ಲಿಸಿದ ಅಧ್ಯಕ್ಷ ಶ್ರೀ ಬಸವಾನಿ ವಿಜಯದೇವ್...:

" ಸಹ್ಯಾದ್ರಿ ಸಂಸ್ಥೆಯು ಜನರ ಮತ್ತು ಷೇರುದಾರರ ವಿಶ್ವಾಸ ಮತ್ತು ನಂಬಿಕೆಯಿಂದ ಈ ಬಾರಿ ನಿರೀಕ್ಷೆಗೂ ಮೀರಿ ಲಾಭಗಳಿಸಿದ್ದು, ಇದೆಲ್ಲವೂ ನನ್ನಿಂದಲೇ ಆಗಿದೆ ಎಂದು ಹೇಳಲಾರೆ. ನಮ್ಮ ಸಂಸ್ಥೆಗೆ ಮೊದಲಿನಿಂದಲೂ ಸಹಕಾರ ಮತ್ತು ಸಲಹೆಯನ್ನು ನೀಡುತ್ತಾ ಬಂದಿರುವ ಮಲೆನಾಡು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರು, ಅಪೆಕ್ಸ್ ಬ್ಯಾಂಕ್ ನಿರ್ದೇಶಕರು, ಡಿ.ಸಿ.ಸಿ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಆರ್. ಎಮ್. ಮಂಜುನಾಥ ಗೌಡ ರವರಿಗೆ, ನಮ್ಮ ಕ್ಷೇತ್ರದ ಶಾಸಕರಾದ ಶ್ರೀ ಆರಗ ಜ್ಞಾನೇಂದ್ರ ರವರಿಗೂ, ಮಾಜಿ ಸಚಿವರಾದ ಶ್ರೀ ಕಿಮ್ಮನೆ ರತ್ನಾಕರ್ ರವರಿಗೂ, ಸಹಕಾರ ಇಲಾಖೆಯ ಎಲ್ಲಾ ಅಧಿಕಾರಿಗಳಿಗೂ ಹಾಗೂ ಡಿ.ಸಿ.ಸಿ ಬ್ಯಾಂಕ್ ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ಚಂದ್ರಕಲಾ ರವರ ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ಸಂಸ್ಥೆ ತನ್ನದೆಂಬ ಭಾವನೆಯಿಂದ ಶ್ರಮವಹಿಸಿ ದುಡಿಯುತ್ತಿರುವ ಸಿಬ್ಬಂದಿ ವರ್ಗ ಹಾಗೂ ಸಕಾಲದಲ್ಲಿ ಸೂಕ್ತ ಸಲಹೆ ಸಹಕಾರವನ್ನು ನೀಡುತ್ತಿರುವ ಸಂಸ್ಥೆಯ ನಿರ್ದೇಶಕರುಗಳು ಕಾರಣೀಕರ್ತರಾಗಿರುತ್ತಾರೆ. ಸಂಸ್ಥೆಯ ಬೆಳವಣಿಗೆಗೆ ಕಾರಣರಾದ ಇವರೆಲ್ಲರಿಗೂ ಕೃತಜ್ಞತೆ ಹಾಗೂ ಧನ್ಯವಾದ ಸಲ್ಲಿಸುತ್ತಿದ್ದೇನೆ " ಎಂದು ಮಾಧ್ಯಮ ಮಿತ್ರರೊಂದಿಗೆ ಸಂತೋಷದಿಂದ ಹಂಚಿಕೊಂಡರು.

**ವರದಿ ಪ್ರಸಾದ್ ಹೆಚ್. ಬಿ., ತೀರ್ಥಹಳ್ಳಿ**



ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಹೊರ್ತಿ ಪೊಲೀಸ್ ಠಾಣೆಯ ಪಿಎಸ್ಐ ಶ್ರೀ ರಾಕೇಶ್ ಬಗಲಿ ಅವರೊಂದಿಗೆ ಕರುನಾಡ ಕಂದ.

## " ಕರುನಾಡ ಕಂದ "ನಿಗೆ ಜೆ.ಡಿ.ಎಸ್ ಮುಖಂಡರಿಂದ ಸನ್ಮಾನ

ವಿಜಯಪುರ ಜಿಲ್ಲೆಯ ಇಂಡಿ ಮತಕ್ಷೇತ್ರದ ಜೆ. ಡಿ. ಎಸ್. ಮುಖಂಡರಾದ ಬಿ. ಡಿ. ಪಾಟೀಲರನ್ನು ಭೇಟಿ ಮಾಡಿ " ಕರುನಾಡ ಕಂದ " ಪತ್ರಿಕೆ ಕೊಟ್ಟ ಸಂದರ್ಭದಲ್ಲಿ " ಕರುನಾಡ ಕಂದ " ಇಂಡಿ ತಾಲ್ಲೂಕಿನ ವರದಿಗಾರರಾದ ಆನಂದ ಹರಿಜನ ಇವರಿಗೆ ಬಿ. ಡಿ. ಪಾಟೀಲರು ಮತ್ತು ಮಾಜಿ ಪುರಸಭೆ ಸದಸ್ಯರು ಸಿದ್ದು ಡಂಗೆಯವರು ಮತ್ತು ಮಹಮದ್ ಮುಲ್ಲಾ, ರಾಜು, ಛತ್ರಿ, ಪಜಲು ಮುಲ್ಲಾ, ಸಂತೋಷ್ ಎಡಿಗೆ ಹಾಗೂ ಬನಸಿದ್ದ ಟೆಂಗಳೆ, ಜೆಡಿಎಸ್ ಯುವ ಘಟಕದ ಅಧ್ಯಕ್ಷರು ನಿಂಬಾಳ ಸೇರಿದಂತೆ ಎಲ್ಲರೂ " ಕರುನಾಡ ಕಂದ " ಪತ್ರಿಕೆ ಇನ್ನೂ ಹೆಚ್ಚಿನ ಮಟ್ಟದಲ್ಲಿ ಬೆಳೆಯಬೇಕೆಂದು ಶುಭ ಹಾರೈಸಿ, ಸನ್ಮಾನ ಮಾಡಿದರು.



ಕರುನಾಡ ಕಂದ
ಸಂಪುಟ 04 । ಸಂಚಿಕೆ 19
ದಿನಾಂಕ: 16-08-2025 ಪುಟಗಳು:16

# ರೈತರ ಮೇಲೆ ಕನಿಕರವಿಲ್ಲದ ಕಾರ್ಯಾಂಗದ ಅಟ್ಟಹಾಸ, ಕಣ್ಣು ಮುಚ್ಚಿ ಕುಳಿತ ಶಾಸಕಾಂಗ

## ನ್ಯಾಯಾಂಗದ ಮೇಲಿನ ಭರವಸೆಯಲ್ಲಿ ಬದುಕು-ಅಂಬಾರಪುರ ದುರಂತ.



ಸರ್ಕಾರಿ ಕೆಲಸ ದೇವರ ಕೆಲಸ ಎಂದು ಬರೆದಿರುವುದನ್ನು ನಾವು ಹಲವಾರು ಸರ್ಕಾರಿ ಕಾರ್ಯಾಲಯಗಳಲ್ಲಿ ಕಾಣಬಹುದು, ದೇವರು ಎಂದೂ ನೀಡುವವನೇ ಹೊರತು ಕಿತ್ತುಕೊಳ್ಳುವವನು ಅಲ್ಲ ಆದರೆ ಈ ವ್ಯಾಖ್ಯಾನವನ್ನು ಮರೆತು ಕಾರ್ಯಾಂಗದ ಅಂದರೆ ಸರ್ಕಾರಿ ಅಧಿಕಾರಿಗಳು ಪೊಲೀಸರ ಭದ್ರತೆಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ಮರಗಳನ್ನು ಕಿತ್ತು ಹಾಕಿಸಿ ಮತ್ತು ಬೆಳೆಯ ಮೇಲೆ ಬುಲ್ಡೋಜರ್ ಹರಿಸಿ ಬೆಳೆಯ ನಾಶ ಮಾಡಿರುವ ಕೃತ್ಯ ಬೆಳಕಿಗೆ ಬಂದಿದೆ. ಈ ಕೃತ್ಯ ನಡೆದಿರುವುದು ತುಮಕೂರು ಜಿಲ್ಲೆಯ ಚಿಕ್ಕನಾಯ್ಕನಹಳ್ಳಿಯ ಹುಳಿಯಾರು ಹೋಬಳಿಯ ಅಂಬಾರಪುರ ಗ್ರಾಮದಲ್ಲಿ.

ಇಲ್ಲಿ ಗಮನಿಸಬೇಕಾದ ಮುಖ್ಯ ವಿಷಯವೇನೆಂದರೆ ಮಾನವೀಯತೆ, ಒಂದು ಸಾವಿರಕ್ಕೂ ಹೆಚ್ಚು ಮರಗಳನ್ನು ಕಿತ್ತು ಹಾಕುವಾಗ ಅಲ್ಲಿ ನೆರೆದಿದ್ದ ಅಧಿಕಾ-ರಿಗಳಲ್ಲಿ ಆ ಮರಗಳಲ್ಲಿಯೂ ಜೀವವಿದೆ ಎಂದು ಒಂದಿಷ್ಟು ಕನಿಕರವಾಗಲಿ ಅಥವಾ ಮಾನವೀಯತೆಯಾಗಲಿ ಕಾಣದೆ ಇದ್ದದ್ದು, ಈ ಕೃತ್ಯ ಮಾಡಲು ಅಲ್ಲಿನ ರೈತರು ಹೇಳಿರುವಂತೆ ಸುಮಾರು 350 ಕ್ಕೂ ಹೆಚ್ಚು ಪೊಲೀಸರು ಭದ್ರತೆ ನೀಡಿರುವುದು ಅತಿ ಶೋಚನೀಯ ಸಂಗತಿ. ಇನ್ನೂ ಕಿತ್ತಂತಹ ಮರಗಳನ್ನು ಕಾಣದಂತೆ ಸಾಗಿಸಲಾಗಿದೆಯಂತೆ ಹಾಗೂ ಮಣ್ಣಿನಲ್ಲಿ ಹೂತಿದ್ದಾರೆ ಎನ್ನುವ ಆರೋಪಗಳಿವೆ.

ನಮ್ಮ ಧಾರ್ಮಿಕ ಪರಂಪರೆಯಲ್ಲಿ ತೆಂಗಿನ ಮರವನ್ನು ಕಲ್ಪವೃಕ್ಷ ಎಂದೂ ಕರೆಯುತ್ತೇವೆ ಹಾಗೂ ಆರಾಧಿಸುತ್ತೇವೆ, ಯಾವುದೇ ಶುಭಕಾರ್ಯವಾಗಲಿ ತೆಂಗಿನ ಕಾಯಿಯಿಲ್ಲದೆ ನೆರವೇರುವುದಿಲ್ಲ, ಇನ್ನು ತೆಂಗಿನ ಮರವನ್ನು ಕಡಿಯುವುದು ಪಾಪ ಎಂದು ನಮ್ಮ ಹಿರಿಯರು ಹೇಳಿಕೊಂಡು ಬಂದಿದ್ದಾರೆ ಹೀಗಿರುವಾಗ ಸರ್ಕಾರಿ ಅಧಿಕಾರಿಗಳು, ಪೊಲೀಸರ ಭದ್ರತೆಯಲ್ಲಿ ಸುಮಾರು 200 ಕ್ಕೂ ಹೆಚ್ಚಿನ ತೆಂಗಿನ ಮರಗಳನ್ನು ಕಡಿದಿರುವುದು ಸಾಮಾನ್ಯ ಜನರ ಧಾರ್ಮಿಕ ಭಾವನೆಗೂ ಧಕ್ಕೆ ಆಗಿದೆ ಮತ್ತು ಮರಗಳನ್ನು ಕೀಳುವು ಕೆಲಸಗಾರರಲ್ಲಿಯೂ, ಕೀಳಿಸಲು ಸ್ಥಳದಲ್ಲಿ ನಿಂತಿದ್ದ ಅಧಿಕಾರಿಗಳಿಗೂ ಹಾಗೂ ಕೀಳುವ ಕಾರ್ಯಕ್ಕೆ ಭದ್ರತೆ ನೀಡಿದ ಪೊಲೀಸರಿಗೂ ನಮ್ಮ ಧಾರ್ಮಿಕತೆಯ ಮೇಲೆ ಕಿಂಚಿತ್ತೂ ಅಭಿಮಾನವಿಲ್ಲದ್ದು ಎದ್ದು ಕಂಡಿದೆ ಹಾಗೆಯೇ 700 ಕ್ಕೂ ಹೆಚ್ಚು ಅಡಿಕೆ ಮರಗಳನ್ನು ಕಿತ್ತು ಹಾಕಲಾಗಿದೆ, ಗುಡಿಸಲು ಮನೆಗಳನ್ನು ನಾಶ ಮಾಡಲಾಗಿದೆ ಎಂದು ತಿಳಿದುಬಂದಿದೆ. ಇನ್ನು ಆ ಬೆಳೆ ಬೆಳೆದಂತಹ ರೈತರ ಪರಿಸ್ಥಿಯ ಏನಾಗಬಹುದು ಎಂಬ ಯೋಚನೆಯನ್ನೂ ಮಾಡದ ಅಧಿಕಾರಿಗಳು ಇಂಥ ಮಾನವೀಯತೆಯಿಲ್ಲದಂತಹ ಕೃತ್ಯ ಎಸಗಿದ್ದಾರೆ.

ಕಿಂಚಿತ್ತೂ ಕರುಣೆ ಮಾನವೀಯತೆ ಇಲ್ಲದೆ, ಪೊಲೀಸ್ ಭದ್ರತೆಯೊಂದಿಗೆ ಅಧಿಕಾರಿಗಳು ಹತ್ತಿಯ ಬೆಳೆಯ ಮೇಲೆ ಬುಲ್ಡೋಜರ್ ಹತ್ತಿಸಿ ನಾಶ ಮಾಡಲಾಗಿದೆ ಇದನೆಲ್ಲಾ ನೋಡಿದ ಮೇಲೆ ಎಲ್ಲಿಗೆ ಬಂದಿದೆ ನಮ್ಮ ಸಮಾಜ ಎಂಬ ಬೇಸರ ವ್ಯಕ್ತಪಡಿಸುವಂತಾಗಿದೆ.

ಬೆಳೆ ನಾಶ ಹಾಗೂ ಮರಗಳನ್ನು ಕಿತ್ತುಹಾಕಲು ಯಾವುದಾದರೂ ಸರ್ಕಾರದ ಅಥವಾ ನ್ಯಾಯಾಲಯದ ಆದೇಶವಿದೆಯೇ ಎಂದು ಪರಿಶೀಲಿಸಿದಾಗ ನಮಗೆ ಸಿಕ್ಕ ಉತ್ತರ " ಬೆಳೆ ನಾಶ ಮಾಡಲು ಹಾಗೂ ಮರಗಳನ್ನು ಕಿತ್ತು ಹಾಕಲು ಯಾವುದೇ ಆದೇಶವಿಲ್ಲ " ಎಂಬುದು.

ಆ ಜಾಗವನ್ನು ಮೈಸೂರು ಮಹಾರಾಜರು 1926 ರಲ್ಲಿ ಅರಣ್ಯ ಇಲಾಖೆಗೆ ನೀಡಲಾಗಿದೆ ಎಂದು ಅರಣ್ಯ ಇಲಾಖೆಯವರ ವಾದವಾದರೆ, ವಾಸ್ತವವಾಗಿ ಆ ಆದೇಶ ಪಾಲನೆ ಆಗಿರುವುದಿಲ್ಲ, ಸುಮಾರು 45 ವರ್ಷಗಳ ಹಿಂದೆ ಅದೇ ಜಾಗವನ್ನು ರೈತರಿಗೆ ಸರ್ಕಾರ ಮಂಜೂರು ಮಾಡಿತ್ತು ಹಾಗೂ ರೈತರು ಉಳಿಮೆ ಮಾಡಿಕೊಂಡು ಬಂದಿದ್ದರು ಹಾಗೂ ಅದೇ ಜಮೀನಿನ ಮೇಲೆ ಸಾಲ ಮಾಡಿ ಜಮೀನಿನ ಅಭಿವೃದ್ಧಿ ಮಾಡಿದ್ದರು. ಈ ರೀತಿ ಕಾನೂನು ಬದ್ದವಾಗಿ ಕಷ್ಟ ಪಟ್ಟು ಬದುಕುತ್ತಿದ್ದ ರೈತರ ಬೆಳೆಯನ್ನು ನಾಶ ಮಾಡಿರುವುದು ಅತಿ ಶೋಚನೀಯ ಸಂಗತಿ.



ಕಿರಣ್.ಕೆ.ಟಿ ವಕೀಲರು
ಅಂಕಣ
ನಿಮ್ಮ ಬದುಕಿಗೆ ಕಾನೂನು ಕವಚ

ಕಣ್ಣು ಮುಚ್ಚಿ ಕುಳಿತ ಶಾಸಕಾಂಗ, ಬೆಳೆ ನಾಶ ಹಾಗೂ ಮರಗಳನ್ನು ಕಿತ್ತು ಹಾಕಿರುವ ಕುರಿತಂತೆ ಆಯ್ಕೆಯಾದ ಜನ ಪ್ರತಿನಿಧಿಗಳು ಧ್ವನಿ ಎತ್ತಬೇಕಿತ್ತು ಆದರೆ ಈ ಬಗ್ಗೆ ಸ್ವಲ್ಪವೂ ಅವರಿಗೆ ಕಾಳಜಿ ಇಲ್ಲದಿರುವುದು ಬೇಸರದ ಸಂಗತಿ.

ನ್ಯಾಯಾಂಗದ ಮೇಲಿನ ಭರವಸೆಯಲ್ಲಿ ರೈತರು, ಮೇಲೆ ಹೇಳಾಲಾದ ಅನ್ಯಾಯದ ಕುರಿತಾಗಿ ರೈತರು ನ್ಯಾಯಾಲಯದ ಮೊರೆಹೋಗಿದ್ದಾರೆ ಹಾಗೂ ನ್ಯಾಯಾಲಯದಿಂದ ನ್ಯಾಯ ಸಿಗುವುದು ಎಂಬ ಭರವಸೆಯಲ್ಲಿ ಅಲ್ಲಿನ ರೈತರು ಬದುಕುತ್ತಿರುವುದು ನ್ಯಾಯಾಂಗ ವ್ಯವಸ್ಥೆಯ ಮೇಲೆ ಜನರಿಗೆ ಇರುವಂತಹ ನಂಬಿಕೆಯೇ ಕಾರಣ.

# ಹೆಸ್ಕಾಂ ಕಛೇರಿ ಲಚ್ಯಾಣದಲ್ಲಿ 79 ನೇ ಸ್ವಾತಂತ್ರ್ಯ ದಿನಾಚರಣೆ

ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಲಚ್ಯಾಣ ಗ್ರಾಮದ ಹೆಸ್ಕಾಂ ಶಾಖಾಧಿಕಾರಿಗಳ ಕಚೇರಿಯಲ್ಲಿ ಇಂದು 79 ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಶಾಖಾಧಿಕಾರಿಗಳಾದ ಶ್ರೀ ರಾಘವೇಂದ್ರ ಲಾಳಸಂಗಿ ಇವರು ನೆರವೇರಿಸಿದರು. ನಂತರ ಮಾತನಾಡಿದ ಮಾಪಕ ಓದುಗರಾದ ಶ್ರೀ ಸಂತೋಷ್ ಬನಗೊಂಡೆ ಯವರು ಎಲ್ಲಾ ಪವರ್ ಮೆನ್ ಗಳು ಕೆಲಸ ನಿರ್ವಹಿಸುವಾಗ ತಮಗೆ ಇಲಾಖೆಯಿಂದ ಒದಗಿಸಿರುವ ಸೇಫ್ಟಿ ಸಲಕರಣೆಗಳನ್ನು ಉಪಯೋಗಿಸಿಕೊಂಡು ಕೆಲಸ ನಿರ್ವಹಿಸಬೇಕೆಂದು ಹೇಳಿದರು.



ಶಾಖಾಧಿಕಾರಿಗಳಾದ ಶ್ರೀ ರಾಘವೇಂದ್ರ ಲಾಳಸಂಗಿಯವರು ಮಾತನಾಡಿ ಕಂಪನಿಯು ಆರ್ಥಿಕವಾಗಿ ನಷ್ಟದಲ್ಲಿದ್ದು ಆದ ಕಾರಣ ಎಲ್ಲಾ ಪವರ್ ಮ್ಯಾನ್ ಗಳು ಹಾಗೂ ಗ್ರಾಮ ವಿದ್ಯುತ್ ಪ್ರತಿನಿಧಿಗಳು ಸೇರಿಕೊಂಡು ಕಂಪನಿಗೆ ಬರಬೇಕಾದ ಬಾಕಿ ವಸೂಲಾತಿಯನ್ನು ಮಾಡಬೇಕೆಂದು ತಿಳಿಸಿದರು. ಅದೇ ತರನಾಗಿ ಹಿಂದೆ 2018 ರಲ್ಲಿ ರೈತರು ತಮ್ಮ ಕೃಷಿ ಪಂಪ್ ಸೆಟ್ಟಿಗೆ ಐವತ್ತು ರೂಪಾಯಿಗಳನ್ನು ನೀಡಿ ರಿಜಿಸ್ಟ್ರೇಶನ್ ಮಾಡಿಕೊಂಡಿದ್ದು ಅಂತಹ ರೈತ-ರಿಗೆ ಭೇಟಿಯಾಗಿ ಡಿಪಾಸಿಟನ್ನು ಕಟ್ಟಲು ತಿಳಿಸಬೇಕು ಎಂದು ಹೇಳಿದರು. ಅದೇ ತೆರನಾಗಿ ಮಂಜೂರಾತಿಯನ್ನು ಪಡೆಯದೆ ರೈತರು ಪಂಪಸೆಟ್ಟನ್ನು ಚಾಲ್ತಿ ಮಾಡಿಕೊಂಡಿದ್ದು ಕಂಡು ಬಂದಲ್ಲಿ ಪವರ್ ಮೆನ್ ಗಳು ಅವುಗಳನ್ನು ಕಡಿತಗೊಳಿಸಬೇಕೆಂದು ಹೇಳಿದರು.

ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಲಕ್ಷಮಣ್ ಅರಳದಿನ್ನಿ ಪವರ್ ಮ್ಯಾನ್ ಇವರು ನಡೆಸಿಕೊಟ್ಟರು.

– ಕರುನಾಡ ಕಂದ

ಕರುನಾಡ ಕಂದ
ಸಂಪುಟ 04 । ಸಂಚಿಕೆ 19
ದಿನಾಂಕ: 16-08-2025 ಪುಟಗಳು:16

# ನನ್ನ ಹೆಮ್ಮೆ ನನ್ನ ತಾಯಿ-ತಂದೆ

ತಾಯಿ ಎಂದರೆ ಮಮತೆ, ಪ್ರೀತಿ, ದಯೆ, ಕರುಣೆ, ವಾತ್ಸಲ್ಯದ ಪ್ರತೀಕ ತಾಯಿಯಾದವಳು ಜೀವವೆಲ್ಲಾ ತನ್ನ ಮಕ್ಕಳಿಗಾಗಿ ಮೀಸಲಿಟ್ಟವಳು. ಮುಕ್ಕೋಟಿ ದೇವತೆಗಳ ಮುಂದೆ ತಾಯಿಯೇ ಸರ್ವಸ್ವವಾದವಳು.

ನನಗೆ ಇತ್ತೀಚಿಗೆ ಬುದ್ಧಿ ಬಂದಾಗ ಅಮ್ಮ ಆಗ ನನಗೆ ತಿಳಿಸಿಕೊಟ್ಟಂತಹ ಕೆಲವು ಘಟನೆಗಳು ನೆನಪಿಗೆ ಬರುತ್ತವೆ, ಬಾಲ್ಯದಲ್ಲಿ ನಾವು ಕಷ್ಟ- ಸುಖವನ್ನು ಅನುಭವಿಸುತ್ತಿರುತ್ತೇವೆ.ಆದರೆ ಅದನ್ನು ಯಾವ ರೀತಿಯಾಗಿ ನಿಭಾಯಿಸಬೇಕು ಎಂಬುದರ ಬಗ್ಗೆ ಗೊತ್ತಿರುವುದಿಲ್ಲ.

ನಾವು ಬಾಡಿಗೆ ಮನೆಯಲ್ಲಿದ್ದಾಗ ಅಮ್ಮ ಒಂದು ತುಪ್ಪದ ಈರೇಕಾಯಿ ಬಳ್ಳಿಯನ್ನು ಹಾಕಿದ್ದಳು. ಅದು ಮನೆ ತುಂಬಾ ಹಬ್ಬಿತು, ಸಿಕ್ಕಾಪಟ್ಟೆ ಕಾಯಿಯೂ ಬಿಡುತ್ತಿತ್ತು. ಇದರಿಂದ ಅಮ್ಮನಿಗೆ ಉಪಾಯ ಹೊಳೆಯಿತು, ಹೇಗಾದರೂ ಮಾಡಿ ಮಕ್ಕಳಿಗೆ ಪಾಠ ಕಲಿಸಬೇಕಲ್ಲ ಅಂತ ಉದ್ದೇಶದಿಂದ ಮನೆ ತುಂಬಾ ಬಿಟ್ಟಂತಹ ತುಪ್ಪದ ಹೀರೇಕಾಯಿಯ ಕಾಯಿಗಳನ್ನು ಕೀಳಲು ಹೇಳಿದಳು. ನಾನು ಎಲ್ಲವನ್ನೂ ಕಿತ್ತು ಹಾಕಿದೆ.

ತದ ನಂತರ ಅಮ್ಮ ಕಿತ್ತಂತಹ ಎಲ್ಲವನ್ನೂ ಸಂಗ್ರಹಿಸಿ ಮನೆ ಮನೆಗೆ ಮಾರಿಕೊಂಡು ಬಾ ಎಂದಳು. ನನಗೆ ಈ ಒಂದು ವಿಚಾರವೇ ತಿಳಿದಿರಲಿಲ್ಲ ಹಣವನ್ನು ಯಾವ ರೀತಿಯಾಗಿ ಗಳಿಸಬೇಕು ಎಂಬ ಐಡಿಯಾವನ್ನೇ ಗೊತ್ತಿಲ್ಲದ ದಿನಗಳಲ್ಲಿ ತಾಯಿ ಪರಿಚಯಿಸಿದಳು ದುಡಿಮೆಗೆ ನೂರಾರು ದಾರಿ ಅನ್ನುವಂತೆ ನನ್ನಮ್ಮ ಮಾತುಗಳಿಂದಲೇ ಹಣವನ್ನು ಯಾವ ರೀತಿಯಾಗಿ ಮಾಡಬಹುದು ಎಂಬಂತಹ ಸಲಹೆಯನ್ನು ಕೊಟ್ಟರು.

ಮಕ್ಕಳಿಗೆ ಬರಿ ವಿದ್ಯೆ ಸಾಲದು ತಮ್ಮ ಸುತ್ತಮುತ್ತಲಿನವರ ಬಡತನವೂ ಗೊತ್ತಿರಬೇಕೆಂಬ ವಿಚಾರವನ್ನು ಹೇಳಿದಳು. ಆಗ ನಾನು ಅಪ್ಪನನ್ನ ಕೇಳಿದೆ ಪ್ರತಿನಿತ್ಯ ಪಟ್ಟಣಕ್ಕೆ ಹೋಗಿ ಅಲ್ಲಿ ಯಾರ ಜೊತೆಗಾದರೂ ನಿಂತು ಮಾರುವ ಉದ್ದೇಶವನ್ನು ಇಟ್ಟುಕೊಂಡೆ. ನನಗೆ ಆ ಸಮಯಕ್ಕೆ ಗೊಂದಲ ಉಂಟಾದವು, ಕಾರಣ ಯಾರೂ



ನನಗೆ ಪರಿಚಯ ಇಲ್ಲದವರು. ಪಟ್ಟಣದ ಒಂದು ದಾರಿಯಲ್ಲಿ ಸೊಪ್ಪನ್ನು ಮಾರುವವರ ಪರಿಚಯವಾಯಿತು. ಸೊಪ್ಪಿನವರ ಪಕ್ಕದಲ್ಲಿ ನಾನು ಹೀರೇಕಾಯಿನ ಇಟ್ಟುಕೊಂಡು ಹಾಗೆಯೇ ಸುಮ್ಮನಿದ್ದೆ.

ಆಗ ಸೊಪ್ಪನ್ನು ಮಾರುವ ವ್ಯಕ್ತಿ ತಮ್ಮಾ... ಹೀಗೆಲ್ಲಾ ನಿಂತುಕೊಂಡರೆ ಆಗೋದಿಲ್ಲ. ಏನಾದರೂ ಹೇಳಿ ಮಾರು ಎಂದಾಗ ಮತ್ತೆ ಸುಮ್ಮನೆ ನಿಂತೆ.


ಕೊನೆಗೆ ಆ ಸೊಪ್ಪನ್ನು ಮಾರುವ ವ್ಯಕ್ತಿಯೆ ತನ್ನ ಬಳಿ ಬಂದಂತಹ ಗಿರಾಕಿಗಳಿಗೆ ಹೇಳಿ ಒಂದು ತುಪ್ಪದ ಹೀರೆಕಾಯಿ 5 ರುಪಾಯಿ ನಾಲ್ಕು ತೆಗೆದುಕೊಂಡರೆ 20 ರೂಪಾಯಿ ಎಂದು ಹೇಳಿದರು. ಆಗ ನನಗೆ ಅವರು ಕೊಟ್ಟ ಸಲಹೆಯಂತೆ ದಿನಕ್ಕೆ ಒಂದು ಚೀಲವನ್ನು ತಂದು ಮಾರುತಿದ್ದೆ. ಆಗ ನನಗೆ ವಯಸ್ಸು 15 ಮನೆಯಲ್ಲಿ ಕೂಡ ಕೆಲಸ ಮಾಡುವಂತೆ ಯಾರೂ ಕೂಡಾ ಹೇಳುತ್ತಿರಲಿಲ್ಲ. ಅಪ್ಪನಿಗೆ ಸಹಾಯ ಮಾಡುತ್ತಿದ್ದೆ , ಅಮ್ಮನಿಗೂ ಸಹಾಯ ಮಾಡುತ್ತಿದ್ದೆ. ಬೇಸಿಗೆ ದಿನಗಳಲ್ಲಿ ಶಾಲೆಗೆ ರಜೆ ಇದ್ದಾಗ ಎಲ್ಲಾದರೂ ಹೋಗಿ ದುಡಿಯುತ್ತೇನೆ ಎಂದಾಗ ಅಪ್ಪ ಬೈಯುತ್ತಿದ್ದರು. ಎಲ್ಲರೂ ಬಟ್ಟೆ ಅಂಗಡಿಗೆ ಹೋಗುತ್ತಾರೆ ಅವರು ದುಡ್ಡು ನೋಡಿ ಓದುವುದನ್ನು ನಿಲ್ಲಿಸುತ್ತಾರೆ ಎಂಬ ಭಯ ಅಪ್ಪನಗಿತ್ತು. ಹಾಗಾಗಿ ಎಷ್ಟೇ ಕಷ್ಟವಾದರೂ ಅಪ್ಪನೇ ದುಡಿಯುತ್ತಿದ್ದರು.

ಹೀಗಾಗಿ ಪ್ರತಿನಿತ್ಯ ಸರ್ಕಾರ ಕೊಟ್ಟಂತಹ ಬೈಸಿಕಲ್ ಮೇಲೆ ಮನೆಯ ಮೇಲೆ ಬಿಟ್ಟಂತಹ ಹೀರೆಕಾಯಿಗಳನ್ನು ಕಿತ್ತುಕೊಂಡು ಪಟ್ಟಣಕ್ಕೆ ಹೋಗುವುದು ಸೊಪ್ಪಿನವರ ಜೊತೆ ಸೇರಿ ವ್ಯಾಪಾರ ಮಾಡಿಕೊಂಡು ಮನೆಗೆ ಬರುತ್ತಿದ್ದೆ. ಬಂದಂತಹ ಆದಾಯವನ್ನು ಅಮ್ಮನಿಗೆ ಕೊಡುತ್ತಿದ್ದೆ. ಅಮ್ಮನಿಗೂ ಖುಷಿ, ನನಗೂ ಖುಷಿಯಾಗುತ್ತಿತ್ತು. ಕಾರಣ ನನಗೆ ಇದೇ ಮೊದಲು ಪಟ್ಟಣಕ್ಕೆ ಹೋಗಿ ಮಾರುವುದು. ಹಾಗಾಗಿ ಜೀವನದಲ್ಲಿ ಏನೇ ಕಷ್ಟ ಬಂದರೂ ಕೂಡ ಅಮ್ಮ ಪರಿಹಾರವನ್ನು ಹುಡುಕುತ್ತಿದ್ದಳು.

ಹಾಗಾಗಿ ಪ್ರತಿಯೊಬ್ಬರು ತಂದೆ ತಾಯಿ ಕಷ್ಟವನ್ನು ಅರಿತುಕೊಳ್ಳಬೇಕು. ಜೀವನದಲ್ಲಿ ಅವರ ಸಲಹೆಗಳು ಅತಿ ಮುಖ್ಯವಾಗಿರುತ್ತದೆ.

**– ಎಂ ಚಂದ್ರಶೇಖರ ಚಾರಿ, ಸಹ ಶಿಕ್ಷಕರು**
**ವಿಶ್ವಮಾನವ ವಸತಿ ಪ್ರೌಢಶಾಲೆ**
**ಚಿತ್ರದುರ್ಗ, 7892642593**

# ಇಡ್ಲಿ... ಕಂಫರ್ಟ್ ಫುಡ್..



ಇಡ್ಲಿ, ದಕ್ಷಿಣ ಭಾರತೀಯ ಜನಪ್ರಿಯ ಉಪಹಾರವಾಗಿದೆ. ಮಕ್ಕಳಿಂದ ಹಿಡಿದು ವಯೋವೃದ್ಧರವರೆಗೂ ಎಲ್ಲರ ನೆಚ್ಚಿನ ಉಪಹಾರ ಅಂದ್ರೆ ತಪ್ಪಾಗಲಾರದು. ತಿನ್ನಲು ಎಷ್ಟು ರುಚಿಯೋ ಆರೋಗ್ಯಕ್ಕೂ ಅಷ್ಟೇ ಒಳ್ಳೆಯದು ಹಾಗೆಯೇ ಜೀರ್ಣಕ್ಕೂ ಸುಲಭ.

ಇಡ್ಲಿ ಮಾಡುವುದು ಕೂಡಾ ಸುಲಭ.ಕೆಲವರು ಅಕ್ಕಿ ಬಳಸಿ ಇಡ್ಲಿ ಮಾಡಿದ್ರೆ, ಕೆಲವರು ರವೆ ಬಳಸಿ ಇಡ್ಲಿ ಮಾಡ್ತಾರೆ.. ಇತ್ತೀಚಿಗೆ ಮಿಶ್ರ ಕಾಳಿನ, ಓಟ್ಸ್ ಇಡ್ಲಿ,ಸಿರಿ ಧಾನ್ಯಗಳನ್ನ ಬಳಸಿ ಇಡ್ಲಿ ಮಾಡ್ತಾರೆ.ಹಬೆಯಲ್ಲಿ ಬೆಂದ ಹೊಗೆ ಆಡ್ತಾ ಇರೋ ಇಡ್ಲಿ, ಅದರ ಮೇಲೆ ತುಪ್ಪ, ಕಾಯಿಚಟ್ನಿ, ಸಾಂಬಾರ್ ಜೊತೆ ಇಡ್ಲಿ ತಿಂತಾ ಇದ್ರೆ ಸ್ವರ್ಗಕ್ಕೆ ಕಿಚ್ಚು, ಮನೆಯವರ ಅಲ್ ಟೈಮ್ ಫೇವರಿಟ್ ತಿಂಡಿ ಇಡ್ಲಿ.ಇಡ್ಲಿಯಲ್ಲಿ ತುಂಬಾ ವೆರೈಟಿಗಳಿದೆ. ರವೆ ಇಡ್ಲಿ, ತಟ್ಟೆ ಇಡ್ಲಿ, ಅಕ್ಕಿ ಇಡ್ಲಿ, ಮಲ್ಲಿಗೆ ಇಡ್ಲಿ, ಮಸಾಲಾ ಇಡ್ಲಿ, ಓ ಟ್ಸ್ ಇಡ್ಲಿ, ಸಿರಿಧಾನ್ಯದ ಇಡ್ಲಿ, ಚಿಬ್ಬಲು ಇಡ್ಲಿ,ಮಿನಿ ಇಡ್ಲಿ, ಚಿ ಕೊಟ್ಟೆ ಇಡ್ಲಿ ಇತ್ಯಾದಿ..

. ಇಡ್ಲಿಯನ್ನು ತಿಂಡಿಗಳ ರಾಜ ಎಂದರೆ ತಪ್ಪಾಗಲಾರದು. ಇಡ್ಲಿ ಕರ್ನಾಟಕದ ಸಂಪ್ರದಾಯಿಕ ತಿಂಡಿ. ದಕ್ಷಿಣ ಭಾರತದ ಮನೆ ಮನೆಗಳಲ್ಲಿ ಬೆಳಗಿನ ಉಪಹಾರದ ಪ್ರಭಾವ ತಿನಿಸಾಗಿದೆ. ಹೋಟೆಲ್, ಟಿಫನ್ ಸೆಂಟರಗಳಲ್ಲಿ ಇಡ್ಲಿ ಸಾಂಬಾರ್ ತುಂಬಾನೇ ಫೇಮಸ್.ಇಡ್ಲಿ ಜೊತೆ ತುಂಬಾ ಜನರು ಉದ್ದಿನ ವಡೆ ಕಾಂಬಿನೇಶನ್ ಆಗಿ ತಿನ್ನಲು ಇಷ್ಟ ಪಡ್ತಾರೆ. ಇಡ್ಲಿ ವಡೆ ಅನ್ನೋದು ಜೋಡಿ ಪದ ಆಗಿದೆ ಅಂದ್ರೆ ತಪ್ಪಾಗಲಾರದು. ಆರೋಗ್ಯಕರವಾದ ಈ ತಿಂಡಿ ವಿಶೇಷ ಪರಿಮಳ ಹಾಗೂ ಒಳ್ಳೆಯ ಗುಣಮಟ್ಟವನ್ನು ಹೊಂದಿದ್ದು, ಆರೋಗ್ಯಕ್ಕೂ ಉತ್ತಮ, ಜೀರ್ಣಕ್ರಿಯೆಗೂ ಸುಲಭವಾದದ್ದು.ಇಡ್ಲಿ ಬಿಸಿ ಬಿಸಿ ಇದ್ದಾಗಲೇ ತಿನ್ನಲು ಹೆಚ್ಚು ರುಚಿ. ಒಮ್ಮೊಮ್ಮೆ ಇಡ್ಲಿ ಹೆಚ್ಚು ಉಳಿದಾಗ ಅದರಿಂದ ಮಾಡೋ ಉಪ್ಪಿಟ್ಟು ಸಕತ್ ರುಚಿ. ಹಾಗೆಯೇ ಉಳಿದ ಇಡ್ಲಿ ಚೌಕಾಕರಕ್ಕೆ ಕತ್ತರಿಸಿ, ಬಾಣಲೆಗೆ ಎಣ್ಣೆ, ಸಾಸಿವೆ ಸಿಡಿಸಿ, ಹಸಿಮೆಣಸಿನಕಾಯಿ, ಕರಿಬೇವು ಹಾಕಿ, ಫ್ರೈ ಮಾಡಿ, ಕತ್ತರಿಸಿದ ಇಡ್ಲಿ ಹಾಕಿ, ಸ್ವಲ್ಪ ಉಪ್ಪು, ಅರಿಶಿಣ ಹಾಕಿ ಫ್ರೈ ಮಾಡಿದ್ರೆ ಸಂಜೆ ಚಹಾ, ಕಾಫಿ ಜೊತೆ ಒಳ್ಳೆಯ ಸ್ನಾಕ್ಸ್.ಇತ್ತೀಚಿಗೆ ತುಪ್ಪ ಮತ್ತು ಪೋಡಿ ಇಡ್ಲಿ ತುಂಬಾ ಫೇಮಸ್. ತಟ್ಟೆ ಇಡ್ಲಿ ಅಥವಾ ರವೆ ಇಡ್ಲಿಗೆ ಕಾಳು, ಮಸಾಲೆಗಳಿಂದ ಮಾಡಿದ ಪುಡಿ ಹಾಕಿ, ಮೇಲಿಂದ ತುಪ್ಪ ಹಾಕಿ ಚಟ್ನಿ ಒಟ್ಟಿಗೇ ಕೊಡ್ತಾರೆ.

ಸಾಂಪ್ರದಾಯಿಕವಾಗಿ ಇಡ್ಲಿಯನ್ನ ನಾಲ್ಕು ಭಾಗ ಅಕ್ಕಿ, ಒಂದು ಭಾಗ ಉದ್ದಿನಬೇಳೆ (ಸ್ವಲ್ಪ ಮೆಂತ್ಯಕಾಳು, ಬೇಕಿದ್ದರೆ) ಪ್ರತ್ಯೇಕ ವಾಗಿ 4/5 ಗಂಟೆಗಳ ಕಾಲ ನೆನೆಸಿಡಬೇಕು. ನಂತರ ಉದ್ದಿನಬೇಳೆ ನುಣ್ಣಗೆ ರುಬ್ಬಿ, ಅಕ್ಕಿಯನ್ನ ತರಿ ತರಿಯಾಗಿ ರುಬ್ಬಿ ಎರೆಡೂ ಹಿಟ್ಟನ್ನು ಮಿಶ್ರಣ ಮಾಡಿ ರಾತ್ರಿ ಇಡೀ ಹುದುಗಲು ಬಿಡಬೇಕು. ಬೆಳಗ್ಗೆ ಹಿಟ್ಟಿಗೆ ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ, ಬೇಕಿದ್ದಲ್ಲಿ ಅಡುಗೆ ಸೋಡಾ ಸ್ವಲ್ಪ ಸೇರಿಸಬಹುದು. ಹಿಟ್ಟನ್ನು ಚೆನ್ನಾಗಿ ಕಲೆಸಿ, ಎಣ್ಣೆ ಸವರಿದ ಇಡ್ಲಿ ತಟ್ಟೆಗೆ ಹಾಕಿ ಹಬೆಯಲ್ಲಿ ಹತ್ತರಿಂದ, ಹದಿನೈದು ನಿಮಿಷ ಬೇಯಿಸಿದರೆ ಮೃದುವಾದ, ಬಿಸಿ ಬಿಸಿ ಇಡ್ಲಿ ರೆಡಿ. ಕಾಯಿಚಟ್ನಿ, ಸಾಂಬಾರ್, ಸಾಗು ಒಟ್ಟಿಗೇ ಇಡ್ಲಿ ಸವಿಯಲು ಚಂದ.ಹಾಗೇ ಈ ಇಡ್ಲಿಗೆ ಅಂತಲೇ ಒಂದು ದಿನ ಮೀಸಲಾಗಿದೆ. ಮಾರ್ಚ್ 30 ವಿಶ್ವ ಇಡ್ಲಿ ದಿನವೆಂದು ಘೋಷಿಸಲಾಗಿದೆ.

**–ಮಮತ ತೋಟೇಶ್ ಮರಿಯಣ್ಣ**

ಕರುನಾಡ ಕಂದ
ಸಂಪುಟ 04 | ಸಂಚಿಕೆ 19
ದಿನಾಂಕ: 16–08–2025 ಪುಟಗಳು:16

# ಆನೆಗಳಿಲ್ಲದೆ ಮೈಸೂರು ದಸರಾ ಅಪೂರ್ಣ

## ಮೈಸೂರು ಅರಮನೆಯಲ್ಲಿ ಎಂತೆಂತಹ ಅನೆಗಳಿದ್ದವು? ಯಾವ ಯಾವ ಆನೆಗಳು ಅಂಬಾರಿ ಹೊತ್ತಿವೆ?.

**ಮೈಸೂರು ದಸರಾಗೂ ಆನೆಗಳಿಗೂ ಅವಿನಾಭಾವ ಸಂಬಂಧ. ಮೈಸೂರು ಅರಮನೆಯಲ್ಲಿ ಎಂತೆಂತಹ ಅನೆಗಳಿದ್ದವು? ಯಾವ ಯಾವ ಆನೆಗಳು ಅಂಬಾರಿ ಹೊತ್ತಿವೆ?.**




**ಮೈಸೂರು ದಸರಾದ ನಾಲ್ಕು ಶತಮಾನಕ್ಕೂ ಮಿಗಿಲಾದ ಸುಧೀರ್ಘ ಇತಿಹಾಸದಲ್ಲಿ ಆನೆಗಳಿಗೂ ಪ್ರಮುಖ ಸ್ಥಾನ. ಅರಮನೆಯಷ್ಟೇ ಅಂಬಾರಿಗೂ ಹಾಗೂ ಅದನ್ನು ಹೊತ್ತು ಗಾಂಭೀರ್ಯದೊಂದಿಗೆ ಹೆಜ್ಜೆ ಹಾಕುವ ಆನೆಗಳ ಬಾಂಧವ್ಯ ದಸರಾದಷ್ಟೇ ಮಹತ್ವ ಪಡೆದಿದೆ. ಮೈಸೂರು ದಸರಾಗೂ ಆನೆಗಳಿಗೂ ಅವಿನಾಭಾವ ಸಂಬಂಧ. ದಸರಾದ ಮುಖ್ಯ ಆಕರ್ಷಣೆಯೇ ಆನೆಗಳು. ಆನೆಗಳಿಲ್ಲದೆ ಮೈಸೂರು ದಸರಾ ಕಳೆಗಟ್ಟುವುದೇ ಇಲ್ಲ. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಕಾಲದಿಂದಲೂ ಆನೆಗಳಿಗೆ ರಾಜ ಮರ್ಯಾದೆ ಇತ್ತು, ಇದಕ್ಕೆ ದಾಖಲೆಯಾಗಿ ಮೈಸೂರು ಅರಮನೆ ಹಾಗೂ ಜಗನ್ಮೋಹನ ಅರಮನೆ ಗೋಡೆಗಳ ಮೇಲಿನ ಚಿತ್ರಕಲೆಯನ್ನು ದಾಖಲೆಯಾಗಿ ಪರಿಗಣಿಸಬಹುದು. ಅರಮನೆ ಗೋಡೆಗಳ ಮೇಲಿನ ಎಲ್ಲಾ ಚಿತ್ರಗಳು ಮಹಾರಾಜರು ದಸರಾ ಮೆರವಣಿಗೆಗೆ ಸಾಗುತ್ತಿದ್ದ ಮತ್ತು ಆರು ಆನೆಗಳ ಸಾರೋಟಿನ ಮೇಲೆ ಸಾಗುತ್ತಿದ್ದ ಚಿತ್ರಗಳನ್ನು ಕಾಣಬಹುದಾಗಿದೆ. ಮಹಾರಾಜರ ಮನೆತನದ ಕುಟುಂಬದ ಸದಸ್ಯರೆಲ್ಲರೂ ಆನೆಗಳ ಮೇಲೆ ಕುಳಿತು ಸಾಗುತ್ತಿದ್ದದ್ದೂ ಮೆರವಣಿಗೆಯ ಒಂದು ಭಾಗವಾಗಿತ್ತು ಎಂಬುದನ್ನು ಇಲ್ಲಿನ ಚಿತ್ರಪಟಗಳು ಹೇಳುತ್ತವೆ.**

ಮೈಸೂರು ದಸರಾವು ಕರ್ನಾಟಕ ರಾಜ್ಯದ ನಾಡಹಬ್ಬ (ರಾಜ್ಯ ಉತ್ಸವ) ಆಗಿದೆ. ಇದು 10 ದಿನಗಳ ಹಬ್ಬವಾಗಿದ್ದು, ನವರಾತ್ರಿ ಎಂದು ಕರೆಯಲ್ಪಡುವ ಒಂಬತ್ತು ರಾತ್ರಿಗಳಿಂದ ಪ್ರಾರಂಭವಾಗುತ್ತದೆ ಮತ್ತು ಕೊನೆಯ ದಿನವನ್ನು ವಿಜಯದಶಮಿ ಎಂದು ಆಚರಿಸಲಾಗುತ್ತದೆ. ಇದು ಸಾಮಾನ್ಯವಾಗಿ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಬರುತ್ತದೆ.

**ಮುಮ್ಮಡಿ ಅವರ ಕಾಲದಿಂದಲೂ**

ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಆನೆಗಳ ಗಜೇಂದ್ರ ರಥದ ಮೇಲೆ ಕುಳಿತು ಸೇನೆಯ ಪರಿವೀಕ್ಷಣೆ ನಡೆಸುತ್ತಿದ್ದ ಚಿತ್ರಕಲೆಯನ್ನೂ ಕಾಣಬಹುದಾಗಿದೆ.

ಹೀಗೆ ಚಾಮರಾಜ ಒಡೆಯರ್, ಕೃಷ್ಣರಾಜ ಒಡೆಯರ್ ಮತ್ತು ಕೊನೆಯ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಅವರ ಅವಧಿಯಲ್ಲಿ ಆನೆಗಳ ಪಾತ್ರ ಮತ್ತು ಮಹತ್ವವನ್ನು ಸಾರುವ ಚಿತ್ರಕಲೆಯನ್ನು ನೋಡಬಹುದಾಗಿದೆ. ನವರಾತ್ರಿಯ ಮೊದಲ ದಿನದಿಂದ ಹಿಡಿದು ಕೊನೆಯ ದಿನದವರೆಗೆ ಆನೆಗಳು ಹೇಗೆ ಅವಿಭಾಜ್ಯ ಅಂಗವಾಗಿದ್ದವು ಎನ್ನುವುದನ್ನು ಅಧ್ಯಯನ ಮಾಡಬಹುದಾಗಿದೆ.

**ಗಜಶಾಲೆಯೇ ಆಸರೆ**

ಅರಮನೆಯ ಗಜಶಾಲೆಯಲ್ಲಿ ಅನೇಕ ಆನೆಗಳಿದ್ದವು. ಆನೆಗಳ ಲಾಯದಲ್ಲಿ ಅಂಬಾರಿ ಆನೆ ಅಥವಾ ಪಟ್ಟದ ಆನೆಗೆ ರಾಜ ಮರ್ಯಾದೆ ಇತ್ತು. ಕೆಲವು ಆನೆಗಳ ಎತ್ತರ ಮತ್ತು ವರ್ತನೆಯಿಂದಾಗಿ ಮಹಾರಾಜರ ಗಮನ ಸೆಳೆದಿದ್ದವು ಎಂದು ಇತಿಹಾಸದ ಪುಟಗಳು ಹೇಳುತ್ತವೆ. ನಾಲ್ಕನೇ ಕೃಷ್ಣರಾಜ ಒಡೆಯರ್ ಅವರ ಪಟ್ಟದ ಆನೆಯ ಹೆಸರು ಜಯಮಾರ್ತಾಂಡ. ಈ ಆನೆಯ ಮೇಲೆ ಮಹಾರಾಜರು ಸವಾರಿ ಮಾಡುತ್ತಿದ್ದರು. ಇವರು ಗತಿಸಿದ ನಂತರವೂ ಈ ಆನೆ ಅನೇಕ ಮಹಾರಾಜ–ರಿಗೆ ವಾಹನವಾಗಿತ್ತು. ಈ ಆನೆ ಮೃತಪಟ್ಟ ಮೇಲೆ ಇದರ ಗೌರವಾರ್ಥ ಅರಮನೆಯ ಮಹಾದ್ವಾರಕ್ಕೆ ಜಯಮಾರ್ತಾಂಡ ಎಂದು ನಾಮಕರಣ ಮಾಡಲಾಗಿತ್ತು.

**ಮೂವರನ್ನು ಹೊತ್ತ ಚಾಮುಂಡಿ ಪ್ರಸಾದ**

ಅರಮನೆಯ ಮತ್ತೊಂದು ಪ್ರಮುಖ ಆನೆ ಚಾಮುಂಡಿ ಪ್ರಸಾದ. ಮೈಸೂರು ಮಹಾರಾಜರ ಇತಿಹಾಸದಲ್ಲಿ ಮೂವರು ಮಹಾರಾಜರಾದ ಮುಮ್ಮಡಿ ಕೃಷ್ಣರಾಜ ಒಡೆಯರ್, ಚಾಮರಾಜ ಒಡೆಯರ್ ಮತ್ತು ನಾಲ್ಕನೇ ಕೃಷ್ಣರಾಜ ಒಡೆಯರ್ ಅವರಿಗೆ ಸೇವೆ ಸಲ್ಲಿಸಿದ ಆನೆ ಇದೊಂದೇ ಎಂದು ಹೇಳಲಾಗುತ್ತದೆ. ಈ ಆನೆ ಅರಮನೆಯಲ್ಲಿದ್ದ ಅತಿ ಹೆಚ್ಚು ಎತ್ತರದ ಎರಡನೇ ಆನೆ ಎಂದು ಹೇಳಲಾಗುತ್ತದೆ. ಈ ಚಾಮುಂಡಿ ಪ್ರಸಾದನನ್ನು ನೋಡಿಕೊಳ್ಳಲು ಒಂದೇ ಕುಟುಂಬದ ಏಳು ಮಂದಿ ಸೇವಕರನ್ನು ನೇಮಕ ಮಾಡಲಾಗಿತ್ತು. ಇವರಲ್ಲಿ ಇಬ್ಬರು ಮಾವುತರು, ಇಬ್ಬರು ಕಾವಡಿಗಳು ಮತ್ತು ಮೂವರು ಕೊತ್ಲಿಗಳಿದ್ದರು. ಈ ಆನೆ 1928ರಲ್ಲಿ ಅಸುನೀಗಿತು.

**ಗಜೇಂದ್ರ ಪೂಜೆ ಪಡೆದ ಹಂಸರಾಜ**

ಅರಮನೆಯ ಮತ್ತೊಂದು ಪ್ರಸಿದ್ಧ ಆನೆ ಹಂಸರಾಜ್. ದಸರಾದ ಆರಂಭದ ದಿನದಂದು ಬೆಳಗ್ಗೆ ಜಯಚಾಮರಾಜೇಂದ್ರ ಒಡೆಯರ್ ಅವರಿಗೆ ಹೂಗಳನ್ನು ಎರಚಿ ಗೌರವ ಸೂಚಿಸುತ್ತಿದ್ದ ಆನೆ. ದಸರಾ ಹಬ್ಬದ ಸಂದರ್ಭದಲ್ಲಿ ಮೈಸೂರು ಅರಮನೆಯಲ್ಲಿ ಈ ಅನೆಗೆ ಗಜೇಂದ್ರ ಪೂಜೆಯನ್ನು ಸಲ್ಲಿಸಲಾಗುತ್ತಿತ್ತು.

**ಐರಾವತ ಹೆಚ್ಚಿಸಿದ ಗೌರವ**

ಮಹಾರಾಜರ ಪ್ರೀತಿಗೆ ಪಾತ್ರವಾಗಿದ್ದ ಮತ್ತು ಜನಪ್ರಿಯವಾಗಿದ್ದ ಮತ್ತೊಂದು ಆನೆ ಐರಾವತ. ಅತಿ ಎತ್ತರದ ಆನೆ ಇದಾಗಿ–ತ್ತು. ಗಜ ಗಾಂಭೀರ್ಯಕ್ಕೆ ಪ್ರಸಿದ್ದಿ ಪಡೆದಿತ್ತು. ವಿಜಯದಶಮಿ ದಿನದಂದು ಮಹಾರಾಜರನ್ನು ಹೊತ್ತ ಈ ಐರಾವತ ತನ್ನ ಸೊಂಡಿಲನ್ನು ಆಡಿಸುತ್ತಾ ಬರುತ್ತಿದ್ದರೆ ಗೌರವ ಉಕ್ಕಿ ಬರುತ್ತಿತ್ತು ಎಂದು ಇತಿಹಾಸಕಾರರು ಹೇಳುತ್ತಾರೆ. ಈ ಆನೆ 30 ಬಾರಿ ಅಂಬಾರಿಯನ್ನು ಹೊತ್ತಿತ್ತು ಎಂದರೆ ಇದರ ಸಾಮರ್ಥ್ಯವನ್ನು ಊಹಿಸಬಹುದಾಗಿದೆ. ತನ್ನ 56 ನೇ ವಯಸ್ಸಿನಲ್ಲಿ 1952 ರಲ್ಲಿ ಅಸುನೀಗಿತು. ಸಕಲ ರಾಜಮರ್ಯಾದೆಗಳೊಂದಿಗೆ ಈ ಆನೆಯ ಅಂತ್ಯ ಸಂಸ್ಕಾರ ನೆರವೇರಿತು.

13 ವರ್ಷದ ಆನೆ ಹುಡುಗ ಸಾಲಾರ್ ಶೇಕ್ ಸಾಹು ನೆನಪಿರಬಹುದು. ಈ ಆನೆ ಹುಡುಗ ಹಾಲಿವುಡ್ ಚಿತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ. ಚಾಮುಂಡಿ ಪ್ರಸಾದ ಸೇ–ರಿದಂತೆ ಅನೇಕ ಆನೆಗಳ ಮಧ್ಯದಲ್ಲಿ ಕಾಡಿನಲ್ಲಿ ಬೆಳೆದ ಬಾಲಕ ಸಾಹು. ಈತನ ಚಿಕ್ಕಪ್ಪ ಬಾಪು ಸಾಹೀಬ್ ಚಾಮುಂಡಿ ಪ್ರಸಾದನ ಮಾವುತರಾಗಿದ್ದರು. ಮೈಸೂರಿನ ಆನೆಗಳ ಕತೆ ಕುರಿತು 1937 ರಲ್ಲಿ ಮೈಸೂರಿನ ಅರಣ್ಯದಲ್ಲಿ ಎಲಿಫೆಂಟ್ ಬಾಯ್ ಎಂಬ ಇಂಗ್ಲೀಷ್ ಚಿತ್ರ ಚಿತ್ರೀಕರಣವಾಗಿ–ತ್ತು. ಕಾಲಾ ನಾಗ್ ಚಿತ್ರದಲ್ಲಿ ಐರಾವತ ಆನೆಯನ್ನು ಸಾಬು ಮುನ್ನಡೆಸುತ್ತಿದ್ದ ದೃಶ್ಯಗಳನ್ನು ಕಾಣಬಹುದಾಗಿದೆ. ಆನಂತರ ದ್ರೋಣ, ರಾಜೇಂದ್ರ, ಬಲರಾಮ, ಅರ್ಜುನನ ಬಳಿಕ ಈಗ ಅಭಿಮನ್ಯುವಿನೊಂದಿಗೆ ದಸರಾ ಅಂಬಾರಿ ಹೊರುವ ಆನೆಗಳ ಇತಿಹಾಸ ಮುಂದುವರೆಯುತ್ತಲೇ ಇದೆ...

**ವರದಿ ಜೆ. ಪ್ರದೀಪ್**

# ಸಂಭ್ರಮದಿಂದ ಜರುಗಿದ 79ನೇಯ ಸ್ವಾತಂತ್ರ್ಯ ದಿನಾಚರಣೆ

**ಯಾದಗಿರಿ/ ಗುರುಮಠಕಲ್:** ಜವಾಹರಲಾಲ ನೆಹರೂ ಕ್ರೀಡಾಂಗಣದಲ್ಲಿ ತಹಶೀಲ್ದಾರರಾದ ಶಾಂತಗೌಡ ಬಿರಾದಾರ ಧ್ವಜಾರೋಹಣ ನೆರವೇರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗುರುಮಠಕಲ್ ಮತಕ್ಷೇತ್ರದ ಶಾಸಕರಾದ ಶರಣಗೌಡ ಕಂದಕೂರ್ ಮೊದಲಿಗೆ ಕಲಬುರಗಿ ಶ್ರೀ ಶರಣ ಬಸವೇಶ್ವರ ಸಂಸ್ಥಾನದ ಪೀಠಾಧಿಪತಿಗಳಾದ ಡಾ॥ಶರಣಬಸಪ್ಪ ಅವರಿಗೆ ಸಂತಾಪ ಸೂಚಿಸಿ, ವೇದಿಕೆ ಮೇಲಿದ್ದ ಪುರಸಭೆ ಮುಖ್ಯಾಧಿಕಾರಿಗಳಿಗೆ ಮತ್ತು ತಾಲೂಕ ದಂಡಾಧಿಕಾ–ರಿಗಳಿಗೆ ಶಿಸ್ತು ಮತ್ತು ಸಮಯ ಪರಿಪಾಲನೆ ಮಾಡುವಂತೆ ಸಲಹೆ ಮತ್ತು ಎಚ್ಚರಿಕೆ ನೀಡಿದರು, ಭಾರತ ಸ್ವಾತಂತ್ರ್ಯದ ನಂತರ ಬಹಳಷ್ಟು ವರ್ಷಗಳವರೆಗೂ ಸಣ್ಣಪುಟ್ಟ ರಾಷ್ಟ್ರಗಳೊಂದಿಗೆ ಹೋಲಿಕೆ ಆಗುತ್ತಿತ್ತು ಈಗ ನಮ್ಮ ಪ್ರಧಾನಿ ಧೀಮಂತ ನಾಯಕ ನರೇಂದ್ರ ಮೋದಿ ಅವರಿಂದಾಗಿ ನಾವು ಈಗ ಬಲಾಢ್ಯ ರಾಷ್ಟ್ರಗಳ ಜೊತೆ ಸರಿಸಮವಾಗಿ ಜಾಗತಿಕ ಮಟ್ಟದಲ್ಲಿ ಎಲ್ಲಾ ರಂಗದಲ್ಲಿ ಸ್ಪರ್ಧೆ ನೀಡುತ್ತಿದ್ದೇವೆ, ಭಯೋತ್ಪಾದಕರ ಕುತಂತ್ರಕ್ಕೆ 27 ಜನ ಬಲಿಯಾಗಿರುವ ಭಾರತೀಯರ ಪರವಾಗಿ ಆಪರೇಷನ್ ಸಿಂಧೂರ್ ಕಾರ್ಯಾಚರಣೆ ನಮ್ಮ ಹೆಮ್ಮೆ ಎಂದು ಹೇಳಿದರು.

ಸ್ವಾತಂತ್ರ್ಯ ದಿನಾಚರಣೆಯ ವಿಶೇಷ ಉಪನ್ಯಾಸ ನೀಡಿದ ಚಂದ್ರಶೇಖರ್ ಪಾಟೀಲ್ ಅವರು ಅಜ್ಞಾತ ಸ್ವಾತಂತ್ರ್ಯ ವೀರರನ್ನು



ನಾವು ಈ ಸಂದರ್ಭದಲ್ಲಿ ಸ್ಮರಿಸೋಣ ಕೇವಲ ಒಂದು ವ್ಯಕ್ತಿಯಿಂದ ಸ್ವಾತಂತ್ರ್ಯ ನಮಗೆ ಬಂದಿಲ್ಲ, ಸಾವಿರಾರು ದೇಶಭಕ್ತರು ದೇಶಕ್ಕಾಗಿ ಹುತಾತ್ಮರಾಗಿರುವ ಪ್ರಯುಕ್ತ ನಮಗೆ ದೇಶ ಸ್ವಾತಂತ್ರ್ಯ ಸಿಕ್ಕಿದೆ ಜಲಿಯನ್ ವಾಲಿಬಾಲ್ ಹತ್ಯಾಕಾಂಡ ಹಾಗೂ ದೇಶಭಕ್ತ ಉದಂ ಸಿಂಗ್ ಅವರ ಕುರಿತು ವಿವರಿಸಿ ಮಕ್ಕಳಲ್ಲಿ ದೇಶಭಕ್ತಿ ಮೂಡಿಸಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಖಾಸಾಮಠ ಪರಮ ಪೂಜ್ಯ ಶ್ರೀ ಶಾಂತವೀರ ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳು ವಹಿಸಿದ್ದರು, ಅತಿಥಿಗಳಾಗಿ ಶ್ರೀಮತಿ ಜಯಶ್ರೀ ಪ್ರೋ. ಪಾಟೀಲ್ ಅಧ್ಯಕ್ಷರು, ,ಶ್ರೀಮತಿ ರೇಣುಕಾ ವಿ.ಪಡಿಗೆ ಉಪಾಧ್ಯಕ್ಷರು ಪುರಸಭೆ ಗುರುಮಠಕಲ್, ಶಾಂತಗೌಡ ಬಿರಾದಾರ ತಹಶೀಲ್ದಾರರು, ಚಂದ್ರಶೇಖರ ಪಾಟೀಲ್ ವಿಶೇಷ ಉಪನ್ಯಾಸ, ಅಂಬ್ರೇಶ್ ಪಾಟೀಲ್ ತಾ.ಪಂ., ಶ್ರೀಮತಿ ಭಾರತಿ.ಸಿ.ದಂಡೋತಿ ಮುಖ್ಯಾಧಿಕಾರಿಗಳು, ವೀರಣ್ಣ.ಎಸ್. ದೊಡ್ಡಮನಿ ಆರಕ್ಷಕ ನಿರೀಕ್ಷಕರು, ನರಸಿಂಹಸ್ವಾಮಿ ಉಪ ತಹಶೀಲ್ದಾರ್ ವೇದಿಕೆ ಅಲಂಕರಿಸಿದ್ದರು.

ವಿವಿಧ ಸಂಘಟನೆಗಳು, ಸಾಂಸ್ಕೃತಿಕ ತಂಡಗಳು, ಮಕ್ಕಳು ಭಾಗವಹಿಸಿ ದೇಶಭಕ್ತಿ ಗೀತೆಗಳು, ಸ್ವಾತಂತ್ರ್ಯ ಹೋರಾಟಗಾರರ ವೇಷಭೂಷಣ, ಭರತನಾಟ್ಯ ನೃತ್ಯಗಳ–ಮೂಲಕ ಅಲ್ಲಿ ನೆರದಿರುವರಿಗೆ ದೇಶಭಾವವನ್ನು ಮೂಡಿಸಿದರು. ಮಕ್ಕಳಲ್ಲಿ ರಾಷ್ಟ್ರಧ್ವಜ, ತ್ರಿವರ್ಣ ಬಾವುಟ, ಮುಖದಲ್ಲಿ ತ್ರಿವರ್ಣ ಚಿತ್ತಾರಗಳು ಆಕರ್ಷಕವಾಗಿದ್ದವು. ಅತಿ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಮತ್ತು ಕ್ರೀಡಾ ಕ್ಷೇತ್ರದಲ್ಲಿ ಸಾಧನೆಗೈದ ರಾಹುಲ್ ತಂದೆ ಕಾಶಪ್ಪದೊರೆ ವಿದ್ಯಾರ್ಥಿ ಮತ್ತು ಆಂಗ್ಲ ಭಾಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಮತ್ತು ವಿಶೇಷವಾದ ಭರತ ನಾಟ್ಯದಿಂದ ಎಲ್ಲರ ಗಮನ ಸೆಳೆದ ಬಾಲಕಿ ಸಾಯಿ ಅಕಿರಾಗೆ ಸನ್ಮಾನಿಸಲಾಯಿತು.

ಪಟ್ಟಣದ ಎಲ್ಲಾ ಶಾಲೆಗಳಿಂದ ಬಂದ ಶಿಕ್ಷಕರು ಮತ್ತು ಮಕ್ಕಳು, ಸಾರ್ವಜನಿಕರು, ಪುರಸಭೆ ಸದಸ್ಯರು,ತಹಶೀಲ್ದಾರ್ ಕಚೇರಿಯ ಸಿಬ್ಬಂದಿ, ವಿವಿಧ ಸಂಘಟನೆಗಳ ಕಾರ್ಯಕರ್ತರು ಉತ್ಸಾಹಭರಿತವಾಗಿ ಭಾಗವಹಿಸಿದರು.

**ವರದಿ ಜಗದೀಶ್ ಕುಮಾರ್ ಭೂಮಾ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 19
ದಿನಾಂಕ: 16–08–2025 ಪುಟಗಳು:16

# ಗಣೇಶ ಚತುರ್ಥಿ ಹಾಗೂ ಈದ್ ಮಿಲಾದ್ ಹಬ್ಬದ ಆಚರಣೆ ನಿಮಿತ್ಯ ಶಾಂತಿ ಪಾಲನಾ ಸಭೆ




**ವಿಜಯಪುರ :** ತಾಳಿಕೋಟೆ ಪಟ್ಟಣದಲ್ಲಿ ಈ ಮಾಸಾಂತ್ಯದಲ್ಲಿ ಆಚರಿಸಲಿರುವ ಗಣೇಶ ಚತುರ್ಥಿ ಹಾಗೂ ಈದ್ ಮಿಲಾದ್ ಹಬ್ಬವನ್ನು ಶಾಂತಿ ಸೌಹಾರ್ದತೆಯೊಂದಿಗೆ ಯಾರ ಧಾರ್ಮಿಕ ಭಾವನೆಗಳಿಗೂ ಧಕ್ಕೆಯಾಗದಂತೆ ಆಚರಿಸಲು ಪ್ರಯತ್ನಿಸಿ ಎಂದು ಮುದ್ದೇಬಿಹಾಳ ಸಿ. ಪಿ. ಐ ಮೊಹಮ್ಮದ್ ಫಸಿಯುದ್ದೀನ ಹೇಳಿದರು.

ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ಗಣೇಶ ಚತುರ್ಥಿ ಹಾಗೂ ಈದ್ ಮಿಲಾದ್ ಹಬ್ಬದ ಆಚರಣೆ ನಿಮಿತ್ಯ ದಿ.13.8.2025 ರ ಬುಧವಾರದಂದು ಕರೆದ ಶಾಂತಿ ಪಾಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ ಗಣೇಶ ಪ್ರತಿಷ್ಠಾಪನಾ ಮಂಡಳಿಯವರು ಇಲಾಖೆಯ ಮಾರ್ಗಸೂಚಿಗಳನ್ನು ಪಾಲಿಸಬೇಕು ಸಾಧ್ಯವಿದ್ದಷ್ಟು ಎಲ್ಲರೂ ಸಿ. ಸಿ ಕ್ಯಾಮೆರಾಗಳನ್ನು ಅಳವಡಿಸಿಕೊಳ್ಳಬೇಕು ಇದರಿಂದ ಯಾವುದೇ ಒಂದು ಅಹಿತಕರ ಘಟನೆ ಸಂಭವಿಸಿದರೆ ಅದನ್ನು ಪತ್ತೆಹಚ್ಚಲು ಸಹಕಾರಿಯಾಗುತ್ತದೆ. ಗಣೇಶ್ ಪ್ರತಿಷ್ಠಾಪನೆಗೆ ಅಗತ್ಯವಿರುವ ಪೊಲೀಸ್, ಹೆಸ್ಕಾಂ ಹಾಗೂ ಸ್ಥಳೀಯ ಸಂಸ್ಥೆ ಈ ಮೂರು ಇಲಾಖೆಗಳ ಅನುಮತಿ ಪತ್ರ ಪಡೆಯಲು ಅನುಕೂಲವಾಗುವಂತೆ ಪೊಲೀಸ್ ಠಾಣೆಯಲ್ಲಿಯೇ ಇದರ ವ್ಯವಸ್ಥೆಯನ್ನು ಮಾಡಲಾಗುವುದು, ಗಣೇಶ ಪ್ರತಿಷ್ಠಾಪನಾ ಮಂಡಳಿಯ ಮುಖ್ಯಸ್ಥರ ಹೆಸರು ಹಾಗೂ ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ಇಲಾಖೆಗೆ ಕೊಡಬೇಕು. ಎರಡೂ ಸಮುದಾಯದ ಹಬ್ಬಗಳು ಕೂಡಿ ಬಂದಿರುವುದ–ರಿಂದ ಎಲ್ಲರೂ ಒಂದಾಗಿ ಸೌಹಾರ್ದತೆಯಿಂದ ಆಚರಿಸಲು ಪ್ರಯತ್ನಿಸಿ ಯಾವುದೇ ರೀತಿಯ ಅಹಿತಕರ ಘಟನೆಗಳಿಗೆ ಅವಕಾಶ ಮಾಡಿಕೊಡಬೇಡಿ ಇಲಾಖೆ ನಿಮ್ಮೊಂದಿಗೆ ಸದಾ ಸಹಕರಿಸುತ್ತದೆ ಎಂದರು. ಠಾಣಾ ಪಿ. ಎಸ್. ಐ. ಜ್ಯೋತಿ ಖೋತ ಅವರು ಮಾತನಾಡಿ ಎರಡೂ ಹಬ್ಬಗಳಿಗೆ ಇಲಾಖೆ ಕೆಲವು ನಿರ್ದೇಶನಗಳನ್ನು ಕೊಡಲಿದ್ದು ಅವುಗಳನ್ನು ಪಾಲಿಸುತ್ತಾ ಶಾಂತ ರೀತಿಯಿಂದ ಹಬ್ಬಗಳನ್ನು ಆಚರಿಸಬೇಕು. ಪರಿಸರಕ್ಕೆ ಹಾನಿಯಾಗದಂತೆ ನೋಡಿಕೊಳ್ಳಿ, ಗಣೇಶ ಪ್ರತಿಷ್ಠಾಪನಾ ಮಂಡಳಿಯವರು ಆದಷ್ಟು ಸ್ಥಳದಲ್ಲಿಯೇ ಇರಲು ಪ್ರಯತ್ನಿಸಿ, ಇಲಾಖೆಯೊಂದಿಗೆ ಸಹಕಾರ ಕೊಡಿ ನಾವೂ ಸಹ ನಿಮ್ಮೊಂದಿಗೆ ಸಹಕರಿಸುತ್ತೇವೆ ಎಂದರು.

ಪಟ್ಟಣದ ಗಣ್ಯರಾದ ಪ್ರಭುಗೌಡ ಮದರಕಲ್ಲ, ಇಬ್ರಾಹಿಂ ಮನ್ಸೂರ್, ಜೈ ಭೀಮ ಮುತ್ತಗಿ ಮಾತನಾಡಿ ಪಟ್ಟಣ ಶಾಂತಿ ಸಾಮರಸ್ಯಕ್ಕೆ ಹೆಸರುವಾಸಿಯಾಗಿದೆ ಇಲ್ಲಿ ಎಲ್ಲಾ ಸಮಾಜದವರು ಕೂಡಿಕೊಂಡು ಹಬ್ಬಗಳನ್ನು ಆಚ–ರಿಸುತ್ತಾರೆ ಈ ಎರಡೂ ಹಬ್ಬಗಳನ್ನೂ ಸಹ ಇಲಾಖೆಯ ನಿರ್ದೇಶನಗಳನ್ನು ಪಾಲಿಸುತ್ತಾ ಎಲ್ಲರೂ ಒಂದಾಗಿ ಆಚ–ರಿಸೋಣ ಎಂದರು. ಗಣೇಶ ಪ್ರತಿಷ್ಠಾಪನಾ ಮಂಡಳಿಯ ಮುಖ್ಯಸ್ಥರಾದ ರಾಘವೇಂದ್ರ ವಿಜಾಪುರ, ವಿಜಯ ಕಲಾಲ ಹಾಗೂ ನಾಗರಾಜ್ ಬಳಿಗಾರ ಕೆಲವು ಸಲಹೆ ಸೂಚನೆಗಳನ್ನು ನೀಡಿ ಇಲಾಖೆಯ ಸಹಕಾರ ಕೋರಿದರು.

ಪಿ. ಎಸ್. ಐ ಆರ್. ಎಸ್. ಭಂಗಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಿದ್ದನಗೌಡ ದೊಡ್ಡಮನಿ ನಿರೂಪಿಸಿದರು. ಸಭೆಯಲ್ಲಿ ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ, ಶಿವಾನಂದ ಜುಮನಾಳ, ಎಸ್. ಡಿ ದೊಡ್ಡಮನಿ ಹವಾಲ್ದಾರ್ ಎಂ.ಎಲ್. ಪಟ್ಟೇದ, ಬಸವರಾಜ್ ಬಲಕಲ್, ವೀರೇಶ ಬಿರಾದಾರ, ರಾಮನಗೌಡ ಬಿರಾದಾರ, ಪಿ ಎಮ್ ಗಾಣತಿ, ಶಶಿಧರ್ ರೆಡ್ಡಿ, ಹರೀಶ್ ದೊಡ್ಡಮನಿ, ಹೆಸ್ಕಾಂ ಎಇಇ ವಿಜಯಕುಮಾರ್ ಬಿರಾದಾರ, ಅಗ್ನಿಶಾಮಕ ದಳದ ಮಹಾಂತೇಶ ಬಿರಾದಾರ, ಪುರಸಭೆ ಸದಸ್ಯರಾದ ಡಿ. ವಿ. ಪಾಟೀಲ, ಪರಶುರಾಮ್ ತಂಗಡಗಿ, ಜೈಸಿಂಗ್ ಮೂಲಿಮನಿ, ಗಣ್ಯರಾದ ಪ್ರಕಾಶ ಹಜೇರಿ, ಸಂಗನಗೌಡ ಅಸ್ಕಿ, ಸಿಕಂದರ ವಠಾರ, ಶಶಿಧರ ಡಿಸಲೆ, ಡಿ. ಕೆ. ಪಾಟೀಲ, ಶಫೀಕ ಇನಾಮ್ದಾರ್ ಸೇರಿದಂತೆ ಗಣೇಶ ಪ್ರತಿಷ್ಠಾಪನಾ ಮಂಡಳಿಯ ಪದಾಧಿಕಾರಿಗಳು ಹಾಗೂ ಇಲಾಖೆಯ ಸಿಬ್ಬಂದಿ ಹಾಜರಿದ್ದರು.

**ವರದಿ ನಜೀರ ಅಹ್ಮದ್ ಚೋರಗಸ್ತಿ**



ಚಿತ್ರದುರ್ಗ ಭಾರತೀಯ ಜೀವ ವಿಮಾ ನಿಗಮ ಕಚೇರಿಯಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯ ಆಚರಿಸಲಾಯಿತು.




ಯಾದಗಿರಿ ಜಿಲ್ಲೆಯ ಗುರುಮಠಕಲ್ ತಾಲೂಕಿನ ಶ್ರೀ ಲಕ್ಷ್ಮೀ ತಿಮ್ಮಪ್ಪ ದೇವಸ್ಥಾನದ ವ್ಯವಸ್ಥಾಪಕರು ಹಾಗೂ ಹಿರಿಯ ಉದ್ಯಮಿಗಳು, ಶ್ರೀ ಲಕ್ಷ್ಮೀ ತಿಮ್ಮಪ್ಪ ಸಾಮೂಹ ಸಂಸ್ಥೆಗಳ ಅಧ್ಯಕ್ಷರಾದ ಶ್ರೀ ನರೇಂದ್ರ ರಾಥೋಡ್ ಅವರು ಕರುನಾಡ ಕಂದ ಪತ್ರಿಕೆಗೆ ಶುಭ ಕೋರಿದ ಸಂದರ್ಭ

# ಸುನ್ನಿ ದಾವತ –ಎ– ಇಸ್ಲಾಮಿ 2 ನೇ ವಾರ್ಷಿಕ ಇಸ್ತಮಾ ಕಾರ್ಯಕ್ರಮ



ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಕೆರೂರ ಪಟ್ಟಣದಲ್ಲಿ ದಿ. 4/8/2025 ರಂದು ಈ ಕಾರ್ಯಕ್ರಮ ಜರುಗಿತು. ಈ ಇಸ್ತಮಾದಲ್ಲಿ ಪ್ರೀತಿಯ ಗುರುಗಳಾದ ದಾಯಿಯೆ ಕಬೀರ್ ಅತಾಯೆ ಹುಜುರ್ ಮುಫ್ತಿಯೆ ಆಝುಮೆ ಹಿಂದ್ ಹಜರತ್ ಅಲ್ಲಾಮಾ ಮೌಲಾನಾ ಹಾಫಿಜ್ ವ ಕಾರೀ ಮೊಹಮ್ಮದ್ ಶಾಕಿರ್ ಅಲಿ ನೂರಿ ಸಾಹೇಬ್ ಕಿಬ್ಲಾ ಅಮೀರ ಎ ಸುನ್ನಿ ದಾವತೆ ಇಸ್ಲಾಮಿ ಮುಂಬೈ ಇವರು ಧರ್ಮದ ಬಗ್ಗೆ ಹಾಗೂ ಸರ್ವಧರ್ಮದ ಬಗ್ಗೆ ಹಿತೋಪದೇಶ ಮಾಡಿದರು.

ಈ ಇಸ್ತಮಾದಲ್ಲಿ ಮತ್ತೋರ್ವ ಗುರುಗಳಾದ ಔಲಾದೆ ಗೌಸೆ ಆಝುಮ್ ಹಜರತ್ ಅಲ್ಲಾಮಾ ಮೌಲಾನಾ ಅಲಹಜ್ ಸೈಯದ್ ಮೊಹಮ್ಮದ್ ಅಮೀನುಲ್ ಖಾದ್ರಿ ನಿಗರಾನ ಸುನ್ನಿ ದಾವತೆ ಇಸ್ಲಾಮಿ ಮಲೆಗೌಂವ ಈ ಇಸ್ತಮಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮಮಕ್ಕೆ ಮೆರಗು ತಂದರು.

ಕೆರೂರ ಪಟ್ಟಣದ ಎಲ್ಲಾ ಜಮಾತಿನ ಗುರು ಹಿರಿಯರು, ಕೆರೂರ ಪಟ್ಟಣದ ಧರ್ಮದ ಗುರುಗಳು (ಮುಫ್ತಿಸಾಹೇಬ್) ಮತ್ತು ಕೊಣ್ಣೂರ ಖಾಜಿ ಸಾಹೇಬರು, ನೌ ಜವಾನ್ ಯುವಕ ಮಿತ್ರರು, ಮಹಿಳೆಯರು, ಮುದ್ದು ಮಕ್ಕಳು, ಸುತ್ತ ಮುತ್ತಲಿನ ಗ್ರಾಮದವರು ಕಾರ್ಯಕ್ರಮದಲ್ಲಿ ಭಾಗವಸಿ ಯಶಸ್ವಿ ಗೊಳಿಸಿದರು.

**ವರದಿ. ಅಬ್ದುಲಸಾಬ ನಾಯ್ಕರ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 19
ದಿನಾಂಕ: 16-08-2025 ಪುಟಗಳು:16

# ತೇಪೆ ಕೆಲಸದಲ್ಲೇ ತೃಪ್ತಿ :ಗಡಿ ಭಾಗದ ರಸ್ತೆಗಳು ಅಧೋಗತಿ

**ಯಾದಗಿರಿ:** ಗುರುಮಠಕಲ್ ತಾಲೂಕಿನಿಂದ ಕೇವಲ ಆರು ಕಿಲೋ ಮೀಟರ್ ದೂರದಲ್ಲಿರುವ ಚಪೆಟ್ಲಾ ಗ್ರಾಮದ ರಸ್ತೆ ಸುರಿಯುವ ಸಣ್ಣ ಮಳೆಗೂ ಗುಂಡಿಗಳಲ್ಲಿ ನಿಲ್ಲುವ ನೀರಿನಿಂದ ಕೆಸರುಗದ್ದೆಯಾಗಿ ಮಾರ್ಪಾಟುಗೊಳ್ಳುತ್ತದೆ ಇದರಿಂದ ದಿನ ನಿತ್ಯ ಪ್ರಯಾಣಿಸುವ ವಾಹನ ಸವಾರರು, ಪಾದಚಾರಿಗಳ ಪರದಾಟ ಹೇಳತೀರದು.

ನೆನಪಾದಾಗೊಮ್ಮೆ ಗುಂಡಿಗಳಲ್ಲಿ ಮಣ್ಣು ಸುರಿದು ತಾತ್ಕಾಲಿಕ ತೇಪೆ ಕೆಲಸಕ್ಕೆ ಸೀಮಿತವಾದ ಅಧಿಕಾರಿಗಳ ನಡೆಯಿಂದ ಸಾರ್ವಜನಿಕರಿಗೆ ಮತ್ತಷ್ಟು ಸಂಕಷ್ಟ ಬಂದೊದಗಿದೆ.


ಇದು ಚಿತ್ತಾಪುರ – ಪುಟಪಾಕ ರಾಜ್ಯ ಹೆದ್ದಾರಿ ಹಾದು ಹೋಗುವ ತಾಲ್ಲೂಕು ಕೇಂದ್ರದಿಂದ ಹೊರಟು ಚಪೆಟ್ಲಾ, ಗಾಜರಕೋಟ ಗ್ರಾಮಗಳ ಮಧ್ಯದ 4.ಕಿ.ಮೀ ವ್ಯಾಪ್ತಿಯ ಸಂಚಾರ ಸಮಸ್ಯೆಯ ಕುರಿತು ಚಪೆಟ್ಲಾ, ಯದ್ಲಾಪುರ, ಹಿಮಾಲಪುರ, ಗಾಜರಕೋಟ ಗ್ರಾಮಸ್ಥರ ಅಸಹಾಯಕತೆ ಅಳಲು ಕೇಳುವವರಿಲ್ಲ.

ಗುರುಮಠಕಲ್ ಪಟ್ಟಣದಿಂದ ಬರುವ ಈ ರಸ್ತೆಯು ಕಾಕಲವಾರ ಅಡ್ಡರಸ್ತೆಯಿಂದ ಯದ್ಲಾಪುರ ಕ್ರಾಸ್ ವರೆಗೆ ಸುಮಾರು ನಾಲ್ಕು ಕಿ.ಮೀ.ಗೂ ಹೆಚ್ಚಿನ ದೂರದವರೆಗೆ ಸಂಪೂರ್ಣ ಹದಗೆಟ್ಟಿದೆ. ಹಿಂದೆ ಜಿಲ್ಲಾ ಮುಖ್ಯರಸ್ತೆಯಾಗಿದ್ದಾಗ ಉತ್ತಮವಾಗಿತ್ತು. ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸುವುದು ಎಂದರೆ ಕೆಸರು ಗದ್ದೆಯಂತೆ ಮಾರ್ಪಡಿಸುವುದು ಎಂದು ಈಗ ನಮಗೆ ಅರ್ಥವಾಗುತ್ತದೆ ಎಂದು ಸಾರ್ವಜನಿಕರು ವ್ಯಂಗ್ಯವಾಡಿದರು.

ಈ ರಸ್ತೆಯಲ್ಲಿ ಏನಾದರೂ ತುರ್ತು ಸಂದರ್ಭಗಳಲ್ಲಿ ಅಥವಾ ರೋಗಿಗಳನ್ನು ಆಸ್ಪತ್ರೆಗೆಂದು ಕರೆದೊಯ್ಯಲು ತೀರಾ ಕಷ್ಟವಾಗುತ್ತಿದೆ. ಸಾಮಾನ್ಯವಾಗಿ ಈ ರಸ್ತೆಯಲ್ಲಿ ವಾಹನ ಚಲಾಯಿಸುವುದೇ ಒಂದು ರೀತಿಯ ಸರ್ಕಸ್ ಮಾಡಿದಂತಿರುತ್ತದೆ, ಇನ್ನು ತುರ್ತು ಸಂದರ್ಭದಲ್ಲಿ ಈ ಮಾರ್ಗವಾಗಿ ಹೋಗುವುದು ಹೇಗೆ? ಎಂದು ಚಪೆಟ್ಲಾ, ಹಿಮಾಲಪುರ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.




**2019ರಲ್ಲಿ ಈ ರಸ್ತೆ ನಿರ್ಮಾಣ ಪೂರ್ಣಗೊಂಡಿತ್ತು. 'ಆರೇ ತಿಂಗಳಿಗೆ ರಸ್ತೆಯ ಟಾರು ಕಿತ್ತುಕೊಂಡುಹೋಗಿದೆ. ಅಲ್ಲಿಂದ ಈವರೆಗೆ ನಾವು ರಸ್ತೆ ದುರಸ್ಥಿಗಾಗಿ ಪದೇ ಪದೇ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಮಾಡುತ್ತಲೇ ಇದ್ದೇವೆ. ಕಾಟಾಚಾರಕ್ಕೆ ದುರಸ್ತಿ (ಪ್ಯಾಚ್ ವರ್ಕ್) ಮಾಡಿದ್ದರಾದರೂ, ಮಾಡಿದ ಎರಡು ವಾರಗಳಲ್ಲೇ ಮತ್ತೆ ಗುಂಡಿಗಳು ಪುನರ ಪ್ರತ್ಯಕ್ಷವಾದವು. ಪ್ಯಾಚ್ ವರ್ಕ್ ಮಾಡಿದ್ದಲ್ಲೇ ಮತ್ತೆ ವಾರದೊಪ್ಪತ್ತಿಗೆ ಗುಂಡಿ ಬೀಳುವಷ್ಟು ಕಳಪೆಮಟ್ಟದ ದುರಸ್ತಿ ಮಾಡಿ ಸಾರ್ವಜನಿಕರ ಟ್ಯಾಕ್ಸ್ ಹಣ ಕದ್ದವರು, ಸಾರ್ವಜನಿಕರ ನೆಮ್ಮದಿ ಕಸಿದಿದ್ದಾರೆ ಎನ್ನುತ್ತಾರೆ ಸ್ಥಳೀಯ ಪ್ರಜ್ಞಾವಂತರು.**



ಶ್ರೀಮತಿ ಭವ್ಯ ಸುಧಾಕರಜಗಮನೆ ಭಾವ ಸುಧೆ ಸೌರಭ ಬಳಗ ಮತ್ತು ಅಕ್ಕರೆಯ ಮಕ್ಕಳ ಅಂಗಳ (ಸಂಸ್ಥಾಪಕರು), ಶಿವಮೊಗ್ಗ ಅವರೊಂದಿಗೆ ಕರುನಾಡ ಕಂದ.

# ವಾಹನಗಳನ್ನು ಬೇಕಾಬಿಟ್ಟಿ ನಿಲ್ಲಿಸಿದರೆ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ :ಶ್ರೀಮತಿ ವೈಶಾಲಿ ಜಳಕಿ

## ಸುರಕ್ಷಿತ ಪ್ರಯಾಣಕ್ಕೆ ರಸ್ತೆಮೇಲೆ ನಿಂತ ವಾಹನಗಳನ್ನು ತೆರವುಗೊಳಿಸಿದ ಜಾಲಹಳ್ಳಿ ಆರಕ್ಷಕ ನಿರೀಕ್ಷಕರು ಶ್ರೀಮತಿ ವೈಶಾಲಿ ಜಳಕಿ.

ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿಯ ಅಂಬೇಡ್ಕರ್ ವೃತ್ತದಲ್ಲಿ ಬೇಕಾಬಿಟ್ಟಿ ನಿಲ್ಲಿಸಿದ ವಾಹನ ಚಾಲಕರಿಗೆ ತರಾಟೆಗೆ ತೆಗೆದುಕೊಂಡು ನಿಮ್ಮ ನಿಮ್ಮ ವಾಹನಗಳನ್ನು ಸಾರ್ವಜನಿಕರಿಗೆ ತೊಂದರೆ ಆಗದಂತೆ ರಸ್ತೆ ಬಿಟ್ಟು ನಿಲ್ಲಿಸಬೇಕು ಎಂದು ಎಚ್ಚರಿಕೆ ಕೊಟ್ಟರು ಇನ್ನೊಮ್ಮೆ ಹೀಗೆ ವಾಹನಗಳನ್ನು ಬೇಕಾಬಿಟ್ಟಿ ನಿಲ್ಲಿಸಿದರೆ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ತಿಳುವಳಿಕೆ ಹೇಳಿದರು.

ಕರುನಾಡ ಕಂದ ಪತ್ರಿಕೆಯ ವರದಿಗಾರರೊಂದಿಗೆ ಮಾತನಾಡಿದ ಆರಕ್ಷಕ ನಿರೀಕ್ಷಕರು ರಸ್ತೆ ಮೇಲೆ ಬೇಕಾಬಿಟ್ಟಿ ಬಿಟ್ಟಿರುವ ದನಗಳ ಬಗ್ಗೆ ಸುಮಾರು ಬಾರಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಮಾತನಾಡಿದರೂ ಅವರು ಆಯ್ತು ದನಗಳನ್ನು ಕೊಂಡವಾಡಕ್ಕೆ ಹಾಕಿಸುತ್ತೇವೆ ಎಂದು ಹೇಳುತ್ತಾರೆ ಆದರೆ ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಯಾವ ದನಗಳನ್ನೂ ಕೊಂಡವಾಡಕ್ಕೆ ಹಾಕಿಲ್ಲ ಎಂದು ಹೇಳಿದರು.

ಲಕ್ಷ ಲಕ್ಷ ಖರ್ಚು ಮಾಡಿ ಕಟ್ಟಿದ ಕೊಂಡವಾಡ ನಿರುಪಯುಕ್ತವಾಗಿದೆ ಜಾಲಹಳ್ಳಿ ಗ್ರಾಮ ಪಂಚಾಯತ ಕರವಸೂಲಿ ಹಣದಲ್ಲಿ ಕಟ್ಟಿದ ಕೊಂಡವಾಡ ಕೇವಲ ನೋಡಲು ಮಾತ್ರ ಇದೆ ಇದನ್ನು ಯಾವ ಉದ್ದೇಶಕ್ಕೆ ಸಾರ್ವಜನಿಕರ ಹಣದಿಂದ ಕಟ್ಟಿದ್ದಾರೋ ಅದಕ್ಕೆ ಉಪಯೋಗ ಆಗ್ತಿಲ್ಲ ಅಧಿಕಾರಿಗಳ ನಿರ್ಲಕ್ಷ್ಯದಿಂದ ಈ ರೀತಿ ಆಗುತ್ತಿದೆ ಎಂದು ಸಾರ್ವಜನಿಕರು ಹಿಡಿ ಶಾಪ ಹಾಕುತ್ತಿದ್ದಾರೆ.



**ವರದಿ ಶರಣು ಹುಣಸಗಿ**

# ಅಥಣಿಯ ಬಿಜೆಪಿ ಕಚೇರಿಯಲ್ಲಿ ಅದ್ದೂರಿ ಸ್ವಾತಂತ್ರ್ಯೋತ್ಸವ ದಿನಾಚರಣೆ

ಬೆಳಗಾವಿ ಜಿಲ್ಲೆಯ ಅಥಣಿ ನಗರದಲ್ಲಿ ಭಾರತೀಯ ಜನತಾ ಪಕ್ಷದ ವತಿಯಿಂದ 79ನೇ ಸ್ವಾತಂತ್ರ್ಯೋತ್ಸವದ ದಿನಾಚರಣೆಯನ್ನು ಪಕ್ಷದ ಕಚೇರಿಯಲ್ಲಿ ಧ್ವಜಾರೋಹಣ ಮಾಡಿ ಸಂಭ್ರಮದಿಂದ ಆಚರಿಸಲಾಯಿತು.

ನಂತರ ಆರ್ ಎಸ್ ಪಿ ಸಮೂಹದಲ್ಲಿ ಧ್ವಜಾರೋಹಣ ನೆರವೇರಿಸಲಾಯಿತು. ಬಳಿಕ ಮಹೇಶ್ ಕುಮಟಳ್ಳಿ ಅವರಿಂದ ಹಾಗೂ ಮಾಜಿ ಸೈನಿಕರ ಸಂಘದಿಂದ ಹುತಾತ್ಮರಾದ ಯೋಧರಿಗೆ ಗೌರವ ನಮನ ಸಲ್ಲಿಸಲಾಯಿತು. ಮತ್ತು ಇದೆ ಸಂದರ್ಭದಲ್ಲಿ ಅಥಣಿಯ ಜನಪ್ರಿಯ ಮಾಜಿ ಶಾಸಕರಾದ ಮಹೇಶ್ ಕುಮಟಳ್ಳಿ ಮಾತನಾಡಿ 23 ಹುತಾತ್ಮ ಯೋಧರಿಗೆ ಗೌರವ ನಮನ ಸಲ್ಲಿಸುವುದು ಇದು ನಮ್ಮ ಕರ್ತವ್ಯವಾಗಿದೆ ಎಂದು ಹೇಳಿದರು.



ಇದೆ ಸಂದರ್ಭದಲ್ಲಿ ಶ್ರೀ ಉಮೇಶ್ ಬಂಟೋಡ್ಕರ್, ಆರ್ ಎಸ್ ಪಿ ಸಮೂಹದ ಮುಖ್ಯಸ್ಥರಾದ ಶ್ರೀ ರವಿ ಪೂಜಾರಿ, ಭಾರತೀಯ ಜನತಾ ಪಕ್ಷದ ಅಥಣಿ ಮಂಡಲದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪುಟ್ಟು ಹಿರೇಮಠ , ಶ್ರೀ ಪ್ರಭಾಕರ್ ಚವ್ಹಾಣ್, ಶ್ರೀ ಅರವಿಂದ ವಾಗ್ಮೊಡೆ , ಶ್ರೀ ದುಂಡಿಬಾ ಮಾನೆ , ಶ್ರೀ ಗಿರೀಶ್ ಬುಟಾಳೆ, ಶ್ರೀ ರಾಜೇಂದ್ರ ಐಹೊಳೆ, ಶ್ರೀ ಗೋವಿಂದ ಗಾಡಿವಡ್ಡರ ಇನ್ನೂ ಅನೇಕ ಮಾಜಿ ಸೈನಿಕರು ಹಾಲಿ ಸೈನಿಕರು ಮತ್ತು ಬಿಜೆಪಿ ಕಾರ್ಯಕರ್ತರು ಮತ್ತು ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.

**ವರದಿಗಾರ. ವಿಠ್ಠಲ ಚೋಕಾಟಿ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 19
ದಿನಾಂಕ: 16–08–2025  ಪುಟಗಳು:16

# ಸೋಲನ್ನೇ ಸೋಲಿಸಿದ ಸಾಧಕ



ಇದು ಸ್ಪರ್ಧಾತ್ಮಕ ಯುಗ. ಪ್ರತಿಯೊಂದು ಕ್ಷೇತ್ರದಲ್ಲಿ ಸ್ಪರ್ಧೆ ಇದೆ. ಈ ಸ್ಪರ್ಧೆಯಲ್ಲಿ ಸತತ ಪರಿಶ್ರಮ , ಗೆಲ್ಲುವ ಛಲ, ನಿರಂತರ ಪ್ರಯತ್ನ ಸದಾ ಅಗತ್ಯ. ಅದಕ್ಕಿಂತ ಮುಖ್ಯವಾಗಿ ಹೋರಾಟದಲ್ಲಿ ಸೋತಾಗ, ಅಂದುಕೊಂಡಿದ್ದು ಸಾಧಿಸದೇ ಇದ್ದಾಗ ಅನಿರೀಕ್ಷಿತ ಸೋಲುಗಳು ಉಂಟಾದಾಗ ಬಹುತೇಕರು ಪ್ರಯತ್ನದಿಂದ ವಿಮುಖರಾಗುತ್ತಾರೆ. ಸಣ್ಣ ಪುಟ್ಟ ಸೋಲುಗಳಿಗೆ ಹೆದರಿ ಮತ್ತೇ ಪ್ರಯತ್ನ ಮಾಡುವ ದಾರಿಯಿಂದ ದೂರ ಸರಿಯುತ್ತಾರೆ. ಇನ್ನು ಹಲವರು ಬದುಕಿನಲ್ಲಿ ಮೊದಲ ಹೆಜ್ಜೆ ದಾಟಿ ಮೊದಲು ಗುರಿ ಸಾಧಿಸಿದ ತಕ್ಷಣ ಮತ್ತೇ ಉನ್ನತ ಸಾಧನೆ ಮಾಡಲು ಕನಿಷ್ಠ ಪ್ರಯತ್ನವನ್ನೂ ಮಾಡುವದಿಲ್ಲ. ಒಂದಲ್ಲ ಹತ್ತಾರು ಬಾರಿ ಸೋತರೂ ಮತ್ತೇ ಗೆಲ್ಲಬೇಕೆನ್ನುವ ಛಲ ಇರಬೇಕು. ಬದುಕಿನಲ್ಲಿ ಸೋಲುವುದು ಮುಖ್ಯವಲ್ಲ. ಸೋತ ನಂತರ ಮತ್ತೇ ಪ್ರಯತ್ನ ಮಾಡದೇ ಇರುವುದೇ ದೊಡ್ಡ ಹಿನ್ನಡೆ ದೊಡ್ಡ ಸೋಲು ಎನ್ನಬಹುದು. ನಮ್ಮ ಸುತ್ತ ಮುತ್ತ ಕೆಲವು ಸಾಧಕರ ಜೀವನ ಯಾತ್ರೆ ತಿಳಿದಾಗ ಸಾಧನಾ ಹಾದಿ ನೋಡಿದಾಗ ಅವರು ಹಲವು ಬಾರಿ ಸೋತು ಪುನಹ ಸೋಲನ್ನೇ ಸೋಲಿಸಿ ಗೆದ್ದವರಾಗಿದ್ದಾರೆ. ಅವರ ಪ್ರಯತ್ನ, ಸೋಲನ್ನು ಎದುರಿಸಿದ ರೀತಿ. ಸೋತಾಗಲೂ ಕುಗ್ಗದೇ ಇರುವುದು. ಮತ್ತೇ ಪ್ರಯತ್ನ ಮಾಡಿ ಗೆದ್ದಿರುವುದು ನಮಗೆ ಸದಾ ಸ್ಪೂರ್ತಿ. ಸಾಧಕರಿಗೊಂದು ಪಾಠ ಇದ್ದಂತೆ ಅಲ್ವಾ ?

2007 ರಲ್ಲಿ ಆಪಲ್ ( ಯಾಪಲ್ ) ಕಂಪನಿ ಸಿಇಒ ಸ್ಟೀವ್ ಜಾಬ್ ಹೊಸ ಐಫೋನ್ ಉಪಕರಣ ಬಿಡುಗಡೆಗೊಳಿಸಿದರು. ಜನ ಅದನ್ನು ಮುಗಿಬಿದ್ದು ಕೊಂಡರು. ಕಂಪನಿ ಕೋಟ್ಯಾಂತರ ರೂಪಾಯಿ ಲಾಭ ಗಳಿಸಿತು.ಇಷ್ಟೇ ಅಲ್ಲದೇ ಹಲವು ಗುಣಮಟ್ಟದ ಇಲೆಕ್ಟ್ರಾನಿಕ್ ವಸ್ತುಗಳ ಉತ್ಪಾದನೆಯಿಂದ ಕಂಪನಿ ಅಪಾರ ಯಶಸ್ಸು ಪಡೆಯಿತು. ಈ ಯಶಸ್ಸಿಗೆ ಸಿಇಒ ಸ್ಟೀವ್ ಜಾಬ್ ಪಾತ್ರ ಮುಖ್ಯವಾದುದು. ಇವರು ಈ ಗೆಲವು ಸಾಧಿಸುವ ಮುನ್ನ ಹಲವಾರು ಸೋಲು, ನೋವು ಎದುರಿಸಿದ್ದು ಇಲ್ಲಿ ಕಾಣಬಹುದು. 1955 ರಲ್ಲಿ ಸ್ಟೀವ್ ಜಾಬ್ ಕ್ಯಾಲಿಫೋನಿರ್ಯಾದಲ್ಲಿ ಜನಿಸಿದ್ದು. ಹೆತ್ತ ತಾಯಿಯೇ ಈ ಮಗು ತನಗೆ ಬೇಡವೆಂದು ದೂರ ಮಾಡಿದಳು. ಈ ಮಗು ಬೇರೆಯವರ ಆಶ್ರಯದಲ್ಲಿ ಬೆಳೆಯಿತು. ಈ ಯುವಕ ಓದುವಾಗ ಶಾಲೆ ಫೀ ಕಟ್ಟದಷ್ಟು ಬಡತನ ಅದಕ್ಕಾಗಿ ಕೋಕ್ ಪೇಯದ ಖಾಲಿ ಬಾಟಲಿಗಳನ್ನು ಮಾರಾಟ ಮಾಡಿ ಬಂದ ಲಾಭಾಂಶದಲ್ಲಿ ತನ್ನ ಓದಿನ ಖರ್ಚನ್ನು ನಿಭಾಯಿಸಿಕೊಳ್ಳುತ್ತಿದ್ದನು. ರೂಮಿನಲ್ಲಿ ಹಣ ಕಟ್ಟುವುದಕ್ಕೆ ಆಗದೇ ಗೆಳೆಯರ ಜೊತೆ ಇರುತ್ತಿದ್ದನು. ಪ್ರತಿಭಾನುವಾರ ಹರೇಕೃಷ್ಣ ದೇವಾಲಯದಲ್ಲಿ ನೀಡುವ ಪ್ರಸಾದ ಸೇವನೆಗಾಗಿ ಏಳು ಮೈಲು ನಡೆಯುತ್ತಿದ್ದನು. ದಿನಕಳೆದಂತೆ ಕಾಲೇಜು ಖರ್ಚು ನಿಭಾಯಿಸಲು ಆಗದೇ ಕಲಿಯುವುದು ಮೊಟಕುಗೊಳಿಸಿ ಉದ್ಯೋಗ ಮಾಡಲು ನಿರತರಾದರು. ಮುಂದೆ 1976 ರಲ್ಲಿ ತನ್ನ ಇಪ್ಪತ್ತನೆಯ ವಯಸ್ಸಿನಲ್ಲಿ ತಮ್ಮ ಗೆಳೆಯ ವೋಜ್ನಿಯಾಕ ನೊಂದಿಗೆ ಸೇರಿ ಕಂಪ್ಯೂಟರಗಳನ್ನು ತಯಾರಿಸುವ ಕಂಪನಿ ಸ್ಥಾಪಿಸಿದನು. ಅಲ್ಲಿಯವರೆಗೆ ದೊಡ್ಡದಾದ ಗಾತ್ರ ಹೊಂದಿರುವ ಕಂಪ್ಯೂಟ–ರಗಳ ಗಾತ್ರ ಕಡಿಮೆ ಮಾಡಿ ವ್ಯಕ್ತಿಗಳು ಸರಳವಾಗಿ ತಮ್ಮ ಬಳಿ ಇಟ್ಟುಕೊಳ್ಳಲು ಸಹಕಾರಿಯಾಗುವಂತೆ ಒಂದೆಡೆಯಿಂದ ಇನ್ನೊಂದೆಡೆ ಒಯ್ಯಲು ಸಹಕಾ–ರಿಯಾಗುವಂತೆ ಕಂಪ್ಯೂಟರ್ ಅಭಿವೃದ್ಧಿ ಪಡಿಸಿದರು. ತಮ್ಮದೇಯಾದ ಕಂಪನಿ ಸ್ಥಾಪಿಸಲು ಸಾಲ ಮಾಡಿದರು ತಮ್ಮ ಬಳಿಯಿದ್ದ ವಸ್ತುಗಳನ್ನು ಮಾರಿದರು. ಆರಂಭದಲ್ಲಿ ಇವರು ತಯಾರಿಸಿದ ಕಂಪ್ಯೂಟರಗಳು ಹೆಚ್ಚು ಲಾಭ ತರಲಿಲ್ಲ. ಆದರೂ ಎದೆಗುಂದದೇ ಮತ್ತೇ ಅದರಲ್ಲಿಯೇ ಹೊಸತನ ತಂದು ಮೆಕಿಂಟಾಷ್ ಪಿಸಿ ಬಿಡುಗಡೆ ಮಾಡಿದರು. ಇದು ಕಂಪನಿಗೆ ಅಪಾರ ಪ್ರಮಾಣದ ಲಾಭ ತಂದುಕೊಟ್ಟಿತು. ನಂತರ ಸ್ಟಿವ್ ಜಾಬ್ ತನ್ನದೇ ಕಂಪನಿಗೆ ಜಾನ್ ಸ್ಕಲೀ ಎಂಬಾತನನ್ನು ಸಿಇಒ ಮಾಡಿದನು. ಮುಂದೆ ಇವರಿಬ್ಬರ ನಡುವೆ ವಿಚಾರಗಳಲ್ಲಿ ಭಿನ್ನಾಭಿಪ್ರಾಯ ಬೆಳೆದ ಪರಿಣಾಮ ಕಟ್ಟಿದ ಸಾಮ್ರಾಜ್ಯದಿಂದ ಸ್ಟೀವ್ ಜಾಬ್ ನನ್ನು ಹೊರಹಾಕಲಾಯಿತು. ಆಗ ಸ್ಟೀಬ್ ಜಾಬ್ ಅವರಿಗೆ ಆದ ಅವಮಾನ ನೋವು ಅಷ್ಟಿಷ್ಟಲ್ಲ. ಮತ್ತೇ ಆ ನೋವಿಗೆ ಎದೆಗುಂದದೆ ಕೆಲ ವರ್ಷಗಳ ನಂತರ ನೆಕ್ಸ್ಟ್‌ಸ್ಟೆಪ್ ಹಾಗೂ ಪಿಕ್ಸರ್ ಎನ್ನುವ ಎರಡು ಹೊಸ ಕಂಪನಿ ಸ್ಟೀವ್ ಜಾಬ್ ಹುಟ್ಟುಹಾಕಿದನು. ನೆಕ್ಸ್ಟ್‌ಸ್ಟೇಪ್ ಕಂಪನಿ ಅಷ್ಟೊಂದು ಲಾಭ ತಂದುಕೊಡದ್ದಿದ್ದರೂ ಪಿಕ್ಸರ್ ಮತ್ತೇ ಕೈಹಿಡಿಯಿತು. ಕೋಟಿ ಕೋಟಿ ರೂಪಾಯಿಗಳ ವಹಿವಾಟು ನಡೆಸಿತು. ಮತ್ತೇ ಫಿನಿಕ್ಸ್ ಪಕ್ಷಿಯಂತೆ ಸ್ಟೀವ್ ಜಾಬ್ ಉದ್ಯಮ ಕ್ಷೇತ್ರದಲ್ಲಿ ಬೆಳೆದು ನಿಂತನು. ಇತ್ತ ಆಪಲ್ ಕಂಲನಿ ನಷ್ಟ ಅನುಭವಿಸಿತು. ನೆಕ್ಸ್ಟ್‌ಸ್ಟೇಪ್ಸ್ ಕಂಪನಿ ಜೊತೆ ವಿಲೀನವಾಯಿತು. ನಂತರ ಸ್ಟೀಬ್ ಜಾಬ್ ಆರೋಗ್ಯದಲ್ಲಿ ಏರುಪೇರಾಯಿತು. ಮೇದೋಜೀರಕ ಗ್ರಂಥಿಯ ಕ್ಯಾನ್ಸರ್ ತಗುಲಿತು. ಹೀಗೆ ಸೋಲು , ಅವಮಾನ , ನೋವು ಎಲ್ಲವನ್ನೂ ಅನುಭವಿಸಿ ಮತ್ತೇ ಗೆಲುವಿನ ದಡಕ್ಕೆ ಸ್ಟೀವ್ ಸೇರುತ್ತಿದ್ದರು. ಇವರ ಹೋರಾಟದ ಬದುಕು ನಮಗೆಲ್ಲಾ ಸದಾ ಸ್ಪೂರ್ತಿ.

**–ರಂಗನಾಥ ಎನ್ ವಾಲ್ಮೀಕಿ**

# ಸನ್ಮಾನದ ಮಾನ ಕಳೆಯದಿರೋಣ!

ಇತ್ತೀಚಿಗೆ ಸಮಾಜದಲ್ಲಿ ಸಾಧಿಸುವವರಿಗಿಂತ ವೇದಿಕೆಯ ಮೇಲಿನ ಸಾಧಕರ ಸಂಖ್ಯೆಯ ಹೆಚ್ಚಾಗುತ್ತಿದೆ. ಜವರಿಗಿಂತ ಹಣದ ದೇವರ ಕುಣಿತದ ರಭಸವೆ ಜಾಸ್ತಿಯಾಗಿದೆ. ಸನ್ಮಾನವೆಂಬುವುದು ಸಂಘಟಕರ, ಆಯೋಜನೆಗೆ ಆದ–ಾಯವಾಗಿ ರೂಪಾಂತರಗೊಳ್ಳುತ್ತಿದೆ. ನಿಜ ಸಾಧಕರು ಸನ್ಮಾನಿತರ ಮುಂದೆ ಸಣ್ಣವರಾಗುತ್ತಿದ್ದಾರೆ. ಇದು ಸದ್ಯದ ಸಣ್ಣ ವಸ್ತುಸ್ಥಿತಿ.

ಹಿಂದೆ ವೇದಿಕೆಯ ಮೇಲೆ ಬೆರಳೆಕೆಯಷ್ಟು ಸಾಧಕರು ಕಾಣುತ್ತಿದ್ದರು, ಒಂದೊಂದು ಕ್ಷೇತ್ರದಿಂದ ಒಬ್ಬೊಬ್ಬ ಸಾಧಕನನ್ನು ಹತ್ತಾರು ಮನಸುಗಳಿಂದ ಮಥಿಸಿ, ಆರಿಸಿ, ಸೋಸಿ ಇಂಥವರಿಗೆ ಸನ್ಮಾನಿಸಿದರೆ ಜನಮನ ಮೆಚ್ಚುವದೆಂದು, ಹತ್ತಾರು ನಿರ್ಣಾಯಕರು ಅಳದು ತೂಗಿ ಪ್ರತಿಕ್ಷೇತ್ರದಿಂದಲೂ ಒಬ್ಬೊಬ್ಬ ಸಾಧಕರನ್ನು ಗುರುತಿಸಿ ವೇದಿಕೆಯ ಆಹ್ವಾನವನ್ನು ಗೌರವಯುತವಾಗಿ ನೀಡುತ್ತಿದ್ದರು. ಹಾಗೂ ಅವರಿಗೆ ವಿಶೇಷವಾದ ಸ್ಥಾನವನ್ನು, ಗೌರವವನ್ನು ನೀಡಲಾಗುತ್ತಿತ್ತು. ವೇದಿಕೆಯ ಮೇಲೆ ಒಬ್ಬಬ್ಬರನ್ನೇ ಅವರ ಸಾಧನೆಯನ್ನು ಇಡೀ ವೇದಿಕೆಯ ಮೇಲಿರುವ, ಮುಂದಿರುವ ಜನತೆಗೆ ಪರಿಚಯಿಸುತ್ತಾ ಹಿರಿಯರಿಂದ ಸನ್ಮಾನಿಸಲಾಗುತ್ತಿತ್ತು. ಇಂಥಃ ಸಾಧಕರಿಗೆ ಸಮಾಜವೂ ಕೂಡಾ ಅಷ್ಟೇ ಗೌರವ ನೀಡುತ್ತಿತ್ತು.

ಒಂದು ದಶಕದಿಂದೀಚೆಗೆ ಸಾಧಕರ, ಸನ್ಮಾನಿಸುವವರ ಮನೋ ಧೋರಣೆಯೇ ಬದಲಾಗಿದೆ. ಸಂಘಟನೆಗಳು ಸಾಧಕರನ್ನುಗುರುತಿಸುವಪರಿಯೇಸಂಪೂರ್ಣಬದಲಾಗಹತ್ತಿದೆ. ಅವರನ್ನು ಸನ್ಮಾನಿಸಿ ಅವರಿಗೆ ನಾವು ಬೇಕಾಗಬೇಕು ಎನ್ನುವ ಪರಿ, ಹಾಗೂ ಸಮಾಜದಲ್ಲಿ ದೊಡ್ಡವರೆನಿಸಿಕೊಳ್ಳುವ ಹಂಬಲ ಒಂದಡೆಯಾದರೆ, ಸನ್ಮಾನಿಸಿಕೊಳ್ಳುವ ಹಪಾಹಪಿತನದ ಮನಗಳು ಹೆಚ್ಚಾಗುತ್ತಿವೆ. ತಮ್ಮ ಸಾಧನೆ ಏನೆಂಬುವುದು ಅರಿಯದೆ...! ಸನ್ಮಾನಿಸಿಕೊಳ್ಳಬೇಕೆಂಬುವುದು ಇಂದು ಎಲ್ಲೆಡೆ ತಲೆ ಎತ್ತುತ್ತಿದೆ. ಕಾರ್ಯಕ್ರಮದ ಆಯೋಜನೆಗೆ ಹಣ ನೀಡಿದವರೂ ಕೂಡ ಸಾಧಕರಾಗುತ್ತಿದ್ದಾರೆ. ಹಾಗೂ ಇಂತಿಷ್ಟು ಸಾಧಕರಿಗೆ ಸನ್ಮಾನಿಸುವ ಲೆಕ್ಕಾಚಾರವನ್ನು ಇಟ್ಟುಕೊಂಡು ಇಷ್ಟು ಜನರಿಗೆ ನಮ್ಮ ಅವಧಿಯಲ್ಲಿ ಸನ್ಮಾನಿಸಿದೆವು ಎಂಬ ಹೆಗ್ಗಳಿಕೆಗೆ ಕಾರಣವಾಗುತ್ತಿದೆ ಕೂಡಾ. ಇಂಥಃ ಸಣ್ಣ...!ಮಾನಳಿಗೆ ಕಾರಣವಾಗುತ್ತಿದೆ.

ಇಂದು ಜಾತಿ ಧರ್ಮದ ಬೇರು ಗಟ್ಟಿಗೊಳ್ಳುತ್ತಿದೆ.



ಉನ್ನತವಾದ ಹುದ್ದೆಗಳನ್ನು ಪ್ರಬಲವಾದ ಜಾತಿಗಳು ಆವ–ರಿಸಿಕೊಳ್ಳುತ್ತಿವೆ. ಅವನು ಆ ಹುದ್ದೆಗೆ, ಆ ಕ್ಷೇತ್ರಕ್ಕೆ ಅರ್ಹತೆ ಇರದಿದ್ದರೂ ಕೂಡ ಜಾತಿಯ ಪ್ರಭಾವದಿಂದ ಆ ಹುದ್ದೆಯನ್ನು ಪಡೆದುಕೊಳ್ಳುತ್ತಿದ್ದಾರೆ. ಹಾಗೂ ತಮ್ಮ ತಮ್ಮ ಜಾತಿಯಲ್ಲಿಯೇ ಹೆಚ್ಚು ಹೆಚ್ಚು ಕಾರ್ಯಚಟುವಟಿಕೆ ಮಾಡಲು ತೊಡಗಿಕೊಳ್ಳುತ್ತಾರೆ. ತಮ್ಮ ಜಾತಿಯವರನ್ನೇ ಸನ್ಮಾನಿಸುವುದು ಮುಖ್ಯ ಉದ್ದೇಶವಾದರೆ. ಇತರ ಕೆಲವು ಜನರಿಗೆ ಹಣ ನೀಡುವ ಆಯೋಜಕರನ್ನು ಸನ್ಮಾನಿಸುವ ಒಂದು ಮಹಾದಾಶೆಯನ್ನು ಹೊಂದಿ, ಇಂತಹ ಕಾರ್ಯಗಳಿಗೆ ಕೈ ಹಾಕುತ್ತಾರೆ.

ಇನ್ನು ಸನ್ಮಾನಿಸುವ ಬಗೆಯಂತೂ ಹೇಳತೀ–ರದು. ಅವಸರವಸರವಾಗಿ ಹತ್ತಾರು ಸಾಧಕರನ್ನು ಏಕಕಾಲಕ್ಕೆ ವೇದಿಕೆಯ ಮೇಲೆ ಕೂಡಿಸಿ ಅವಸರವಸರವಾಗಿ ಸಾಲು ಸನ್ಮಾನ ಪತ್ರಗಳನ್ನು ನೀಡಿ ಫೋಟೋಗೆ ಪೋಜು ನೀಡಿದರೆ ಅವರನ್ನು ಸನ್ಮಾನಿಸುವ ಪರಿ ಮುಗಿಯಿತೆಂದೆ ಅರ್ಥ. ಸಾಧಕನ ಕೈಗೊಂದು ಶಾಲು, ಪ್ರಶಸ್ತಿ ಪತ್ರ, ನೆನಪಿನ ಕಾಣಿಕೆ ಕೈಗಿಟ್ಟು ವೇದಿಕೆಯಿಂದ ಅವನನ್ನು ನಿರ್ಗಮಿಸುತ್ತಾರೆ.

ಈಗಂತೂ ಸನ್ಮಾನಿಸುವುದು ಒಂದು ಫ್ಯಾಶನ್ ಆಗಿದೆ. ಇಂದು ಯಾವುದೋ ಒಂದು ಹುದ್ದೆಗೆ ನಾಮ ನಿರ್ದೇಶನವಾದರೂ ಸನ್ಮಾನ. ಯಾವುದೇ ಒಂದು ಹುದ್ದೆಗೆ ಆಯ್ಕೆಯಾದರೂ ಸನ್ಮಾನ, ಯಾವುದೇ ಒಂದು ಕಾರ್ಯಕ್ರಮಕ್ಕೆ ಸಹಾಯ ಸಹಕಾರ ಅಥವಾ ದೈಹಿಕವಾಗಿ ಅವರೇ ಅಲ್ಲಿ ಪಾಲ್ಗೊಂಡಿದ್ದರೂ ಸನ್ಮಾನ. ಸನ್ಮಾನ... ಸನ್ಮಾನ ಎಂಬ ಪರಿ ಈಗ ಸಾಮಾನ್ಯವಾಗಿದೆ. ಸನ್ಮಾನಕ್ಕೆ ಬೆಲೆ ಮೌಲ್ಯವೇ ಇಲ್ಲದಂತಾಗಿದೆ. ಇದರಿಂದ ಸಂಘಟಕರು ತಮ್ಮ ಕಾರ್ಯಗಳನ್ನು ಸರಳವಾಗಿ ಮುಗಿಸಿಕೊಂಡು ಹೋಗಬೇಕಾದರೆ ಈ ಸನ್ಮಾನವೆಂಬ ಮಂತ್ರವನ್ನು ಪಠಿಸುತ್ತಲೇ ಇರುತ್ತಾರೆ.

ಅಕ್ರಮ ಹಾದಿಯಿಂದ ಆಯ್ಕೆಗೊಂಡ ಕೆಲವೊಂದಿಷ್ಟು ಮಂದಿ ವರ್ಷಾನುಗಟ್ಟಲೆ ಸನ್ಮಾನಿಸಿಕೊಳ್ಳುತ್ತಲೇ ಇರುತ್ತಾರೆ. ಹಾಗೂ ಅವರ ಆಯ್ಕೆಯಲ್ಲಿ ಸಹಕರಿಸಿದ ಸದಸ್ಯರಿಗಂತು ಋಣ ಮುಕ್ತರಾಗಲೆಂದು ಮಹಾ ಸಂಭ್ರಮವನ್ನೇ ಏರ್ಪಡಿಸಿ, ಸಾಮೂಹಿಕ ಸನ್ಮಾನವೆಂಬುದು ಈಗ ಎಲ್ಲೆಡೆ ಚಾಲ್ತಿಗೆ ಬರುತ್ತಿದೆ. ಇನ್ನು ಕೆಲವೊಂದಿಷ್ಟು ಕಾರ್ಯಕ್ರಮಗಳು ಸನ್ಮಾನಿಸುವುದನ್ನೆ ಮುಖ್ಯ ಉದ್ದೇಶವನ್ನಿಟ್ಟುಕೊಂಡು, ಇತರೆ ಕಾರ್ಯಕ್ರಮಗಳನ್ನು ಅದರ ಜೊತೆಗೆ ಜೋಡಿಸಿಕೊಂಡು, ಸನ್ಮಾನಿಸಿಕೊಳ್ಳುವವರ ಒಂದು ದೊಡ್ಡ ಪಟ್ಟಿಯನ್ನೇ ಮಾಡಿಕೊಂಡಿರುವುದನ್ನು ನಾವು ಅಲ್ಲಲ್ಲಿ ಕಾಣಬಹುದಾಗಿದೆ. ಸನ್ಮಾನಿಸುವುದು ಅವಶ್ಯಕವೋ, ಅನವಶ್ಯಕವೋ ಎಂಬುದನ್ನು ಮೊದಲು ಸನ್ಮಾನಿಸುವವರು ಅರಿತುಕೊಳ್ಳಬೇಕು. ಸನ್ಮಾನಕ್ಕೂ ಕೂಡ ಅದರದೇ ಆದ ಒಂದು ಗೌರವವಿದೆ. ಆ ಗೌರವಕ್ಕೆ ತಕ್ಕಂತೆ ಸಾಧಕರನ್ನು ಗುರುತಿಸಿ, ಅಳೆದು, ತೂಗಿ ಆಯ್ಕೆ ಮಾಡಿ ಅವರಿಗೆ ಗೌರವನ್ನ ನೀಡಿ ಸನ್ಮಾನಿಸಿದರೆ, ಮುಂದೆ ಸಾಧಿಸಬೇಕೆನ್ನುವವರಿಗೆ ಅದು ಸ್ಪೂರ್ತಿಯಾಗುತ್ತದೆ. ಅಂದಾಗ ಸಾಧಿಸುವವರಿಗೆ ಕೂಡ ಒಂದು ಛಲ ಬಲ ಹುಟ್ಟುತ್ತದೆ. ಇಲ್ಲದಿದ್ದರೆ ಸನ್ಮಾನಗಳು ದುಡ್ಡು ಕೊಟ್ಟರು ಸಿಗುತ್ತವೆ, ಅವರ ಬಾಲ ಬಡಿದರೂ ಸಿಗುತ್ತವೆ, ಎನ್ನುವ ರೀತಿಗೆ ಬಂದು ನಿಂತು, ಸನ್ಮಾನಿಸಿದವರಿಗೂ ಸನ್ಮಾನ ಪಡೆದವರಿಗೂ ಕೂಡ ಒಂದು ಬೆಲೆ ಇಲ್ಲದಂತಾಗುತ್ತದೆ.

ಆದ್ದರಿಂದ ಸನ್ಮಾನದ ಮಾನ ಕಳೆಯದೆ, ಸನ್ಮಾನಕ್ಕೆ ಹಾಗೂ ಆಯೋಜಕರಿಗೆ ಗೌರವ ಸಿಗಬೇಕೆಂದರೆ ಸನ್ಮಾನಕ್ಕೆ ಗೌರವ ನೀಡಲು ಕೇವಲ ಒಬ್ಬರಾದರೆ ಸಾಕು. ಗೌರವಯುತವಾಗಿ ಸನ್ಮಾನದ ಮಾನ ಉಳಿಸಲು ಪ್ರಯತ್ನಿಸೋಣ...

**–ಯಲ್ಲಪ್ಪ ಮಲ್ಲಪ್ಪ ಹರ್ನಾಳಗಿ.**

ಕರುನಾಡ ಕಂದ
ಸಂಪುಟ 04 । ಸಂಚಿಕೆ 19
ದಿನಾಂಕ: 16–08–2025 ಪುಟಗಳು:16

# ನಿರ್ಮಾಣಗೊಂಡ ಒಂದೇ ತಿಂಗಳಲ್ಲಿ ಸಿ.ಸಿ ರಸ್ತೆ ಬಿರುಕು : ಶುರುವಾಯಿತು ದುರಸ್ತಿ ಕಾರ್ಯ

## ಪಟ್ಟಣದ ನೀರು ಸರಬರಾಜು ಪೈಪ್ ಲೈನ್ ಹಾನಿ, ನೀರು ಪೋಲು.

**ಯಾದಗಿರಿ/ಗುರುಮಠಕಲ್:** ಪಟ್ಟಣದ ಮುಖ್ಯ ಸಿ. ಸಿ. ರಸ್ತೆ ಬಸ್ ನಿಲ್ದಾಣದಿಂದ ಶರಣು ಹೋಟೆಲ್ ವರೆಗೆ ಅಂದಾಜು ಎರಡು ಕೋಟಿ ವೆಚ್ಚದಲ್ಲಿ ಕೆ. ಕೆ. ಆರ್. ಡಿ. ಬಿ ಯೋಜನೆ ಅಡಿಯಲ್ಲಿ ನಿರ್ಮಾಣ, ಫೆಬ್ರವರಿ ತಿಂಗಳಿನಲ್ಲಿ ಅಡಿಗಲ್ಲು ಸಮಾರಂಭ, ಏಪ್ರಿಲ್ ತಿಂಗಳಲ್ಲಿ ಕಾಮಗಾರಿ ಪ್ರಾರಂಭ, ಜೂನ್ ತಿಂಗಳ ಕೊನೆಯವರೆಗೆ ಕಾಮಗಾರಿ ಮುಕ್ತಾಯ, ಜುಲೈ ತಿಂಗಳಲ್ಲಿ ಅಲ್ಲಲ್ಲಿ ರಸ್ತೆ ಬಿರುಕು ಬಿದ್ದು ನೀರಿನ ಪೈಪ್ ಸೋರಿಕೆ ಪೋಲಾಗುತ್ತಿರುವ ನೀರು.

ಕೋಟ್ಯಾಂತರ ರೂಪಾಯಿ ಖರ್ಚುಮಾಡಿ ಪಟ್ಟಣದ ಜನರ ಅನುಕೂಲಕ್ಕಾಗಿ ಸುಸಜ್ಜಿತ ರಸ್ತೆ ನಿರ್ಮಾಣ ಮಾಡಿ ಕೇವಲ ತಿಂಗಳು ಕಳೆಯುವ ಹೊತ್ತಿಗೆ ನೀರಿನ ಪೈಪ್ ದುರಸ್ತಿ, ಮುಂಬರುವ ಒಳಚರಂಡಿ ದುರಸ್ತಿಗೆ ಮುಚ್ಚಳಗಳನ್ನೂ ತೆಗೆಯಲು ಸಹ ಮತ್ತೆ ಹಾಕಿರುವ ಸಿ.ಸಿ ರಸ್ತೆ ಒಡೆದು ದುರಸ್ತಿ ಮಾಡಬೇಕಾದ ಪರಿಸ್ಥಿತಿಗೆ ಬಂದಿರುವುದು ವಿಪರ್ಯಾಸ.

ಈ ಕುರಿತು ರಸ್ತೆ ಬಿರುಕು ಹಾಗೂ ಅಲ್ಲಿಂದ ಕುಡಿಯುವ ನೀರು ಪೋಲಾಗುತ್ತಿರುವ ಸಮಸ್ಯೆ ಬಗ್ಗೆ ಪ್ರತಿಕ್ರಿಯೆ ನೀಡಿದ ಗುರುಮಠಕಲ್ ಪುರಸಭೆ ಕಾರ್ಯಾಲಯದ ಕಿರಿಯ ಸಹಾಯಕ ಅಭಿಯಂತರು ಅಬ್ದುಲ್ ಅಲಿಮ್ ಪೈಪ್ ಲೈನ್ ಹಾಳಾಗಿರುವ ಕುರಿತು ಮಾಹಿತಿ ಪಡೆದಿದ್ದೇವೆ, ನಮಗೆ ಅದು ನೀರಿನ ಪೈಪ್ ಅಥವಾ ಒಳಚರಂಡಿ ಪೈಪ್ ಎನ್ನುವದು ನೋಡಿ ದುರಸ್ಥಿ ಕೆಲಸ ಮಾಡುವುದಾಗಿ ತಿಳಿಸಿದ್ದಾರೆ.

ನಮ್ಮ ಭಾಗದ ರಸ್ತೆ, ಕುಡಿಯುವ ನೀರು, ಶಿಕ್ಷಣ ವ್ಯವಸ್ಥೆ, ವೈದ್ಯಕೀಯ ಸೌಲಭ್ಯ, ಇಲ್ಲಿನ ಜನರು ಗುಳೆ ಹೋಗುವದು ನಿಲ್ಲುವುದು ಯಾವಾಗ ಎನ್ನುವುದು ಯಕ್ಷ ಪ್ರಶ್ನೆ?

ವರದಿ: ಜಗದೀಶ್ ಕುಮಾರ್ ಭೂಮಾ








“ ರಸ್ತೆ ಕಾಮಗಾರಿ ಮುಗಿದು ತಿಂಗಳು ಮಾತ್ರ ಕಳೆದಿದೆ ರಸ್ತೆ ನಿರ್ಮಾಣದ ಸಮಯದಲ್ಲ ಅಧಿಕಾರಿಗಳು ಸರಿಯಾದ ಪರಿವೀಕ್ಷಣೆ ಮಾಡದ ಕಾರಣ ರಸ್ತೆ ಕೆಳಗೆ ಹಾಕಿರುವ ಪೈಪ್ ಹಾಳಾಗಿರುವ ಸಾಧ್ಯತೆ ಇದೆ, ಇದರಿಂದಾಗಿ ಸಿ. ಸಿ ರಸ್ತೆ ಹಾಳಾಗಿ ಹೋಗುತ್ತಿರುವುದು ಒಂದು ಕಡೆ ಆದರೆ ಇನ್ನೊಂದು ಕಡೆ ಸಾರ್ವಜನಿಕರಿಗೆ ಕಲುಷಿತ ಮಿಶ್ರಿತವಾದ ನೀರು ಸರಬರಾಜು ಆಗುತ್ತಿದೆ ಏನೋ ಎಂಬುವ ಅನುಮಾನ ಇದೆ “.

- ಶ್ರೀಕಾಂತ್ ತಲಾರಿ.







KARUNADA KANDA Fourthnightly, Printed by, Published by, owned by KARIBASAPPA BALIGAR and Printed at Nikhil offset Printers Ward No 23, Buddha Circle, Hosalli main Road, Gangavati 583227.Tq-Gangavati, Dist:Koppal, and Published at : # 94,at-Post-Gunnal, Tq-Yalaburga,Dst-Koppal,pin-583237,PH:9986366909, 9742776385 Editor-KARIBASAPPA BALIGAR